# ಅಭಿವೃದ್ಧಿ ಕಾರ್ಯಕ್ರಮಗಳು

## ಗ್ರಾಮ ಪಂಚಾಯಿತಿ ಸದಸ್ಯರ ತರಬೇತಿ ಕೈಪಿಡಿ

**ಹಂತ 1**

*ಸಾಹಿತ್ಯ ರಚನೆ*
ಎಂ.ಸಿ. ಶೈಲಜ
ವಿಲ್‌ಫ್ರೆಡ್ ಡಿ'ಸೋಜಾ
ಸಿ.ಎಸ್. ವಸುಂಧರಾದೇವಿ
ಎಸ್. ತುಕಾರಾಂ
ಡಾ॥ ಮೀನಾಕ್ಷಿ ಬಾಳಿ
ಎಸ್. ಜನಾರ್ದನ್

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ**
ಲಲಿತ ಮಹಲ್ ರಸ್ತೆ, ಮೈಸೂರು



**"ABHIVRIDHI KARYAKRAMAGALU"** A Training handbook for newly elected GP members, edited by Smt. Shylaja, Faculty and Sri Wilfred D'Souza, Consultant, ANSSIRD, Mysore, published by S.A. Ashraful Hasan, Director, ANSSIRD, Mysore

Pages: 68 + iv + 4

Second Edition: 2010 - 80500 copies

Copyright: ANSSIRD, Mysore

Cover Page Design and Illustration: N. Anilkumar, Chamarajanagar

Concept: Wilfred D'Souza, Consultant

DTP & Layout: Sheela HL & T Rekha

Printed at: Kamal Impressions, Mysore

**ತಜ್ಞರ ಸಮಿತಿ**

**ಡಾ॥ ಅಮಿತ ಪ್ರಸಾದ್,** ಭಾ.ಆ.ಸೇ., ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು
**ಶ್ರೀ ಎಸ್.ಎ. ಅಶ್ರಫುಲ್ ಹಸನ್,** ನಿರ್ದೇಶಕರು, ಅನಸಾರಾಗ್ರಾ ಸಂಸ್ಥೆ, ಮೈಸೂರು
**ಡಾ॥ ಮೀನಾಕ್ಷಿ ಬಾಳಿ,** ಪ್ರಾಧ್ಯಾಪಕರು, ಎಂ.ಎಸ್.ಐ. ಪದವಿ ಕಾಲೇಜು, ಗುಲ್ಬರ್ಗ
**ಪ್ರೊ. ಹೆಚ್.ಎಲ್. ಕೇಶವಮೂರ್ತಿ,** ಬರಹಗಾರರು, ಮಂಡ್ಯ
**ಶ್ರೀ ಎಸ್. ತುಕಾರಾಂ,** ಸಹ ಸಮನ್ವಯಾಧಿಕಾರಿ, ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು
**ಶ್ರೀಮತಿ ವಸುಂಧರಾ ದೇವಿ,** ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು
**ಶ್ರೀ ಎಫ್.ಸಿ. ಚೇಗರೆಡ್ಡಿ,** ಕಾರ್ಯದರ್ಶಿ, ಭಾರತ ಜ್ಞಾನ ವಿಜ್ಞಾನ ಸಮಿತಿ–ಕರ್ನಾಟಕ, ಬೆಂಗಳೂರು
**ಶ್ರೀ ಎಸ್. ಜನಾರ್ದನ,** ಮಾಜಿ ಅಧ್ಯಕ್ಷರು, ಮರವಂತೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ
**ಶ್ರೀಮತಿ ಎಂ.ಸಿ. ಶೈಲಜ,** ಬೋಧಕರು, ಅನಸಾರಾಗ್ರಾ ಸಂಸ್ಥೆ, ಮೈಸೂರು
**ಶ್ರೀ ವಿಲ್‌ಫ್ರೆಡ್ ಡಿ'ಸೋಜಾ,** ಸಲಹೆಗಾರರು, ಅನಸಾರಾಗ್ರಾ ಸಂಸ್ಥೆ, ಮೈಸೂರು



# ಮೊದಲ ಮಾತು

**ನ**ಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ ದೇಶ. ಪ್ರಜಾಪ್ರಭುತ್ವದಲ್ಲಿ ಪಂಚಾಯಿತಿ ರಾಜ್ ವ್ಯವಸ್ಥೆಗೆ ಹೆಚ್ಚಿನ ಮಹತ್ವವಿದೆ. ಪಂಚಾಯಿತಿ ರಾಜ್ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಬುನಾದಿ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಪಂಚಾಯಿತಿ ರಾಜ್ ವ್ಯವಸ್ಥೆ ಸಂವಿಧಾನದ 73ನೇ ತಿದ್ದುಪಡಿಗಿಂತಲೂ ಮುಂಚಿತವಾಗಿ ಬೇರುಬಿಟ್ಟಿರುವುದು ನಮಗೆಲ್ಲ ತಿಳಿದಿರುವ ವಿಚಾರ. 1987ರಿಂದ 1992ರ ಅವಧಿಯಲ್ಲಿ ಕರ್ನಾಟಕದಲ್ಲಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಜಾರಿಯಲ್ಲಿತ್ತು. ಎರಡು ಹಂತಗಳ ಈ ವ್ಯವಸ್ಥೆ ಅಧಿಕಾರ ವಿಕೇಂದ್ರೀಕರಣದ ದಾರಿಯಲ್ಲಿ ದೇಶಕ್ಕೆ ಮಾದರಿಯಾಗಿತ್ತು. ಇದನ್ನು ಗಮನಿಸಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ತರಲಾಯಿತು. ಸಂವಿಧಾನದ 73ನೇ ತಿದ್ದುಪಡಿಯ ನಂತರ ದೇಶದಾದ್ಯಂತ ಮೂರು ಹಂತಗಳ ಪಂಚಾಯಿತಿ ರಾಜ್ ವ್ಯವಸ್ಥೆ ಜಾರಿಗೆ ಬಂದಿದೆ.

ಸಂವಿಧಾನದ 73ನೇ ತಿದ್ದುಪಡಿಯ ಆಧಾರದಲ್ಲಿ ಕರ್ನಾಟಕ ಪಂಚಾಯಿತಿ ರಾಜ್ ಕಾಯಿದೆಯನ್ನು 1993ರಲ್ಲಿ ಜಾರಿಗೆ ತರಲಾಯಿತು. ನಂತರದಲ್ಲಿ ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಗಳಿಗೆ ನಾಲ್ಕು ಅವಧಿಗೆ ಚುನಾವಣೆಗಳು ನಡೆದಿವೆ. ನಾಲ್ಕನೇ ಅವಧಿಯ ಚುನಾಯಿತ ಪ್ರತಿನಿಧಿಗಳು ಪ್ರಸಕ್ತ ಗ್ರಾಮ ಪಂಚಾಯಿತಿಗಳ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ಆಶಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಯತ್ನಗಳನ್ನು ಮಾಡುತ್ತಿವೆ. ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರಗಳು ಮತ್ತು ಕಾರ್ಯಕ್ರಮಗಳನ್ನು ವರ್ಗಾಯಿಸಲಾಗುತ್ತಿದೆ. ಕಾರ್ಯಕ್ರಮಗಳಿಗೆ ಅನುಗುಣವಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ರಾಷ್ಟ್ರೀಯ ಮಹತ್ವದ ಪ್ರಮುಖ ಕಾರ್ಯಕ್ರಮಗಳ ಅನುಷ್ಠಾನದ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗಿದೆ. ಪ್ರಮುಖವಾಗಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಂಪೂರ್ಣ ಸ್ವಚ್ಛತಾ ಕಾರ್ಯಕ್ರಮ, ಇತ್ಯಾದಿ ಕಾರ್ಯಕ್ರಮಗಳು ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನಗೊಳ್ಳುತ್ತಿವೆ. ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ನೂತನ ಗ್ರಾಮ ಪಂಚಾಯಿತಿ ಸದಸ್ಯರುಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಗ್ರಾಮೀಣಾಭಿವೃದ್ಧಿಯ ದೃಷ್ಟಿಯಿಂದ ಇದು ಇಂದಿನ ತುರ್ತು ಅವಶ್ಯಕತೆ ಎಂದರೆ ತಪ್ಪಲ್ಲ.

ಈ ನಿಟ್ಟಿನಲ್ಲಿ ಅವರನ್ನು ಸಜ್ಜುಗೊಳಿಸಲು ತರಬೇತಿಯ ಅವಶ್ಯಕತೆಯಿದೆ. ಕರ್ನಾಟಕ ಸರ್ಕಾರವು ನೂತನ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ತರಬೇತಿಯನ್ನು ನೀಡುವ ಹೊಣೆಗಾರಿಕೆಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ವಹಿಸಿದೆ. ಈ ಹೊಣೆಗಾರಿಕೆಯನ್ನು ನಿಭಾಯಿಸುವ ನಿಟ್ಟಿನಲ್ಲಿ ಸಂಸ್ಥೆ ಈಗಾಗಲೇ ಸಿದ್ಧತೆಗಳನ್ನು ನಡೆಸಿದೆ. ನೂತನ ಗ್ರಾಮ ಪಂಚಾಯಿತಿ ಸದಸ್ಯರಿಗೆ ನಾಲ್ಕು ಹಂತಗಳಲ್ಲಿ ಒಟ್ಟು 11 ದಿನಗಳ ಅವಧಿಯ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಮೊದಲ ಹಂತದಲ್ಲಿ ಗ್ರಾಮ ಸರ್ಕಾರದ ಪ್ರಮುಖರಾಗಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳನ್ನು ಒಳಗೊಂಡ ತಂಡಕ್ಕೆ ಮೂರು ದಿನಗಳ ಮುಖಾಮುಖಿ ತರಬೇತಿಯನ್ನು ರಾಜ್ಯದ ಎಲ್ಲಾ 176 ತಾಲ್ಲೂಕುಗಳಲ್ಲಿ ಆಗಸ್ಟ್ 2010ರಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಮುಂದುವರಿಕೆಯಾಗಿ ಉಳಿದ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಪಗ್ರಹ ಆಧಾರಿತ ತರಬೇತಿಯನ್ನು 2010ರ ಅಕ್ಟೋಬರ್ ಮಾಹೆಯಿಂದ ಆರಂಭಿಸಲಾಗುತ್ತಿದೆ. ತರಬೇತಿಯಲ್ಲಿ ಭಾಗವಹಿಸುವ ನೂತನ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಹೆಚ್ಚುವರಿ ಮಾಹಿತಿಯನ್ನು ಒದಗಿಸಲು ಮೂರು ಕೈಪಿಡಿಗಳನ್ನು ಸಂಸ್ಥೆಯಿಂದ ಸಿದ್ಧಪಡಿಸಲಾಗಿದೆ. ಈ ಕೈಪಿಡಿಗಳಲ್ಲಿರುವ ಮಾಹಿತಿಯನ್ನು ಬಳಸಿಕೊಂಡು ಗ್ರಾಮ ಪಂಚಾಯಿತಿಗಳನ್ನು ಯಶಸ್ಸಿನ ದಾರಿಯಲ್ಲಿ ಮುನ್ನಡೆಸುವಲ್ಲಿ ನೂತನ ಸದಸ್ಯರು ಯಶಸ್ವಿಯಾದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ.

**ಎಸ್.ಎ. ಅಶ್ರಫುಲ್ ಹಸನ್**
ನಿರ್ದೇಶಕರು

**ಡಾ॥ ಅಮಿತ ಪ್ರಸಾದ್** ಭಾ.ಆ.ಸೇ.
ಮಹಾ ನಿರ್ದೇಶಕರು



# ಪರಿವಿಡಿ

ಪುಟ ಸಂಖ್ಯೆ


ಅಭಿವೃದ್ಧಿಗಾಗಿ ಸಮನ್ವಯ ........ 1–5

ಅಭಿವೃದ್ಧಿ ಯೋಜನೆಗಳ ಪರಿಚಯ ........ 6

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ........ 7–18

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ ........ 19–20

ಸ್ವಚ್ಛ ಗ್ರಾಮ ........ 21–23

ಸಂಪೂರ್ಣ ನೈರ್ಮಲ್ಯ ಆಂದೋಲನ ........ 24–26

ಸರ್ವ ಶಿಕ್ಷಣ ಅಭಿಯಾನ ........ 27–35

ಸಾಕ್ಷರ ಭಾರತ್ ಕೇಂದ್ರ ಸರಕಾರದ ಕಾರ್ಯಕ್ರಮ ........ 36–39

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ........ 40–46

ಗ್ರಾಮೀಣ ವಸತಿ ಯೋಜನೆಗಳು ........ 47–58

ಭಾಗ್ಯಲಕ್ಷ್ಮಿ ಯೋಜನೆ ........ 59

ವಿಕೋಪಗಳ ನಿರ್ವಹಣೆ – ಗ್ರಾಮ ಪಂಚಾಯಿತಿಯ ಪಾತ್ರ ........ 60–64

ಕೇಂದ್ರ ಹಣಕಾಸು ಆಯೋಗದ ಅನುದಾನ ........ 65–68




# ಅಭಿವೃದ್ಧಿಗಾಗಿ ಸಮನ್ವಯ

**ಗ್ರಾ**ಮ ಪಂಚಾಯಿತಿ ಒಂದು ಪ್ರಜಾತಂತ್ರೀಯ ವ್ಯವಸ್ಥೆ. ಅದರ ನಿರ್ವಹಣೆಯನ್ನು ಜನರಿಂದ ಆಯ್ಕೆಯಾಗುವ ಪ್ರತಿನಿಧಿಗಳು ಮತ್ತು ನಿಯಮಾನುಸಾರ ನೇಮಕಗೊಳ್ಳುವ ಸಿಬ್ಬಂದಿಗಳು ಸೇರಿ ನಡೆಸಬೇಕು. ಅದರ ಉದ್ದೇಶ ಆಡಳಿತದ ಸುಗಮ ನಿರ್ವಹಣೆ ಮತ್ತು ಹೆಚ್ಚಿನ ಅಭಿವೃದ್ಧಿ ಸಾಧನೆ. ಇವುಗಳನ್ನು ಕಾಯಿದೆ, ನಿಯಮಾವಳಿ ಮತ್ತು ಸರ್ಕಾರ ಕಾಲಕಾಲಕ್ಕೆ ರೂಪಿಸುವ ಧೋರಣೆ ಮತ್ತು ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ನಡೆಸಬೇಕು. ಹಾಗೆ ಮಾಡುವಾಗ ವ್ಯವಸ್ಥೆಯಲ್ಲಿರುವ ಹುದ್ದೆಗಳಿಗೆ ಆಯ್ಕೆಯಾಗಿರುವ ವ್ಯಕ್ತಿಗಳು ಚಲಾಯಿಸಬೇಕಾದ ಅಧಿಕಾರ ಮತ್ತು ನಿರ್ವಹಿಸಬೇಕಾದ ಹೊಣೆಗಳನ್ನು ಅತ್ಯಂತ ಸ್ಪಷ್ಟವಾಗಿ ನಿಗದಿಗೊಳಿಸಲಾಗಿದೆ. ಇದರ ಉದ್ದೇಶ ಸರಳವಾಗಿದೆ.

- ಒಂದು ಹುದ್ದೆ ಇನ್ನೊಂದನ್ನು ಅತಿಕ್ರಮಿಸಬಾರದು.
- ಒಂದು ಇನ್ನೊಂದಕ್ಕೆ ಪೂರಕವಾಗಿರಬೇಕು.
- ಹುದ್ದೆಗಳು ಮತ್ತು ಅಧಿಕಾರಿಗಳ ನಡುವೆ ಸರಿಯಾದ ಸಂಬಂಧ ಮತ್ತು ಸಮನ್ವಯ ಇರಬೇಕು.

ಈ ಎಲ್ಲ ಮಾತುಗಳು ಗ್ರಾಮ ಪಂಚಾಯಿತಿಗೂ ಅನ್ವಯವಾಗುತ್ತವೆ. ಅದರ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳಲ್ಲಿರುವವರು, ಮುಖ್ಯವಾಗಿ ಅದರ ಆಡಳಿತದ ಸೂತ್ರ ಹಿಡಿಯುವ ಅಧ್ಯಕ್ಷ, ಉಪಾಧ್ಯಕ್ಷ, ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು ತಮ್ಮ ಪಾತ್ರಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಪರಸ್ಪರ ಹೊಂದಾಣಿಕೆಯ ನೆಲೆಯಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುವುದು ಹೇಗೆ ಎಂಬ ಅರಿವನ್ನು ಹೊಂದಿರಬೇಕು. ಹಾಗೆ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಹೊಣೆಗಳನ್ನು ಸ್ಥೂಲವಾಗಿ ಆಂತರಿಕ ಮತ್ತು ಬಾಹ್ಯ ಎಂಬುದಾಗಿ ವರ್ಗೀಕರಿಸಬಹುದು.

## 1. ಆಂತರಿಕ ಕಾರ್ಯ ನಿರ್ವಹಣೆ

- **ಸಭೆಗಳ ನಿರ್ವಹಣೆ:** ಗ್ರಾಮ ಪಂಚಾಯಿತಿಗಳ ಪ್ರಕಾರ್ಯಗಳೆಲ್ಲ ನಡೆಯುವುದು ಅವುಗಳು ಕಾಲಕಾಲಕ್ಕೆ ನಡೆಸುವ ವಿವಿಧ ಸಭೆಗಳ ಮೂಲಕ. ಆದುದರಿಂದ ಗ್ರಾಮ ಸಭೆ, ಪಂಚಾಯಿತಿ ಸಾಮಾನ್ಯ ಸಭೆ, ಸ್ಥಾಯಿ ಸಮಿತಿಗಳ ಮತ್ತು ಅನ್ಯ ಉಪ ಸಮಿತಿಗಳ ಸಭೆಯನ್ನು ನಿಯತಕಾಲಿಕವಾಗಿ ಏರ್ಪಡಿಸಬೇಕು. ಸಭೆಗಳ ದಿನ, ಸಮಯ ಮತ್ತು ಕಾರ್ಯಸೂಚಿಗಳನ್ನು ನಿಗದಿಗೊಳಿಸಬೇಕಾದ ಹೊಣೆ ಅಧ್ಯಕ್ಷರದು. ಆದರೆ ಅದಕ್ಕೆ ಅಗತ್ಯ ಆಡಳಿತಾತ್ಮಕ ಬೆಂಬಲ ನೀಡಬೇಕಾದ ಕರ್ತವ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿಗಳದು. ಅವರು ಸಾಕಷ್ಟು ಪೂರ್ವಭಾವಿಯಾಗಿ



ಅಧ್ಯಕ್ಷರೊಂದಿಗೆ ಚರ್ಚಿಸಿ ದಿನ, ಸಮಯ, ಕಾರ್ಯಸೂಚಿ ನಿಗದಿಗೊಳಿಸಿಕೊಂಡು ಸಭೆ ಸೇರಿಸಲು ಅಗತ್ಯವೆನಿಸುವ ಕ್ರಮ ಕೈಗೊಳ್ಳಬೇಕು. ಹಾಗೆಯೇ ಸಭೆಯ ಅಧ್ಯಕ್ಷತೆ ವಹಿಸಿ, ಅದನ್ನು ನಿಯಮಾನುಸಾರ, ಶಿಸ್ತುಬದ್ಧವಾಗಿ ನಿರ್ವಹಿಸಬೇಕಾದವರು ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ ಅದರಲ್ಲಿ ಉಪಸ್ಥಿತರಿದ್ದು, ಸಭೆಯ ನಡವಳಿಗಳನ್ನು ದಾಖಲಿಸುವ, ಸಭಾ ಕಾರ್ಯಕಲಾಪಗಳಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ ನೀಡುವ ಕೆಲಸಮಾಡಬೇಕು. ಸಭೆಗಳಲ್ಲಿ ಸ್ವೀಕರಿಸಲಾದ ಎಲ್ಲಾ ಶಾಸನಬದ್ಧ ನಿರ್ಣಯಗಳನ್ನು ಮತ್ತೆ ಕಾರ್ಯರೂಪಕ್ಕೆ ತರಬೇಕಾದ ಕರ್ತವ್ಯ ಅಭಿವೃದ್ಧಿ ಅಧಿಕಾರಿಗಳಿಗೆ ಸೇರಿದ್ದು.

- **ವಾರ್ಷಿಕ ಆಯವ್ಯಯ ಪತ್ರ ಮತ್ತು ಕ್ರಿಯಾ ಯೋಜನೆ:** ಆಯವ್ಯಯ ಮತ್ತು ಕ್ರಿಯಾ ಯೋಜನೆ ತಯಾರಿ ಗ್ರಾಮ ಪಂಚಾಯಿತಿಯ ಸಾಮೂಹಿಕ ಹೊಣೆಗಾರಿಕೆಯಾಗಿದೆ. ಹಿಂದಿನ ವರ್ಷಗಳ ವಾಸ್ತವ ಆಯ ಮತ್ತು ವ್ಯಯ, ಅದರ ಹಿನ್ನೆಲೆಯಲ್ಲಿ ಮುಂದಿನ ವರ್ಷದಲ್ಲಿ ನಿರೀಕ್ಷಿಸಬಹುದಾದ ಆದಾಯ ಮತ್ತು ವೆಚ್ಚಗಳ ವಿವರವಿರುವ ವಾರ್ಷಿಕ ಆಯವ್ಯಯ ಪತ್ರವನ್ನು ತಯಾರಿಸಬೇಕು. ಅದಕ್ಕೆ ತಾಲೂಕು ಪಂಚಾಯಿತಿನಿಂದ ಮಂಜೂರಾತಿ ಪಡೆಯಬೇಕು. ಬಳಿಕ ಅದರಲ್ಲಿ ವಿವಿಧ ಶೀರ್ಷಿಕೆಗಳಡಿ ನಿಗದಿಗೊಳಿಸಲಾದ ವ್ಯಯದ ಮೊತ್ತವನ್ನು ಗಣನೆಗೆ ತೆಗೆದುಕೊಂಡು ತಯಾರಿಸಬೇಕಾದ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಈ ಕಾರ್ಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಬೇಕಾದವರು ಅಧ್ಯಕ್ಷರು, ಉಪಾಧ್ಯಕ್ಷರು, ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ. ಅವುಗಳನ್ನು ರೂಪಿಸುವ ಹಂತದಲ್ಲಿ ಅವರೆಲ್ಲ ಒಟ್ಟು ಸೇರಿ ವಿಷಯವನ್ನು ಅರ್ಥಮಾಡಿಕೊಂಡು ಅಂತಿಮ ತೀರ್ಮಾನಕ್ಕೆ ಬರಬೇಕು. ಆ ಬಳಿಕ ಅವುಗಳನ್ನು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅದರ ಒಪ್ಪಿಗೆ ಪಡೆಯಬೇಕಾಗುತ್ತದೆ. ಈ ಕೆಲಸದಲ್ಲಿ ಮೇಲೆ ಹೇಳಿದ ಪದಾಧಿಕಾರಿಗಳ ನಡುವೆ ಸೂಕ್ತ ಸಮನ್ವಯದ ಅಗತ್ಯವಿದೆ.

- **ಸಭೆಗಳ ನಿರ್ಣಯಗಳ ಅನುಷ್ಠಾನ:** ಇದನ್ನು ಮುಖ್ಯವಾಗಿ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಸಿಬ್ಬಂದಿ ನಿರ್ವಹಿಸುತ್ತಾರೆ. ಆದರೆ ಅದರ ಮೇಲೆ ಕಣ್ಣಿಟ್ಟು, ಅವಧಿಬದ್ಧವಾಗಿ ಅದು ಕಾರ್ಯಗತವಾಗುವಂತೆ ನೋಡಿಕೊಳ್ಳುವ ಹೊಣೆಯನ್ನು ಪ್ರಧಾನ ಕಾರ್ಯ ನಿರ್ವಾಹಕರಾದ ಅಧ್ಯಕ್ಷರು ಮಾಡಬೇಕು. ಈ ಕೆಲಸದ ಯಶಸ್ಸು ಈ ಎರಡು ವರ್ಗಗಳ ನಡುವಿನ ನಿಕಟ ಸಂಬಂಧವನ್ನು, ಅವರು ಆ ಬಗ್ಗೆ ಆಗಾಗ ನಡೆಸುವ ಮಾತುಕತೆ ಮತ್ತು ಕೈಗೊಳ್ಳುವ ತೀರ್ಮಾನಗಳನ್ನು ಅವಲಂಬಿಸಿರುತ್ತದೆ. ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ, ಸಹಕಾರ ಇದ್ದರೆ ಮಾತ್ರ ಸಭೆಗಳ ನಿರ್ಣಯಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತವೆ.



- **ಅರ್ಜಿಗಳು ಮತ್ತು ದೂರುಗಳ ನಿರ್ವಹಣೆ:** ಗ್ರಾಮ ಪಂಚಾಯತಿಗಳಿಗೆ ವಿವಿಧ ಕಾರಣಗಳಿಗಾಗಿ ಸಾರ್ವಜನಿಕರು ಅರ್ಜಿ, ಅಹವಾಲು ಮತ್ತು ದೂರುಗಳನ್ನು ಸಲ್ಲಿಸುತ್ತಾರೆ. ಅವುಗಳಲ್ಲಿ ಕೆಲವು ಅಧಿಕಾರಿ ವರ್ಗ ತಮ್ಮ ಹಂತದಲ್ಲೇ ನಿರ್ವಹಿಸಹುದು. ಆದರೆ ಪಂಚಾಯತಿಯ ತೀರ್ಮಾನ ಅಗತ್ಯವಿರುವ ಮಹತ್ವದ ಅರ್ಜಿಗಳ ಮತ್ತು ಗಂಭಿರ ಸ್ವರೂಪದ ದೂರುಗಳ ನಿರ್ವಹಣೆಯನ್ನು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಅಧಿಕಾರಿಗಳು ಸೇರಿ ಪರಿಶೀಲಿಸಿ ಮಾಡಬೇಕು. ಹೀಗೆ ಮಾಡುವುದರಿಂದ ಅವುಗಳಿಗೆ ಪರಿಣಾಮಕಾರಿ ಪರಿಹಾರ ದೊರಕಿಸಿಕೊಡಲು ಸಾಧ್ಯವಾಗುತ್ತದೆ.

- **ಕರ ಆಕರಣೆ, ನಿರ್ಧರಣೆ, ಪರಿಷ್ಕರಣೆ ಮತ್ತು ಸಂಗ್ರಹ:** ಕರ ಆಕರಣೆ, ಪರಿಷ್ಕರಣೆ ಮತ್ತು ಸಂಗ್ರಹಕ್ಕೆ ಪಂಚಾಯಿತಿ ರಾಜ್ ಅಧಿನಿಯಮ ಮತ್ತು ನಿಯಮಾವಳಿಗಳಲ್ಲಿ ಸ್ಪಷ್ಟ ನಿರ್ದೇಶನಗಳಿವೆ. ಅವುಗಳನ್ನು ಪಂಚಾಯಿತಿಗಳು ಸಮರ್ಪಕವಾಗಿ ಮಾಡಬೇಕು. ಒಂದು ಗ್ರಾಮ ಪಂಚಾಯಿತಿಯ ಶಕ್ತಿ ಅದರ ಸಂಪನ್ಮೂಲ. ಅದರ ವೃದ್ಧಿ ಮತ್ತು ಸಂಗ್ರಹದತ್ತ ಅದು ನಿರಂತರ ಶ್ರಮಿಸುತ್ತಿರಬೇಕು. ಆದರೆ ಸಾಮಾನ್ಯವಾಗಿ ಈ ಮಹತ್ವದ ವಿಷಯವನ್ನು ಜನಪ್ರತಿನಿಧಿಗಳಾದವರು ಕಡೆಗಣಿಸುತ್ತಾರೆ. ಇದು ಕೇವಲ ಸಿಬ್ಬಂದಿಯ ಹೊಣೆ ಎಂಬ ನಿಲುವು ತಾಳುತ್ತಾರೆ. ಅದರಿಂದಾಗಿ ಪಂಚಾಯಿತಿಯ ಒಟ್ಟು ಸಾಧನೆ ಕ್ಷೀಣವಾಗುತ್ತದೆ. ಹಾಗಾಗದಿರಬೇಕಾದರೆ ಅದರಲ್ಲಿ ಅಧ್ಯಕ್ಷ, ಉಪಾಧ್ಯಕ್ಷರು, ಅಧಿಕಾರಿ ಮತ್ತು ಸಿಬಂದಿಗಳು ಸಕ್ರಿಯರಾಗಿ ತೊಡಗಿಸಿಕೊಳ್ಳಬೇಕು, ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು. ತೆರಿಗೆ ಕುರಿತಾಗಿ ಸಾಮಾನ್ಯವಾಗಿ ಎದುರಾಗುವ ಆಕ್ಷೇಪಗಳನ್ನು, ಅಡೆತಡೆಗಳನ್ನು ಎಲ್ಲರೂ ಒಟ್ಟಾಗಿ ಎದುರಿಸಿದರೆ, ಜನರ ಮನ ಪರಿವರ್ತನೆ ಸಾಧ್ಯವಾಗುತ್ತದೆ. ಸಂಪನ್ಮೂಲ ಕ್ರೋಢೀಕರಣ ಕಾರ್ಯ ಸುಗಮವಾಗುತ್ತದೆ.

- **ಸಿಬ್ಬಂದಿ ವಿರುದ್ಧದ ದೂರು ನಿರ್ವಹಣೆ:** ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಎಸಗಿದಾಗ, ಅಧಿಕಾರ ದುರುಪಯೋಗಪಡಿಸಿಕೊಂಡಾಗ ಸಕಾಲದಲ್ಲಿ ಗಮನಿಸಿ ಎಚ್ಚರಿಕೆ ನೀಡಬೇಕು. ತಿದ್ದಿಕೊಳ್ಳಲು ತಿಳಿಸಬೇಕು. ಅದು ವಿಫಲವಾದಾಗ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕು. ಈ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ನಡುವೆ ಒಮ್ಮತ ಏರ್ಪಡಬೇಕು. ಪಂಚಾಯಿತಿ ಸಿಬ್ಬಂದಿಗಳ ವಿರುದ್ಧ ಬರುವ ದೂರುಗಳನ್ನು ಸಂಬಂಧಿಸಿದ ಎಲ್ಲ ಸೇರಿ ನಿರ್ವಹಿಸಿದರೆ ಅವುಗಳಿಗೆ ಸುಲಭ ಪರಿಹಾರ ಸಾಧ್ಯವಾಗುತ್ತದೆ. ತಪ್ಪುಗಳ ಪುನರಾವರ್ತನೆ ಕಡಿಮೆಯಾಗುತ್ತದೆ.



## 2. ಬಾಹ್ಯ ಹೊಣೆ ನಿರ್ವಹಣೆ

- **ದುರಸ್ತಿ ಕಾರ್ಯಗಳು:** ಪಂಚಾಯಿತಿ ವ್ಯಾಪ್ತಿಯ ರಸ್ತೆ, ಚರಂಡಿ, ನೀರು ಹರಿವಿನ ಮಾರ್ಗ, ಕೆರೆ, ಬಾವಿ, ಕುಡಿಯುವ ನೀರಿನ ಅನ್ಯ ಮೂಲಗಳು, ಪೂರೈಕೆ ಮಾರ್ಗಗಳು, ದಾರಿದೀಪ ಮೊದಲಾದ ನಾಗರಿಕ ಸೌಲಭ್ಯಗಳು ಆಗಾಗ ಹಾಳಾಗುತ್ತವೆ. ಅವುಗಳನ್ನು ತಕ್ಷಣ ಸುಸ್ಥಿತಿಗೆ ತರುವ ಕೆಲಸದಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಅಗತ್ಯ. ಅವುಗಳತ್ತ ಗಮನವಿಡುವ, ಅವುಗಳನ್ನು ಪರಿಶೀಲಿಸುವ, ಸಂಬಂಧಿಸಿದವರ ಗಮನಕ್ಕೆ ತರುವ ಕೆಲಸವನ್ನು ಎಲ್ಲರೂ ಮಾಡಬೇಕು. ಕೈಗೆತ್ತಿಕೊಳ್ಳಬೇಕಾದ ಪರಿಹಾರೋಪಾಯಗಳ ಬಗೆಗೆ ಪರಸ್ಪರ ಚರ್ಚಿಸಿ ಕ್ರಮ ಕೈಗೊಳ್ಳಬೇಕು. ಇಂತಹ ಕೆಲಸದಲ್ಲಿ ಜವಾಬ್ದಾರಿಗಳನ್ನು ಮೊದಲೇ ಹಂಚುವ ಮೂಲಕ ಎಲ್ಲ ಸದಸ್ಯ, ಸಿಬ್ಬಂದಿಗಳ ಸೇವೆಯನ್ನು ತಪ್ಪದೇ ಬಳಸಿಕೊಳ್ಳಬೇಕು.

- **ಕಾಮಗಾರಿಗಳ ನಿರ್ವಹಣೆ:** ಪಂಚಾಯಿತಿಯ ಅಧೀನ ನಡೆಯುವ ವಿವಿಧ ಕಾಮಗಾರಿಗಳ ಕುರಿತಾದ ಪೂರ್ಣ ಮಾಹಿತಿ ಸಂಬಂಧಿಸಿದ ಎಲ್ಲರಿಗೆ ಇರುವಂತೆ ನೋಡಿಕೊಳ್ಳಬೇಕು. ಅವು ಆರಂಭವಾಗುವ ವಿಚಾರವನ್ನು ಅವರ ಗಮನಕ್ಕೆ ತರಬೇಕು. ಅಧ್ಯಕ್ಷ ಮತ್ತು ಅಭಿವೃದ್ಧಿ ಅದಿಕಾರಿ ಹಾಗೂ ಸಂಬಂಧಪಟ್ಟವರು ಕಾಮಗಾರಿಗಳ ಗುಣಮಟ್ಟದ ಮೇಲೆ ಸದಾ ನಿಗಾ ಇಟ್ಟಿರಬೇಕು. ಕೆಲಸ ಪ್ರಗತಿಯಲ್ಲಿರುವಾಗ ಇಂಜಿನಿಯರ್‌ರನ್ನೂ ಆಗಾಗ ಕರೆಸಿಕೊಂಡು ಅವರ ಅಭಿಪ್ರಾಯ ಮತ್ತು ಮಾಗದರ್ಶನ ಪಡೆಯಬೇಕು. ಒಂದು ಹಂತದ ಕೆಲಸ ಮುಗಿದ ಬಳಿಕ ಗುಣಮಟ್ಟದ ಬಗ್ಗೆ ತಕರಾರು ನಡೆಸುವುದರಿಂದ ಕಾಮಗಾರಿಗೆ ತಡೆಯಾಗುತ್ತದೆ; ಕೆಲವೊಮ್ಮೆ ನಿಂತೇ ಹೋಗುತ್ತದೆ. ಹಾಗಾಗದಂತೆ ನಿರಂತರ ಕಣ್ಗಾವಲು ಅಗತ್ಯ. ಎಲ್ಲ ಮುಗಿದ ಬಳಿಕ ಇಂಜಿನಿಯರ್ ಅಳತೆ ಮಾಡುತ್ತಾರೆ. ಅಧ್ಯಕ್ಷರು ಮರು ಅಳತೆ ಮಾಡುತ್ತಾರೆ. ಇಲ್ಲಿಯೂ ಅಧಿಕಾರಿಗಳು ಅವರೊಂದಿಗಿದ್ದು, ಅವರಿಗೆ ಎಲ್ಲ ಸಹಕಾರ, ಸಲಹೆ ನೀಡಬೇಕು.

- ವಿವಿಧ ಉದ್ದೇಶಗಳಿಗಾಗಿ ಸ್ಥಳ ಪರಿಶೀಲನೆ ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಸ್ಥಳಕ್ಕೆ ಯಾರಾದರೊಬ್ಬರು ಹೋಗುವ ಬದಲಿಗೆ ಒಬ್ಬರಿಗಿಂತ ಹೆಚ್ಚು ಮಂದಿ ಒಟ್ಟಿಗೆ ಹೋಗುವುದು ಒಳಿತು. ಆಗ ಪರಿಸ್ಥಿತಿಯನ್ನು ಹೆಚ್ಚು ಸಮರ್ಥವಾಗಿ ಅರಿತುಕೊಳ್ಳಲು, ಸಂಬಂಧಿಸಿದವರೊಡನೆ ವ್ಯವಹರಿಸಲು ಸಾಧ್ಯವಾಗುತ್ತದೆ. ಅಗತ್ಯ ಸಂದರ್ಭದಲ್ಲಿ ಜನರ ಮನವೊಲಿಸಲು ಮತ್ತು ಅಗತ್ಯ ತೀರ್ಮಾನ ಮತ್ತು ಕ್ರಮ ಕೈಗೊಳ್ಳಲು ಸುಲಭವಾಗುತ್ತದೆ.

- ಹೇಗೆ ಪಂಚಾಯಿತಿಗೆ ಸಂಬಂಧಿಸಿದ ವ್ಯಕ್ತಿಗಳ ನಡುವೆ ಸುಮಧುರ ಸಂಬಂಧ, ಸಮನ್ವಯ ಅಗತ್ಯವೋ ಹಾಗೆಯೇ ಪಂಚಾಯಿತಿಯ ಹೊರಗಿನ ಸಂಘಟನೆಗಳೊಂದಿಗೆ ಮತ್ತು ವ್ಯಕ್ತಿಗಳೊಂದಿಗೆ



ಉತ್ತಮ ಬಾಂಧವ್ಯ ಬೆಸೆಯುವ ಪ್ರಯತ್ನ ನಡೆಯಬೇಕು.

- ಪಂಚಾಯತಿಯ ಅಧೀನದಲ್ಲಿದ್ದೂ ಹೊರಗೆ ಕೆಲಸ ಮಾಡುವ ವಿವಿಧ ಸಮಿತಿಗಳ ಸದಸ್ಯರೊಂದಿಗೆ
- ಸರ್ಕಾರಿ ವ್ಯವಸ್ಥೆಯ ಇತರೆ ಇಲಾಖೆಗಳೊಂದಿಗೆ
- ಸ್ವಸಹಾಯ ಸಂಘಗಳೊಂದಿಗೆ




ಪಂಚಾಯಿತಿಯ ಎಲ್ಲರೂ, ಮುಖ್ಯವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು ಸ್ನೇಹಪೂರ್ಣ ಸಂಬಂಧವಿರಿಸಿಕೊಳ್ಳಬೇಕು. ಇದರಿಂದ ಪಂಚಾಯಿತಿಯ ದೈನಂದಿನ ಮತ್ತು ವಿಶೇಷ ಚಟುವಟಿಕೆಗಳನ್ನು ಸುಗಮವಾಗಿ, ಸುಲಲಿತವಾಗಿ ನಡೆಸಲು ಸಾಧ್ಯವಾಗುತ್ತದೆ.

ಇವೆಲ್ಲದರ ಒಟ್ಟು ಸಾರಾಂಶವೆಂದರೆ ಪಂಚಾಯಿತಿಯ ಕೆಲಸ ಅಂತಿಮವಾಗಿ ಮನುಷ್ಯ–ಮನುಷ್ಯರ ನಡುವಿನ ಸಂಬಂಧದ ಕೆಲಸ. ಈ ಮಾತು ಪಂಚಾಯಿತಿಯ ಆಂತರಿಕ ಕಾರ್ಯಗಳಿಗೆ ಅನ್ವಯವಾದಷ್ಟೇ ಸಮನಾಗಿ ಬಾಹ್ಯ ಕಾರ್ಯಗಳಿಗೂ ಅನ್ವಯವಾಗುತ್ತದೆ. ಆದುದರಿಂದ ಅದರ ಎಲ್ಲ ವ್ಯವಹಾರಗಳನ್ನು ಮಾನವೀಯ ಸಂಬಂಧ, ಸಮನ್ವಯದ ನೆಲೆಯಲ್ಲಿ ನಡೆಸುವುದರಿಂದ ಪರಸ್ಪರ ಅಸಮಾಧಾನ, ಅಸಹನೆ, ಅಸಂತುಷ್ಟಿ ಮತ್ತು ಸಂಘರ್ಷಗಳಿಂದ ಮುಕ್ತವಾಗಿ, ಉದ್ದೇಶ ಸಾಧನೆಯಲ್ಲಿ ಗರಿಷ್ಠ ಯಶಸ್ಸು ಗಳಿಸಬಹುದು.



# ಅಭಿವೃದ್ಧಿ ಯೋಜನೆಗಳ ಪರಿಚಯ

ಸರ್ಕಾರದಿಂದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಜಾರಿಯಾಗುತ್ತವೆ. ಅವುಗಳು ತಳಹಂತದ ಜನರಿಗೆ ತಲುಪಬೇಕು. ಸೌಲಭ್ಯಗಳು ತಲುಪದವರಿಗೆ ತಲುಪಬೇಕು. ಬಡತನ, ನಿರುದ್ಯೋಗ, ಅನಕ್ಷರತೆಗಳು ನಿವಾರಣೆಯಾಗಬೇಕು. ಸಕಾಲಕ್ಕೆ ಸರ್ಕಾರದ ಸೌಲಭ್ಯಗಳು ಜನರನ್ನು ತಲುಪುವುದರಿಂದ ಜನರ ಜೀವನ ಗುಣಮಟ್ಟ ಸುಧಾರಿಸುತ್ತದೆ. ಇದರಿಂದ ಕುಟುಂಬಗಳು ಮತ್ತು ಸಮುದಾಯದ ಜೀವನ ಗುಣಮಟ್ಟವು ಸಹ ಸುಧಾರಣೆಯಾಗುತ್ತದೆ. ಕಾಲಕಾಲಕ್ಕೆ ಸರ್ಕಾರದ ಸೌಲಭ್ಯಗಳು ಜನರನ್ನು ತಲುಪಿದರೆ ಅವರು ವಲಸೆ ಹೋಗುವುದು ನಿಲ್ಲಬಹುದು. ಇದರಿಂದಾಗಿ ಹಳ್ಳಿಗಳ ಏಳಿಗೆ ಆಗಬಹುದು. ನಗರ ಹಳ್ಳಿಗಳ ನಡುವೆ ಅಂತರ ಕಡಿಮೆಯಾಗಬಹುದು. ಸಾಮರಸ್ಯ ಸಮಾನತೆಯ ಜೀವನ ಏರ್ಪಡಬಹುದು. ವಿಕೇಂದ್ರೀಕರಣ ವ್ಯವಸ್ಥೆಯ ಮುಖ್ಯ ಘಟ್ಟವಾದ ಗ್ರಾಮ ಪಂಚಾಯತಿಗಳು ಈ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕೆ ಪಣ ತೊಡಬೇಕು. ಹಳ್ಳಿಗಳ ಪ್ರತಿ ಕುಟುಂಬದ ಸರ್ವತೋಮುಖ ಅಭಿವೃದ್ಧಿಯಾದರೆ ಹಳ್ಳಿಗಳ ಏಳಿಗೆ ಸಾಧ್ಯ.

ಶಿಕ್ಷಣ, ಆರೋಗ್ಯ, ಶುದ್ಧ ಕುಡಿಯುವ ನೀರು, ವಾಸಿಸಲು ಯೋಗ್ಯ ಮನೆ, ರಸ್ತೆ ದೀಪದ ವ್ಯವಸ್ಥೆ, ಶೌಚಾಲಯವನ್ನು ಪ್ರತಿ ಕುಟುಂಬ ಹಾಗೂ ಹಳ್ಳಿಗಳು ಹೊಂದಬೇಕು. ಇದನ್ನು ಸಾಧಿಸಲು ಸಾಧ್ಯವಿರುವುದು ಗ್ರಾಮ ಪಂಚಾಯತಿಗಳಿಗೆ ಮಾತ್ರ. ಸ್ಥಳೀಯ ಸರ್ಕಾರವಾಗಿರುವ ಗ್ರಾಮ ಪಂಚಾಯಿತಿಗಳು ಜನರ ಏಳಿಗೆಗೆ ಅದು ಸದಾ ಬೆಂಬಲವಾಗಿ ನಿಲ್ಲಬಹುದು. ಈ ಕಾರ್ಯಕ್ಕೆ ಪೂರಕವಾದ ಕೆಲವು ಅಭಿವೃದ್ಧಿ ಕಾರ್ಯಕ್ರಮವನ್ನು ಪರಿಚಯಿಸಿದೆ.



# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ




ದಿನಾಂಕ 07–09–2005ರಿಂದ ಈ ಕಾಯಿದೆ ಜಾರಿಗೆ ಬಂದಿದೆ. ದುಡಿಯುವ ಕೈಗಳಿಗೆ ಕೆಲಸ, ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ. ಮಾನವ ಸಂಪನ್ಮೂಲದ ವೈಜ್ಞಾನಿಕ ಬಳಕೆ ಮತ್ತು ತನ್ಮೂಲಕ ಅಭಿವೃದ್ಧಿ ಎಂಬುದೇ ಈ ಕಾಯಿದೆಯ ಮುಖ್ಯ ಕಾಳಜಿಯಾಗಿದೆ. ಈ ಕಾಯಿದೆಯನ್ನು ಯೋಜನಾಬದ್ಧವಾಗಿ ಅನುಷ್ಠಾನಗೊಳಿಸಲೆಂದು ಮೊದಲ ಹಂತದಲ್ಲಿ ರಾಜ್ಯದ ಬೀದರ್, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ದಿನಾಂಕ 01–04–2006ರಿಂದ ಜಾರಿಯಲ್ಲಿ ತರಲಾಯಿತು. ಎರಡನೇ ಹಂತದಲ್ಲಿ ರಾಜ್ಯದ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ದಿನಾಂಕ 01–04–2007ರಿಂದ ವಿಸ್ತರಿಸಲಾಯಿತು. ಸದ್ಯ ರಾಜ್ಯದ ಉಳಿದ ಜಿಲ್ಲೆಗಳಿಗೂ ದಿನಾಂಕ 01–04–2008ರಿಂದ ಸದರಿ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ಈಗ ಸಂಪೂರ್ಣ ಕರ್ನಾಟಕದ ಪ್ರತಿ ಗ್ರಾಮ ಪಂಚಾಯಿತಿಗೂ ಈ ಕಾಯಿದೆ ಅನ್ವಯಿಸಲಾಗಿದೆ.



### ಉದ್ಯೋಗ ಖಾತರಿ ಕಾಯಿದೆಯ ಉದ್ದೇಶಗಳು

- ಸ್ವ-ಇಚ್ಛೆಯಿಂದ ಕೆಲಸ ಬಯಸಿ ಅರ್ಜಿ ಸಲ್ಲಿಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಕೆಲಸ ನೀಡುವುದು. ದುಡಿಯುವ ಜನರು ಕೆಲಸವನ್ನರಸಿ ವಲಸೆ ಹೋಗದಂತೆ ತಡೆಗಟ್ಟುವುದು.
- ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೂ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ ಗ್ರಾಮೀಣ ಜನತೆಯ ಜೀವನಕ್ಕೆ ಭದ್ರತೆ ಒದಗಿಸುವುದು.
- ಗ್ರಾಮೀಣ ಜನರಿಗೆ ದೀರ್ಘಕಾಲದ ಜೀವನೋಪಾಯದ ಮಾರ್ಗಗಳನ್ನು ಬಲಪಡಿಸುವುದು.
- ಗ್ರಾಮದ ನೆಲ, ಜಲ, ಅರಣ್ಯ ಸಂಪತ್ತು ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.

### ಉದ್ಯೋಗ ಪಡೆಯುವ ಹಕ್ಕು ಮತ್ತು ಅವಕಾಶಗಳು

- ಗ್ರಾಮೀಣ ಪ್ರದೇಶ ಪ್ರತಿ ಕುಟುಂಬದ ವಯಸ್ಕ ಸದಸ್ಯರು ಅಕುಶಲ ದೈಹಿಕ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಹಕ್ಕು ಹೊಂದಿರುತ್ತಾರೆ.
- ಪ್ರತಿ ಕುಟುಂಬವು ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಅಧಿಕಾರ ಪಡೆಯುತ್ತದೆ.
- ಅವಿಭಕ್ತ ಕುಟುಂಬವಾಗಿದ್ದಲ್ಲಿ ವಯಸ್ಕ ದಂಪತಿಗಳು ಮತ್ತು ಅವರ ಮಕ್ಕಳನ್ನು ಒಂದು ಕುಟುಂಬವೆಂದು ಪರಿಗಣಿಸಬೇಕು.
- ಅಕುಶಲ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ ಅರ್ಜಿದಾರರು ಆರ್ಥಿಕ ವರ್ಷದ ಮೊದಲ 30 ದಿನಗಳಿಗೆ ಕೂಲಿಯ ಶೇ.25ರಷ್ಟು ಮತ್ತು ಉಳಿದ ಅವಧಿಗೆ ಶೇ.50ರಷ್ಟು ನಿರುದ್ಯೋಗ ಭತ್ಯೆಯನ್ನು ಪಡೆಯಲು ಹಕ್ಕು ಹೊಂದಿರುತ್ತಾರೆ.
- ಸಾಧ್ಯವಾದಷ್ಟು ಮಟ್ಟಿಗೆ ಕೆಲಸಗಳನ್ನು ಆ ಗ್ರಾಮದ ವ್ಯಾಪ್ತಿಯಲ್ಲಿ ಒದಗಿಸಬೇಕು. ಕೂಲಿ ಕಾರ್ಮಿಕರು ವಾಸವಿರುವ ಗ್ರಾಮದಿಂದ 5 ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿ ಕೆಲಸವನ್ನು ಒದಗಿಸಿದಾಗ, ನಿಗದಿತ ದರದ ಶೇ.10ರಷ್ಟನ್ನು ಹೆಚ್ಚುವರಿಯಾಗಿ ಪಡೆಯಲು ಈ ಕೂಲಿ ಕಾರ್ಮಿಕರಿಗೆ ಹಕ್ಕಿದೆ.
- ಉದ್ಯೋಗ ನೀಡುವಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕು.
- ಮಹಿಳೆ-ಪುರುಷ ಎಂಬ ತಾರತಮ್ಯ ಮಾಡದೆ ಸಮಾನ ವೇತನ ಅಧಿನಿಯಮ 1976 (25/1976)ರ ಅನ್ವಯ ಸಮಾನ ಕೂಲಿ ಪಡೆಯುವ ಹಕ್ಕನ್ನು ಈ ಕಾಯಿದೆ ನೀಡಿದೆ.
- ಕಾಯ್ದೆಯಡಿ ಕೆಲಸ ನಿರ್ವಹಿಸುವ 60 ವಯೋಮಾನ ಮೀರಿದವರು ಹಾಗೂ ಅಂಗವಿಕಲರಿಗೆ ಕೆಲಸದ ಪರಿಮಾಣದಲ್ಲಿ ಶೇ.25ರಷ್ಟು ರಿಯಾಯಿತಿ ಪಡೆಯುವ ಹಕ್ಕು ಇದೆ.



**ಕಾಮಗಾರಿಯ ಸ್ಥಳದ ಸಮೀಪ ಇರಬೇಕಾದ ವ್ಯವಸ್ಥೆಗಳು, ಸೌಲಭ್ಯಗಳು**

- ಸ್ವಚ್ಛವಾದ ಕುಡಿಯುವ ನೀರಿನ ವ್ಯವಸ್ಥೆ
- ಮಕ್ಕಳು ಮತ್ತು ಕಾರ್ಮಿಕರ ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ
- ಪ್ರಥಮ ಚಿಕಿತ್ಸೆ ಪೆಟ್ಟಿಗೆಯ ವ್ಯವಸ್ಥೆ




- ಕಾಮಗಾರಿ ಸ್ಥಳಕ್ಕೆ ಆರು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳು ಕಾರ್ಮಿಕರೊಂದಿಗೆ ಬಂದಲ್ಲಿ ಐದು ಮಕ್ಕಳಿಗೆ ಒಬ್ಬರಂತೆ ಕಾರ್ಮಿಕರ ಪೈಕಿ, ಒಬ್ಬ ಮಹಿಳೆಯನ್ನು ನೋಡಿಕೊಳ್ಳಲು ನೇಮಿಸಬೇಕು. ಅವಳಿಗೂ ದಿನದ ಕೂಲಿಯನ್ನು ಪಾವತಿಸಬೇಕು.
- ಕಾರ್ಮಿಕರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು.
- ಕಾಮಗಾರಿ ನಡೆಯುವ ಅವಧಿಯಲ್ಲಿ ಅಸ್ವಸ್ಥರಾದಲ್ಲಿ ಅವರಿಗೆ ಕೂಡಲೇ ಉಚಿತ ವೈದ್ಯಕೀಯ



ಚಿಕಿತ್ಸೆ ನೀಡಬೇಕು. ಚಿಕಿತ್ಸೆ ಪಡೆಯುವ ಅವಧಿಗೆ ಪ್ರತಿ ದಿನಕ್ಕೆ 3 ದಿನದ ಕೂಲಿಯ ಶೇ.50ರಷ್ಟು ಕೂಲಿಯನ್ನು ದಿನಭತ್ಯೆಯಾಗಿ ಪಾವತಿಸಬೇಕು.

- ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅವಘಡ ನಡೆದು ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಸಂದರ್ಭಕ್ಕೆ ತಕ್ಕಂತೆ ಅವರು ಅಥವಾ ಅವರ ವಾರಸುದಾರರು ರೂ.25,000/– ಅಥವಾ ಕೇಂದ್ರ ಸರಕಾರ ನಿಗದಿಪಡಿಸಬಹುದಾದ ಪರಿಹಾರ ಪಡೆಯಲು ಹಕ್ಕಿದೆ.
- ಈ ಕಾರ್ಮಿಕರ ಮಗುವಿಗೆ ಗಾಯಗಳಾದಲ್ಲಿ ಅಥವಾ ಶಾಶ್ವತ ಅಂಗವಿಕಲತೆಯಾದಲ್ಲಿ ಅಥವಾ ಮೃತಪಟ್ಟಲ್ಲಿ ಅವರು ಸಹ ಚಿಕಿತ್ಸೆ ಮತ್ತು ಪರಿಹಾರ ಪಡೆಯಲು ಹಕ್ಕು ಹೊಂದಿರುತ್ತಾರೆ.

**ಉದ್ಯೋಗಕ್ಕೆ ನೋಂದಣಿ ಮಾಡಿಸಿಕೊಳ್ಳುವುದು ಹೇಗೆ?**

- ಮೊದಲು ಉದ್ಯೋಗದ ಚೀಟಿ (ಜಾಬ್ ಕಾರ್ಡ್) ಪಡೆಯಬೇಕು.
- ಉದ್ಯೋಗ ಚೀಟಿ ಪಡೆಯಲೆಂದು ನಮೂನೆ–1ರಲ್ಲಿ ಕುಟುಂಬದ ವಯಸ್ಕ ಮತ್ತು ಕೆಲಸ ಮಾಡಲು ಸಿದ್ಧವಿರುವ ಎಲ್ಲ ಸದಸ್ಯರ ಹೆಸರು, ವಿಳಾಸ, ವಯಸ್ಸು ಇತ್ಯಾದಿಗಳನ್ನು ಭರ್ತಿ ಮಾಡಿ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಒಂದು ಪ್ರತಿಯಲ್ಲಿ ಸ್ವೀಕೃತಿ ದಿನಾಂಕ, ಶೀಲು (ಮೊಹರು)ಗಳನ್ನು ಪಡೆದುಕೊಂಡು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳಬೇಕು.
- ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಂಖ್ಯೆಯಿರುವ ಕುಟುಂಬದ ಉದ್ಯೋಗ ಚೀಟಿಯನ್ನು ಪಡೆದುಕೊಳ್ಳಬೇಕು.
- ಈ ಉದ್ಯೋಗ ಚೀಟಿಯಲ್ಲಿ ಸ್ಟಾಂಪ್ ಅಳತೆಯ ಭಾವಚಿತ್ರ (ಫೋಟೋ)ಗಳನ್ನು ಅಂಟಿಸಬೇಕು. ಈ ಫೋಟೋಗಳಿಗಾಗಿ ಕಾರ್ಮಿಕರಿಂದ ಪ್ರತ್ಯೇಕ ಹಣ ಪಡೆಯುವಂತಿಲ್ಲ.
- ಆಕಸ್ಮಿಕವಾಗಿ ಈ ಉದ್ಯೋಗ ಚೀಟಿ ಕಳೆದುಹೋದಲ್ಲಿ ಅಥವಾ ಹರಿದು ಹೋದಲ್ಲಿ ಉದ್ಯೋಗ ಚೀಟಿಯ ನಕಲು ಪ್ರತಿ ಪಡೆಯಬಹುದು. ನಕಲು ಪ್ರತಿಗಾಗಿ ಗ್ರಾಮ ಪಂಚಾಯಿತಿಗೆ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದು.
- ಉದ್ಯೋಗಕ್ಕಾಗಿ ಮಾಡಿದ ಈ ನೋಂದಾವಣಿ ಕನಿಷ್ಠ 5 ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ನಂತರದಲ್ಲಿ ಗ್ರಾಮ ಪಂಚಾಯಿತಿಗೆ ಅವಶ್ಯವೆನಿಸಿದಲ್ಲಿ ಉದ್ಯೋಗ ಚೀಟಿಯನ್ನು ನವೀಕರಿಸಬಹುದಾಗಿದೆ.
- ಉದ್ಯೋಗಾಕಾಂಕ್ಷಿಯು ತಪ್ಪು ಮಾಹಿತಿ ನೀಡಿ ನೋಂದಾಯಿಸಿಕೊಂಡಿದ್ದಲ್ಲಿ ಅಂತಹವರನ್ನು ವಜಾಗೊಳಿಸಲು ಅವಕಾಶವಿದೆ.



**ಕೆಲಸ ಪಡೆಯಲು ಮಾಡಬೇಕಾದದ್ದು ಏನು?**

- ಉದ್ಯೋಗ ಚೀಟಿ (ಜಾಬ್ ಕಾರ್ಡ್) ಹೊಂದಿರುವವರು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ಉದ್ಯೋಗದ ಬೇಡಿಕೆಯ ವಿವರಗಳನ್ನು ದಾಖಲಿಸಿ ನಮೂನೆ–6ರಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯ ಎರಡು ಪ್ರತಿಗಳನ್ನು ಮಾಡಿ ಒಂದು ಪ್ರತಿಯನ್ನು ಪಂಚಾಯಿತಿಗೆ ಸಲ್ಲಿಸಿ ಇನ್ನೊಂದು ಪ್ರತಿಯಲ್ಲಿ ಅರ್ಜಿ ಸಲ್ಲಿಸಿದ ಸ್ವೀಕೃತಿ ದಿನಾಂಕ ಮತ್ತು ಪಂಚಾಯಿತಿಯ ಮೊಹರು (ಶೀಲು) ಬರೆಯಿಸಿಕೊಂಡು ಅರ್ಜಿದಾರರು ತಮ್ಮ ಬಳಿ ಇಟ್ಟುಕೊಂಡಿರಬೇಕು.
- ಒಂದು ವರ್ಷದ ಅವಧಿಯಲ್ಲಿ ನಿಗದಿತ ಅವಧಿಗೆ ಉದ್ಯೋಗವನ್ನು ಬಯಸಿ ಮುಂಗಡ ಅರ್ಜಿಯನ್ನು ಸಲ್ಲಿಸಬಹುದು.
- ಒಬ್ಬನೇ ವ್ಯಕ್ತಿ ಅಥವಾ ಗುಂಪು ಒಂದು ಬಾರಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಬಹುದು. ಆದರೆ ಇವುಗಳಲ್ಲಿನ ಕೆಲಸದ ಬೇಡಿಕೆಯ ಅವಧಿ ಬೇರೆ ಬೇರೆಯಾಗಿರಬೇಕು.
- ಕಾರ್ಯಕ್ರಮ ಅಧಿಕಾರಿ / ಗ್ರಾಮ ಪಂಚಾಯಿತಿ ನಿಗದಿಪಡಿಸಿದ ಯಾವುದೇ ಕೆಲಸವನ್ನು ಉದ್ಯೋಗ ಪಡೆಯುವವರು ತಿರಸ್ಕರಿಸುವಂತಿಲ್ಲ.
- ಅಂಗವಿಕಲ ಮತ್ತು ಹಿರಿಯ ವ್ಯಕ್ತಿಗಳಿಗೆ ಕಾಯ್ದೆಯಲ್ಲಿ ನಮೂದಿಸಿರುವಂತೆ ಸೂಕ್ತ ಕೂಲಿ ಕೆಲಸಗಳನ್ನು ವಹಿಸಬೇಕು.

**ಕೆಲಸ ನೀಡದಿದ್ದರೆ ನಿರುದ್ಯೋಗ ಭತ್ಯೆ ಪಡೆಯುವುದು ಹೇಗೆ?**

- ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಗ್ರಾಮ ಪಂಚಾಯಿತಿ ಕೆಲಸ ನೀಡಬೇಕು. ಇಲ್ಲದೆ ಹೋದಲ್ಲಿ ಕಾಯ್ದೆ ಅನ್ವಯ ನಿರುದ್ಯೋಗ ಭತ್ಯೆಗಾಗಿ ಕಾರ್ಮಿಕರು ಪಂಚಾಯಿತಿಗೆ ಅರ್ಜಿ ಸಲ್ಲಿಸಬೇಕು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ (ಸೆಕ್ರೆಟರಿ) ಈ ಅರ್ಜಿಗಳನ್ನು ಪರಿಶೀಲಿಸಿ ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸಬೇಕು.
- ಕಾರ್ಯಕ್ರಮ ಅಧಿಕಾರಿಯು ಅರ್ಹರಿದ್ದಲ್ಲಿ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡುವರು.

**ಕೆಲಸದ ಕೂಲಿ ಹಣವನ್ನು ಹೇಗೆ ಪಡೆಯಬೇಕು?**

- ಉದ್ಯೋಗ ಚೀಟಿ ಪಡೆಯುವ ಹಂತದಲ್ಲಿಯೇ ಪ್ರತಿ ಕುಟುಂಬವು ರಾಷ್ಟ್ರೀಕೃತ ಬ್ಯಾಂಕು ಅಥವಾ ಪೋಸ್ಟ್ ಆಫೀಸ್‌ನಲ್ಲಿ ಅಕೌಂಟ್ (ಚಾಲ್ತಿಖಾತೆ) ತೆಗೆಸಬೇಕು. ಈ ಅಕೌಂಟನ್ನು ಶೂನ್ಯ ಠೇವಣಿಯಲ್ಲಿ ಪಂಚಾಯಿತಿ ಸಿಬ್ಬಂದಿಯವರೆ ತೆಗೆಸಿ ಕಾರ್ಮಿಕರಿಗೆ ಪಾಸ್ ಬುಕ್ ಕೊಡಬೇಕು.





- ಅಂದಂದಿನ ಕೆಲಸದ ಹಾಜರಾತಿ ಮತ್ತು ಪ್ರಮಾಣವನ್ನು ಉದ್ಯೋಗ ಮಿತ್ರರು (mate) ಹಾಜರಾಗಿ ಪಟ್ಟಿಯಲ್ಲಿ (NMR) ತುಂಬಬೇಕು. ಅದರೊಟ್ಟಿಗೆ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕದಲ್ಲಿ (measurement book) ದಾಖಲಿಸಬೇಕು.
- ಈ ಎಲ್ಲ ವಿವರಗಳನ್ನು ಗ್ರಾಮ ಪಂಚಾಯಿತಿಯ ಕಂಪ್ಯೂಟರ್ ಆಪರೇಟರ್‌ಗೆ ಒಪ್ಪಿಸಬೇಕು. ಅವರು ಅವುಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಕಂಪ್ಯೂಟರಿನಲ್ಲಿ ತುಂಬಿಸಬೇಕು.
- ಈಗ ನೇರ ಸಂಪರ್ಕ ಜಾಲ (online) ಇರುವುದರಿಂದ MIS ಮೂಲಕ ಹಣಕಾಸು ನಿರ್ವಹಣಾ ವಿಭಾಗಕ್ಕೆ ಮಾಹಿತಿ ತಲುಪುತ್ತದೆ. ಅವರು ವಿವರಗಳನ್ನು ಪರಿಶೀಲಿಸಿ ಅವಶ್ಯಕತೆ ಇದ್ದಷ್ಟು ಹಣವನ್ನು ಆಯಾ ಪಂಚಾಯಿತಿ ಖಾತೆಗೆ ವರ್ಗಾಯಿಸುತ್ತಾರೆ. ಪಂಚಾಯಿತಿ ಖಾತೆಯಿಂದ ಕಾರ್ಮಿಕರ ದುಡಿತದ ಪ್ರಮಾಣ ಮತ್ತು ಹಾಜರಾತಿಯ ಲೆಕ್ಕದಂತೆ ಅವರ ಖಾತೆಗೆ ನೇರವಾಗಿ ಹಣ ಜಮಾವಣೆಯಾಗುತ್ತದೆ. ತಮ್ಮ ತಮ್ಮ ಖಾತೆಯಿಂದ ಕಾರ್ಮಿಕರು ರಾಷ್ಟ್ರೀಕೃತ ಬ್ಯಾಂಕು ಅಥವಾ ಪೋಸ್ಟ್ ಆಫೀಸ್‌ನಿಂದ ನೇರವಾಗಿ ತಮ್ಮ ದುಡಿಮೆಯ ಹಣವನ್ನು ಪಡೆದುಕೊಳ್ಳಬೇಕು.
- ಅಂದಂದಿನ ದುಡಿಮೆಯ ಹಾಜರಾತಿ ಮತ್ತು ಪ್ರಮಾಣವನ್ನು ಸರಿಯಾಗಿ ನಮೂದಿಸುವಂತೆ



ಉದ್ಯೋಗ ಮಿತ್ರನಿಗೆ (mate) ಹೇಳಬೇಕು.

- ಕನಿಷ್ಠ ದಿನಗೂಲಿ ಒಬ್ಬರಿಗೆ ಸದ್ಯ 100/– ರೂಪಾಯಿಯಂತೆ (ದಿನಗೂಲಿ ಕಾಲಕಾಲಕ್ಕೂ ಪರಿಷ್ಕೃತವಾದಂತೆ) ಕೊಡಬೇಕು.
- ಇದರೊಂದಿಗೆ ಕೆಲಸ ಮಾಡಲು ಬೇಕಾದ ಸಲಕರಣೆಗಳ (ಬುಟ್ಟಿ, ಹಾರೆ, ಪಿಕಾಸಿ, ಸಲಿಕೆ, ಗುದ್ದಲಿ) ಬಾಡಿಗೆ ಎಂದು ದಿನವೊಂದಕ್ಕೆ 3/– ರೂಪಾಯಿಯಂತೆ ಸೇರಿಸಬೇಕು.
- ಮಹಿಳೆ–ಪುರುಷರಿಬ್ಬರಗೂ ಸಮಾನ ಕೂಲಿ ದೊರೆಯುತ್ತದೆ.
- ಪ್ರತಿ ವಾರಾಂತ್ಯದಲ್ಲಿ ಕೂಲಿ ಪಾವತಿ ಮಾಡಬೇಕು. ತಪ್ಪಿದರೆ 15 ದಿನಕ್ಕೊಮ್ಮೆಯಾದರೂ ಕೂಲಿ ಪಾವತಿ ಮಾಡಲೇಬೇಕು. ತಪ್ಪಿದಲ್ಲಿ ಮೇಲಧಿಕಾರಿಗಳಿಗೆ ದೂರು ಸಲ್ಲಿಸುವ ಅವಕಾಶವಿದೆ.
- ಕಾಮಗಾರಿಯ ಸ್ಥಳ 5 ಕಿ.ಮೀ.ಗಿಂತ ದೂರ ಇರಕೂಡದು. ಇದ್ದಲ್ಲಿ ಹೆಚ್ಚುವರಿ ಶೇ.10ರಷ್ಟು ದಿನಗೂಲಿ ಪಾವತಿಸಬೇಕು.
- ಕುಟುಂಬದ ಯಾರೇ ಗಳಿಸಿದ ಮಜೂರಿ ಹಣವನ್ನು ಕುಟುಂಬದ ಜಂಟಿ ಉಳಿತಾಯ ಖಾತೆಗೆ ಜಮಾ ಮಾಡಬೇಕು.
- ಕಾರ್ಯ ನಿರ್ವಹಣಾ ಏಜೆನ್ಸಿ, ಯಾವುದಾದರೂ, ಕಾರ್ಮಿಕರ ಕೂಲಿಯನ್ನು ಗ್ರಾಮ ಪಂಚಾಯಿತಿ ಮೂಲಕವೇ ಪಾವತಿಸಬೇಕು.
- ಸಾಮರ್ಥ್ಯವಿದ್ದ ಕಾರ್ಮಿಕರು ದಿನವೊಂದಕ್ಕೆ ನಿಗದಿಪಡಿಸಿದ ಪ್ರಮಾಣಕ್ಕಿಂತಲೂ ಹೆಚ್ಚುವರಿ ಕೆಲಸ ಮಾಡಿ ಹೆಚ್ಚಿನ ಕೂಲಿ ಪಡೆಯಲು ಅವಕಾಶವಿದೆ. ಆದರೆ ಹೆಚ್ಚುವರಿ ದುಡಿಮೆಯ ಪ್ರಮಾಣವು ದಿನವೊಂದಕ್ಕೆ ರೂ.125/– ಮೀರದಂತೆ ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗಿದೆ.
- ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ನಿಗದಿಯಾಗಿರುವ ಮಹಿಳಾ ಕಾರ್ಮಿಕರಿಗೂ ದಿನವೊಂದರ ಕೂಲಿಯಂತೆ ಕೆಲಸ ಮಾಡಿದಷ್ಟು ದಿನಗಳ ಹಾಜರಾತಿ ನಮೂದಿಸಿ ಹಣವನ್ನು ಪಾವತಿಸಬೇಕು.

**ಮಾಡಬೇಕಾದ ಕೆಲಸದ ಪ್ರಮಾಣ ಎಷ್ಟು?**

- ಸದರಿ ಯೋಜನೆಯಡಿಯಲ್ಲಿ ಪ್ರದೇಶವಾರು ಮತ್ತು ಕಾಮಗಾರಿಗಳ ಭಿನ್ನ ಸ್ವರೂಪಗಳನ್ನು ಅನುಸರಿಸಿ ಆಯಾ ಕೆಲಸಗಳಿಗೆ ಭಿನ್ನ ವಿಭಿನ್ನವಾದ ಅಳತೆ ಪ್ರಮಾಣವನ್ನು ಸರಕಾರ ನಿಗದಿಪಡಿಸಿದೆ.
- ಆಯಾ ಕಾಮಗಾರಿ ಕ್ಷೇತ್ರದ ಅಧಿಕಾರಿಗಳು; ಇಂಜಿನಿಯರ್ (ಜೆ.ಇ.), ಪಿ.ಡಿ.ಓ., ಕಾರ್ಯದರ್ಶಿ ಮತ್ತು ಪಂಚಾಯಿತಿ ಪ್ರತಿನಿಧಿಗಳು ನಿಯಮಾನುಸಾರ ಅನ್ವಯವಾಗುವ ಕೆಲಸದ ಪ್ರಮಾಣವನ್ನು ಕಾರ್ಮಿಕರಿಗೆ ನೀಡಬೇಕು.
- ಗ್ರಾಮ ಸಭೆಗಳಲ್ಲಿ ಮತ್ತು ಉದ್ಯೋಗ ಖಾತರಿ ಕಾಯಿದೆ ಕುರಿತು ಮಹಿತಿ ನೀಡುವ ಸಂದರ್ಭಗಳಲ್ಲಿ



ಕಾರ್ಮಿಕರಿಗೆ ಕೆಲಸದ ಸ್ವರೂಪ ಮತ್ತು ಪ್ರಮಾಣವನ್ನು ಕುರಿತು ಸರಕಾರಿ ಆದೇಶದಲ್ಲಿ ನೀಡಲಾದ ವಿವರಗಳನ್ನು ಸ್ಪಷ್ಟಪಡಿಸಬೇಕು.

**ಯಾವ ಬಗೆಯ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು**

- **ಜಲ ಸಂರಕ್ಷಣೆ ಮತ್ತು ಮಳೆ ನೀರಿನ ಕೊಯ್ಲು:** ಕೆರೆ ನಿರ್ಮಾಣ ಮತ್ತು ಹೂಳೆತ್ತುವುದು. ತಡೆ ಅಣೆಕಟ್ಟು, ಜಿನುಗುಕೆರೆ, ಗೋಕಟ್ಟೆ, ತಿರುವು ಕಾಲುವೆ, ಕಾಂಟೂರ್ ಬಂಡಿಂಗ್, ತೋಡು ಬಾವಿಗಳ ನಿರ್ಮಾಣ, ಕುಡಿಯುವ ನೀರಿನ ಪುನಶ್ಚೇತನ, ಶಾಲೆಗಳಲ್ಲಿ ಹಾಗೂ ಮನೆಗಳಲ್ಲಿ ಮಳೆನೀರು ಸಂಗ್ರಹಣೆಯ ತೊಟ್ಟಿಗಳನ್ನು ನಿರ್ಮಿಸುವುದು.



**ದುಡಿಯುವ ಕೈಗಳಿಗೆ ಕೆಲಸದ ಜೊತೆಗೆ ಜಲ ಸಂರಕ್ಷಣೆಯ ಮಹತ್ಕಾರ್ಯ**

- ಬರಗಾಲ ತಡೆಗಟ್ಟುವಿಕೆ, ಅರಣ್ಯೀಕರಣ ಮಾಡುವುದು. ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ ನೀರಾವರಿ ಕಾಲುವೆಗಳು, ಕ್ಷೇತ್ರ ಕಾಲುವೆಗಳು, ಪೂರಕ ಕಾಲುವೆಗಳು, ಜಮೀನಿನ ಅಭಿವೃದ್ಧಿ / ತೋಟಗಾರಿಕೆ (ವೈಯಕ್ತಿಕ).
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಭೂ ಸುಧಾರಣೆ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಜಮೀನುಗಳಿಗೆ ನೀರಾವರಿ, ತೋಟಗಾರಿಕೆ, ಕೃಷಿಹೊಂಡ ಮತ್ತು ಜಮೀನು ಅಭಿವೃದ್ಧಿ ಪಡಿಸುವುದು.
- ಸಾಂಪ್ರದಾಯಿಕ ನೀರು ತೊಟ್ಟಿಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು.
- ಕಲ್ಯಾಣಿಗಳು, ಸಮುದಾಯ ಕುಡಿಯುವ ನೀರಿನ ಬಾವಿಗಳು, ಗೋಕಟ್ಟೆಗಳಂತಹ ಸಾಂಪ್ರದಾಯಿಕ ನೀರು ನೆಲೆಗಳ ಜೀರ್ಣೋದ್ಧಾರ.



- **ಭೂ ಅಭಿವೃದ್ಧಿ:** ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗಾಗಿ ಕೇಂದ್ರ / ರಾಜ್ಯ ಗ್ರಾಮೀಣ ವಸತಿ ನಿರ್ಮಾಣ ಯೋಜನೆಗಳ ಫಲಾನುಭವಿಗಳ ಬಡಾವಣೆ, ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲಾ / ಕಾಲೇಜುಗಳಿಗಾಗಿ ಆಟದ ಮೈದಾನ ಅಭಿವೃದ್ಧಿ. ಸರ್ಕಾರಿ ತೋಟಗಾರಿಕಾ ಫಾರಂ/ ಕೃಷಿ ಫಾರಂಗಳು, ಮೀನುಗಾರಿಕಾ ಕೇಂದ್ರಗಳು, ಮೇವು ಕೇಂದ್ರಗಳು, ರೇಷ್ಮೆ ಸಾಕಾಣಿಕೆ ಕೇಂದ್ರಗಳ ಅಭಿವೃದ್ಧಿ, ರೈತ ಸಂತೆಗಳು ಇತ್ಯಾದಿಗಳಿಗಾಗಿ ಭೂಮಿಯನ್ನು ಅಭಿವೃದ್ಧಿ ಪಡಿಸುವುದು.
- ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು, ನೀರು ನಿಂತ ಪ್ರದೇಶಗಳಲ್ಲಿ ಚರಂಡಿ ನಿರ್ಮಾಣ ಮಾಡುವುದು.
- ಸರ್ವಋತು ಗ್ರಾಮೀಣ ರಸ್ತೆಗಳ ನಿರ್ಮಾಣ (ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ ಶೇ10ಕ್ಕಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳತಕ್ಕದ್ದು).
- ವಿಶೇಷ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರ ಅಧಿಸೂಚಿಸಿರುವ ಇತರ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.
- ಗ್ರಾಮಗಳಲ್ಲಿ ಕೃಷಿ ಕೆಲಸಗಳು ಲಭ್ಯವಿಲ್ಲದಿದ್ದಾಗ, ನಾಟಿ, ಸುಗ್ಗಿ, ಮುಂತಾದ ಅವಧಿಯನ್ನು ಬಿಟ್ಟು ಬೇಸಿಗೆ ಸಮಯದಲ್ಲಿ ಈ ಕೆಲಸಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳುವುದು ಸೂಕ್ತ.

**ಉದ್ಯೋಗ ಖಾತರಿ ಕಾಯಿದೆಯ ಅನ್ವಯ ಕಡ್ಡಾಯವಾಗಿ ಪಾಲಿಸಬೇಕಾದ ಅಂಶಗಳು**

- ಪ್ರತಿ ನೋಂದಾಯಿತ ಕುಟುಂಬಕ್ಕೆ ಒಂದು ಆರ್ಥಿಕ ವರ್ಷಕ್ಕೆ 100 ದಿನಗಳ ಉದ್ಯೋಗವನ್ನು ಕಡ್ಡಾಯವಾಗಿ ಒದಗಿಸಬೇಕು.
- ವಾರವಾರಕ್ಕೂ ತಪ್ಪದೆ ಕೂಲಿಯನ್ನು ಪಾವತಿಸಬೇಕು. ಕಾರಣಾಂತರಗಳಿಂದ ತಡಬಾದರೂ 15 ದಿನದ ಒಳಗಾಗಿಯಂತೂ ಪಾವತಿಸಲೇಬೇಕು.
- ಮಹಿಳೆ ಮತ್ತು ಪುರುಷರಿಗೆ ಸಮಾನ ಕೂಲಿ ನೀಡಬೇಕು.
- ಅಂಗವಿಕಲ ಮತ್ತು ವಯಸ್ಸಾದವರಿಗೆ ನಿಗದಿ ಪ್ರಮಾಣಕ್ಕಿಂತ ಶೇ.25ರಷ್ಟು ಕಡಿಮೆ ಪ್ರಮಾಣವನ್ನು ಅಳವಡಿಸುವುದು.
- ಗ್ರಾಮ ಸಭೆಗಳನ್ನು ನಡೆಸಿ ಕಾಮಗಾರಿ ಆಯ್ಕೆ ಮಾಡಿಕೊಳ್ಳಬೇಕು.
- ಪೂರ್ವ ನಿಯೋಜಿತವಾಗಿ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಮೇಲಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.
- ಗುತ್ತಿಗೆದಾರರ ಸಂಪೂರ್ಣ ನಿಷೇಧವಿದೆ.
- ಜನರು ಮಾಡಬಹುದಾದ ಕೆಲಸಗಳಿಗೆ ಯಂತ್ರಗಳ ಬಳಕೆ ನಿಷೇಧವಿದೆ.





X

ಗುತ್ತಿಗೆದಾರ ಮತ್ತು
ಯಂತ್ರಗಳಿಗೆ ನಿಷೇಧ

ದುಡಿಯುವ ಕೈಗಳಿಗೆ ಕೆಲಸ

- ಇಂಜಿನಿಯರ್ (ಜೆ.ಇ.) / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಾರ್ಯದರ್ಶಿ (ಸೆಕ್ರೆಟರಿ), ಕಂಪ್ಯೂಟರ್ ಆಪರೇಟರ್, ಉದ್ಯೋಗ ಮಿತ್ರ ಮುಂತಾದವರು ತ್ವರಿತಗತಿಯಲ್ಲಿ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಬೇಕು.

## ಕಾಯ್ದೆ ವಿರುದ್ಧ ಧೋರಣೆಗೆ ದಂಡವಿರುತ್ತದೆ

- ಈ ಕಾಯ್ದೆಯಡಿಯಲ್ಲಿ ಯೋಜನೆಯ ಅನುಷ್ಠಾನದ ವಿರುದ್ಧ ಧೋರಣೆ ತಳೆದರೆ ರೂ.1000/–ರವರೆಗೆ ದಂಡ ವಿಧಿಸಲು ಅವಕಾಶವಿದೆ.
- ಈ ಕಾಯ್ದೆಯನ್ನು ಸೂಕ್ತವಾಗಿ ಜಾರಿ ಮಾಡುವಲ್ಲಿ ಅಡ್ಡಿ ಆತಂಕಗಳು ಎದುರಾದಾಗ ಅಥವಾ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಭ್ರಷ್ಟಾಚಾರ ನಡೆಸಿದಾಗ ಇದರ ವಿರುದ್ಧ ದೂರು ಸಲ್ಲಿಸಲು ಅವಕಾಶವಿರುತ್ತದೆ.
- ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದು ಕೊರತೆ ನಿವಾರಣೆ) ನಿಯಮಗಳು – 2009ರಲ್ಲಿ ಅನ್ವಯವಾಗುವಂತೆ ಎಲ್ಲ ಬಗೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ. ಅವಶ್ಯಕತೆ ಇದ್ದಲ್ಲಿ ಕುಂದು ಕೊರತೆ ನಿವಾರಣಾ ಸಮಿತಿಗೆ ಮೊರೆ ಹೋಗಬಹುದು.



**ದೂರು ಸಲ್ಲಿಸುವ ಹಂತ**

- ಗ್ರಾಮ ಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ
- ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಣಾಧಿಕಾರಿ (ಇಓ)
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ (ಸಿಇಓ)
- ರಾಜ್ಯಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮೇರೆಗೆ ಆಯುಕ್ತರು.

**ಹಣಕಾಸು ನಿರ್ವಹಣೆ**

- ಕೇಂದ್ರ ಸರಕಾರದಿಂದ ಶೇ.90, ರಾಜ್ಯ ಸರ್ಕಾರದಿಂದ ಶೇ.10ರಷ್ಟು ಅನುದಾನ ನೀಡಿ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.
- ಮಾಹಿತಿ ಹಕ್ಕಿನ ಪ್ರಕಾರ ಯೋಜನೆಯ ವಿವರವನ್ನು ಈ ಕೆಳಕಂಡಂತೆ ಪ್ರದರ್ಶನ ಮಾಡಬೇಕು.
- ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಮಾಹಿತಿ ಗೋಡೆ ಮೇಲೆ ಮಾಹಿತಿ ಬರೆಸಬೇಕು.
- ಕಾಮಗಾರಿಗಳ ದರಪಟ್ಟಿ (ದರ ಪರಿಷ್ಕರಣವಾದಂತೆ ತಿದ್ದುವುದು)
- ಮಾರ್ಪಡಿಸಲಾಗದ ಬಾಬ್ತುಗಳು
- ಗುರುತಿಸಲಾದ ಕಾಮಗಾರಿಗಳ ಪಟ್ಟಿ
- ಮುಖ್ಯವಾದ ಮಾರ್ಗಸೂಚಿಗಳು
- ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ
- ಕಪ್ಪು ಹಲಗೆ ಅಥವಾ ಸೂಚನಾ ಫಲಕಗಳಲ್ಲಿ ಪ್ರತಿವಾರ ಬದಲಾಗುವ ಮಾಹಿತಿಗಳಾದ ಕಾಮಗಾರಿಗಳ ಮತ್ತು ಕಾರ್ಮಿಕರ ವಿವರಗಳನ್ನು ದಾಖಲಿಸುತ್ತಲೇ ಇರಬೇಕು.
- ಖರೀದಿಸಲಾದ ಮತ್ತು ಉಪಯೋಗಿಸಲಾದ ಸಾಮಗ್ರಿಗಳು ಹಾಗೂ ಇವುಗಳ ವೆಚ್ಚ ಇತ್ಯಾದಿಗಳನ್ನು ಪ್ರಕಟಿಸಬೇಕು.

**ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ ಬಳಸಲಾಗುವ ನಮೂನೆಗಳು**

- **ನಮೂನೆ–1:** ಇದರಲ್ಲಿ ಕೆಲಸ ಮಾಡಲು ಸಿದ್ಧವಿರುವ ಕುಟುಂಬದ ವಯಸ್ಕ ಸದಸ್ಯರ ಹೆಸರು, ವಯಸ್ಸು, ವಿಳಾಸ, ವಿವರಗಳನ್ನು ತುಂಬಿ ದ್ವಿಪ್ರತಿಯಲ್ಲಿ ತಾವು ವಾಸವಿರುವ ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.
- **ನಮೂನೆ–2:** ನಮೂನೆ–1ರಲ್ಲಿ ಪಡೆಯಲಾದ ಮಾಹಿತಿಗಳನ್ನು ಅಂದರೆ ಆಯಾ ಪಂಚಾಯಿತಿ



ವ್ಯಾಪ್ತಿಯ ಕಾರ್ಮಿಕರ ವಿವರಗಳನ್ನು ನಮೂನೆ–2ರಲ್ಲಿ (ನೋಂದಣಿ ವಹಿ) ತುಂಬಿಸಬೇಕು.

- **ನಮೂನೆ–3:** ಉದ್ಯೋಗಾಕಾಂಕ್ಷಿಗಳ ವಿವರ ಮತ್ತು ಉದ್ಯೋಗ ವಹಿಗಳ ವಿವರವನ್ನು ನಮೂನೆ 3ರಲ್ಲಿ ತುಂಬಿಸಬೇಕು.
- **ನಮೂನೆ–4:** ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಂಖ್ಯೆಯಿರುವ ಕುಟುಂಬದ ಉದ್ಯೋಗ ಚೀಟಿಯನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ನಮೂನೆ–4ರಲ್ಲಿ ತುಂಬಿಸಬೇಕು.
- **ನಮೂನೆ–5:** ಉದ್ಯೋಗ ಚೀಟಿ ವಿತರಣಾ ಮಾಹಿತಿಯನ್ನು ನಮೂನೆ–5ರಲ್ಲಿ ದಾಖಲಿಸಬೇಕು.
- **ನಮೂನೆ–6:** ದುಡಿಮೆಗಾರರು ವೈಯಕ್ತಿಕವಾಗಿ ಅಥವಾ ಗುಂಪಾಗಿ ಕೆಲಸದ ಬೇಡಿಕೆಯಲ್ಲಿ ನಮೂನೆ–6ರಲ್ಲಿ ತುಂಬಿ ಒಂದು ಪ್ರತಿಯನ್ನು ಪಂಚಾಯಿತಿಗೆ ಸಲ್ಲಿಸಬೇಕು. ಜೆ಼ರಾಕ್ಸ್ ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕು.
- **ನಮೂನೆ–7:** ಉದ್ಯೋಗಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ಉದ್ಯೋಗ ಬೇಡಿಕೆ ವಹಿ ನಮೂನೆ–7ರಲ್ಲಿ ದಾಖಲಿಸಬೇಕು.
- **ನಮೂನೆ–8:** ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಗ್ರಾಮ ಪಂಚಾಯತ್ ಉದ್ಯೋಗ ನೀಡಿ ನಮೂನೆ–8ರಲ್ಲಿ ನೋಟೀಸನ್ನು ಜಾರಿ ಮಾಡಬೇಕು.
- **ನಮೂನೆ–9:** ಉದ್ಯೋಗ ನೀಡಿದ ವಿವರವನ್ನು ನಮೂನೆ–9ರಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಚುರಪಡಿಸಬೇಕು.



# ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ

**ಈ** ಯೋಜನೆ 1–4–1999ರಿಂದ ಜಾರಿಗೆ ಬಂದಿದೆ. ಈ ಯೋಜನೆ ಈ ಹಿಂದೆ ಇದ್ದ ಐ.ಆರ್.ಡಿ.ಪಿ. ಟ್ರೈಸಂ, ಡ್ವಾಕ್ರ, ಗಂಗಾ ಕಲ್ಯಾಣ ಮುಂತಾದ ಯೋಜನೆಗಳನ್ನು ಒಂದೆಡೆ ಸೇರಿಸಿ ರೂಪ ಪಡೆದಿದೆ. ಪ್ರತಿ ಬಡಕುಟುಂಬಗಳ ಏಳಿಗೆ ಈ ಯೋಜನೆಯ ಮುಖ್ಯ ಗುರಿಯಾಗಿದೆ.




**ಯೋಜನೆ ಉದ್ದೇಶ**

- ಬಡತನ ರೇಖೆಗಿಂತ ಕೆಳಗಿರುವವರ ಜೀವನ ಗುಣಮಟ್ಟ ಸುಧಾರಣೆ ಮಾಡುವುದು
- ಸ್ವಸಹಾಯ ಸಂಘಗಳ ಮೂಲಕ ಸವಲತ್ತುಗಳನ್ನು ಜನರಿಗೆ ತಲುಪಿಸುವುದು.
- ಅವಶ್ಯಕತೆ ಮತ್ತು ಬೇಡಿಕೆಯಾನುಸಾರ ಬಡವರಿಗೆ ಲಭ್ಯ ಸೌಲಭ್ಯಗಳನ್ನು ಒದಗಿಸುವುದು.



**ಯೋಜನೆಯ ಲಕ್ಷಣಗಳು**

- ಸಣ್ಣ ಉದ್ದಿಮೆಗಳ ಸ್ಥಾಪನೆ ಮಾಡುವುದು
- ಸ್ವ–ಸಹಾಯ ಮತ್ತು ಮಹಿಳಾ ಗುಂಪುಗಳಿಗೆ ವೈಯಕ್ತಿಕವಾಗಿ ಉದ್ದಿಮೆ ಮಾಡುವುದಕ್ಕೆ ಪ್ರೋತ್ಸಾಹ ನೀಡುವುದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಲ್ಲಿ ಅನುಮೋದನೆ ಪಡೆದ 45 ಪ್ರಮುಖ ಆರ್ಥಿಕ ಚಟುವಟಿಕೆಗಳಿಗೆ ಆದ್ಯತೆ ನೀಡುವುದು.
- ಗ್ರಾಮ ಸಭೆಯಲ್ಲಿ ಅಧಿಕೃತವಾಗಿ ಆಯ್ಕೆಮಾಡಿ ಸಿದ್ಧಗೊಂಡ ಬಿ.ಪಿ.ಎಲ್. ಪಟ್ಟಿಯ ಫಲಾನುಭವಿಗಳಿಗೆ ಸೌಲಭ್ಯ ನೀಡುವುದು.
- ಫಲಾನುಭವಿಗಳಿಗೆ ನಿಪುಣತೆ/ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು.
- **ಗರಿಷ್ಠ ಸಹಾಯಧನ ನೀಡಿಕೆ:** ಪ.ಜಾತಿ, ಪ.ವರ್ಗಕ್ಕೆ, ಸ್ವ–ಸಹಾಯ ಗುಂಪುಗಳಿಗೆ ಗರಿಷ್ಠ ಸಹಾಯಧನ
- ನೀರಾವರಿ ಚಟುವಟಿಕೆಗಳಿಗೆ ಸಹಾಯಧನ (ಮಿತಿ ಇರುವುದಿಲ್ಲ)
- ದುರ್ಬಲವರ್ಗದವರಿಗೆ ವಿಶೇಷ ಆದ್ಯತೆ. ಪ.ಜಾತಿ/ಪ.ವರ್ಗಕ್ಕೆ ಶೇ.50ರಷ್ಟು ಅವಕಾಶ

**ಅನುಷ್ಠಾನದ ಹೊಣೆ**

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆಯ ಅನುಷ್ಠಾನ ಈ ಕೆಳಕಂಡವರ ಹೊಣೆಯಾಗಿರುತ್ತದೆ. ಇದರಲ್ಲಿ ಹಲವು ಸಂಸ್ಥೆಗಳು ಸಕ್ರಿಯವಾಗಿ ಸಹಭಾಗಿತ್ವವನ್ನು ಹೊಂದಿರಬೇಕು.



# ಸ್ವಚ್ಛ ಗ್ರಾಮ

**ಸುವರ್ಣ ಗ್ರಾಮೋದಯ**

ಇದೊಂದು ವಿಶಿಷ್ಠ ಯೋಜನೆ. ಕರ್ನಾಟಕ ರಾಜ್ಯದ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಆರಂಭಿಸಲಾಗಿದೆ. ಈ ಯೋಜನೆಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವಕ್ಕೆ ಹೆಚ್ಚು ಆದ್ಯತೆ ಇದೆ. ಗ್ರಾಮಗಳನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸುವುದು. ಈ ಯೋಜನೆಯ ಗುರಿ. ಆಯ್ದ 1000 (ಒಂದು ಸಾವಿರ) ಗ್ರಾಮಗಳಲ್ಲಿ) ಸಮಗ್ರ ಅಭಿವೃದ್ಧಿ ಸಾಧಿಸಬೇಕೆಂಬುದು ಇದರ ಒಟ್ಟು ಆಶಯವಾಗಿದೆ. ಈ ಕೆಳಕಂಡ ಧ್ಯೇಯೋದ್ದೇಶವನ್ನು ಈ ಯೋಜನೆ ಒಳಗೊಂಡಿದೆ.

1. ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು
2. ಭೂ ಆಧಾರಿತ ಚಟುವಟಿಕೆಗಳು
3. ಮಾನವ ಸಂಪನ್ಮೂಲಗಳ ಅಭಿವೃದ್ಧಿ
4. ಕೃಷಿಯೇತರ ಉದ್ಯೋಗಗಳಿಗಾಗಿ ಹೊಸ ಮಾರ್ಗಗಳು
5. ಸಮುದಾಯ ಅಭಿವೃದ್ಧಿ

ಮೇಲ್ಕಂಡ ಪ್ರತಿ ಯೋಜನೆಯಲ್ಲಿ ವಿವಿಧ ರೀತಿಯ ಉಪ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿದೆ. ಅವುಗಳ ವಿವರ ಈ ಕೆಳಕಂಡಂತಿದೆ.

**1. ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು**

- ಗ್ರಾಮಗಳ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು
- ಗ್ರಾಮದ ಎಲ್ಲಾ ರಸ್ತೆಗಳಲ್ಲಿ ಚರಂಡಿ ನಿರ್ಮಾಣ
- ಉತ್ತಮ ಕುಡಿಯುವ ನೀರಿನ ಪೂರೈಕೆ
- ಹೊಸ ಬಡಾವಣೆಗಳ ನಿರ್ಮಾಣ
- ರಸ್ತೆಗಳಿಗೆ ಮತ್ತು ಮನೆಗಳಿಗೆ ವಿದ್ಯುತ್ ಸಂಪರ್ಕ
- ಗ್ರಾಮಗಳ ತ್ಯಾಜ್ಯ ವಸ್ತುಗಳ ವಿಲೇವಾರಿಕೆ ವ್ಯವಸ್ಥೆ
- ಗ್ರಾಮದ ಎಲ್ಲಾ ಮನೆಗಳಿಗೆ ಶೌಚಾಲಯ ನಿರ್ಮಾಣ ಹಾಗೂ ಸಮುದಾಯ ಶೌಚಾಲಯಗಳ ವ್ಯವಸ್ಥೆ ಮಾಡಿಕೊಡುವುದು.





**2. ಭೂ ಆಧಾರಿದ ಚಟುವಟಿಕೆಗಳು**

ಭೂ ಆಧಾರಿತ ಚಟುವಟಿಕೆಗಳು ಕೃಷಿ ಕ್ಷೇತ್ರದಲ್ಲಿ ಹೆಚ್ಚು. ರೈತ ಸಮುದಾಯಕ್ಕೆ ಈ ಬಗ್ಗೆ ಪ್ರೇರಣೆ ನೀಡುವುದು ಬಹಳ ಮುಖ್ಯ. ಈ ಚಟುವಟಿಕೆಯಲ್ಲಿ ಭೂ ಸಾರ ರಕ್ಷಣೆ ಮಾಡುವುದು, ಜಲ ರಕ್ಷಣೆ ಮಾಡುವ ವಿಚಾರವನ್ನು ತಿಳಿಸಿಕೊಡಲಾಗುವುದು. ಜೊತೆಗೆ ಜಲಾನಯನ ಪ್ರದೇಶದಲ್ಲಿ ತೋಟಗಾರಿಕೆ ಮಾಡುವುದು. ಕೃಷಿ, ಪಶು ಸಂಗೋಪನೆ, ಹೈನುಗಾರಿಕೆ ಅಭಿವೃದ್ಧಿ, ರೇಷ್ಮೆ ಅಭಿವೃದ್ಧಿ ಚಟುವಟಿಕೆಗಳನ್ನು ಈ ಯೋಜನೆಯಡಿ ಹಮ್ಮಿಕೊಳ್ಳಬಹುದಾಗಿದೆ.

**3. ಮಾನವ ಸಂಪನ್ಮೂಲ ಅಭಿವೃದ್ಧಿ**

ಸಮಗ್ರ ಮಾನವ ಅಭಿವೃದ್ಧಿ ಅವಶ್ಯವಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಇದರ ಉದ್ದೇಶ. ಶಿಕ್ಷಣ, ಅಂಗನವಾಡಿ, ಮತ್ತಿತರ ಮಾನವ ಸಂಪನ್ಮೂಲ ಸಂಬಂಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ.

**4. ಕೃಷಿಯೇತರ ಉದ್ಯೋಗಗಳು**

ಗ್ರಾಮೀಣ ಯುವಕರಲ್ಲಿ ನಿರುದ್ಯೋಗ ನಿವಾರಣೆಗೆ ಅನೇಕ ಉದ್ಯೋಗಗಳನ್ನು ವಿನ್ಯಾಸಗೊಳಿಸಲಾಗಿದೆ.



ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗಾವಕಾಶ ಹೆಚ್ಚಿಸುವುದು. ಈ ಯೋಜನೆಯ ಆಶಯವಾಗಿದೆ. ಉದಾಹರಣೆಗೆ ಸಿದ್ಧ ಉಡುಪುಗಳ ಉತ್ಪಾದನೆ, ಪೀಠೋಪಕರಣ, ಸರಳ ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳು, ಚರ್ಮಗಾರಿಕೆ, ಆಹಾರ ಸಂಸ್ಕರಣ ಘಟಕ, ಕಂಪ್ಯೂಟರ್ ತರಬೇತಿ ಇತ್ಯಾದಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಈ ಚಟುವಟಿಕೆಯ ಗುರಿಯಾಗಿದೆ.

**5. ಸಮುದಾಯ ಅಭಿವೃದ್ಧಿ**

ಸಮುದಾಯ ಅಭಿವೃದ್ಧಿ ಕಾರ್ಯ ವಿಶಾಲವಾದದ್ದು. ಮಹಿಳಾ ಸಬಲೀಕರಣ, ಯುವಜನ ಸೇವೆ, ಕ್ರೀಡಾಭಿವೃದ್ಧಿ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಮುದಾಯ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.

**ಈ ಮೇಲೆ ತಿಳಿಸಿರುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕಾದರೆ ಸರಿಯಾದ ಯೋಜನೆ ಸಿದ್ಧಪಡಿಸಬೇಕು. ವಾರ್ಡ್ ಮತ್ತು ಗ್ರಾಮ ಸಭೆಗಳ ಮೂಲಕ ಊರಿನ ಕುಂದು ಕೊರತೆಗಳನ್ನು ಗುರುತಿಸಬೇಕು. ಯಾವ ಕೆಲಸಕ್ಕೆ ಮೊದಲ ಆದ್ಯತೆ ಎಂಬುದನ್ನು ನಿರ್ಧರಿಸಬೇಕು. ಆ ನಂತರ ಲಭ್ಯ ಸಂಪನ್ಮೂಲಕ್ಕೆ ಅನುಗುಣವಾಗಿ ಯೋಜನೆ ರೂಪಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಬೇಕು.**



# ಸಂಪೂರ್ಣ ನೈರ್ಮಲ್ಯ ಆಂದೋಲನ

> *ನಮ್ಮ ಸ್ಥಳೀಯ ಸಂಘ ಸಂಸ್ಥೆಗಳಿಗೆ ಇರುವ ಅತೀ ಕಷ್ಟದ ಕೆಲಸವೆಂದರೆ ಗ್ರಾಮ ನೈರ್ಮಲ್ಯದ ಕೆಲಸ. ಯಾವ ಸರ್ಕಾರವೇ ಆದರೂ ಹಳ್ಳಿಗರ ಸಹಕಾರವಿಲ್ಲದೆ ಅವರ ಅಭ್ಯಾಸವನ್ನು ಬದಲಿಸಲು ಸಾಧ್ಯವಿಲ್ಲ. ಅವರ ಸಹಕಾರ ದೊರೆತರೆ ಸರ್ಕಾರ ಮಾಡಬೇಕಾದ ಕೆಲಸ ತುಂಬಾ ಕಡಿಮೆ. ವೈದ್ಯರು ಮತ್ತು ವಿದ್ಯಾವಂತರು ಮನಪೂರ್ವಕವಾಗಿ ಹಳ್ಳಿಗಳಲ್ಲಿ ದುಡಿದರೆ ಹಳ್ಳಿಯ ಆರೋಗ್ಯ ಸಮಸ್ಯೆಯನ್ನು ಹೋಗಲಾಡಿಸಬಹುದು. ವೈಯಕ್ತಿಕ ಮತ್ತು ಸಾಮಾಜಿಕ ಆರೋಗ್ಯದ ಕಡೆಗೆ ಗಮನ ಹರಿಸುವುದು ಶಿಕ್ಷಣದ ಮೊದಲ ಹೆಜ್ಜೆ.*
>
> – ಮಹಾತ್ಮ ಗಾಂಧಿ




ಗಾಂಧೀಜಿಯವರು ಮೇಲಿನ ನುಡಿಗಳನ್ನು ಹೇಳಿ ಶತಮಾನಗಳು ಕಳೆದವು. ಈಗಲೂ ಸ್ವಚ್ಛತೆಯೇ ಕಾಣದ ಹಳ್ಳಿಗಳು ನಮ್ಮ ನಡುವೆ ಇದೆ.

ಹೀಗಾಗಿ ಸ್ವಚ್ಛತೆಗಾಗಿಯೇ ಅನೇಕ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಇವುಗಳಲ್ಲಿ ಸಂಪೂರ್ಣ



ನೈರ್ಮಲ್ಯ ಆಂದೋಲನವು ಒಂದಾಗಿದೆ. ನಮ್ಮ ಗ್ರಾಮಗಳು ಸ್ವಚ್ಛತೆಯ ತಾಣವಾಗಬೇಕು. ಬಯಲು ಶೌಚಾಲಯಕ್ಕೆ ವಿದಾಯ ಹೇಳಬೇಕು. ಹಳ್ಳಿಗಳ ಪ್ರತಿ ಕುಟುಂಬವು ಶೌಚಾಲಯ ಹೊಂದಬೇಕು. ಅದಕ್ಕಾಗಿ ಇದನ್ನು ಆಂದೋಲನ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಸರ್ಕಾರವು ಸಮುದಾಯದ ಸಹಭಾಗಿತ್ವದೊಂದಿಗೆ ಜಾರಿಗೊಳಿಸುತ್ತಿದೆ.

**ಸಂಪೂರ್ಣ ನೈರ್ಮಲ್ಯ ಆಂದೋಲನದ ಉದ್ದೇಶಗಳು**

- ಗ್ರಾಮೀಣ ಜನರ ಜೀವನ ಗುಣಮಟ್ಟ ಮತ್ತು ಆರೋಗ್ಯದಲ್ಲಿ ಸುಧಾರಣೆ ತರುವುದು
- ಜನರಿಗೆ ಶುಚಿತ್ವದ ಬಗ್ಗೆ ಅರಿವು, ಮಾಹಿತಿ ಮತ್ತು ಆರೋಗ್ಯ ಶಿಕ್ಷಣ ನೀಡುವುದು
- ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ನೈರ್ಮಲ್ಯ ಸೌಲಭ್ಯ ಒದಗಿಸುವುದು
- ಗ್ರಾಮೀಣ ವಿಧ್ಯಾರ್ಥಿಗಳಲ್ಲಿ  ಶುಚಿತ್ವ ಮತ್ತು ನೈರ್ಮಲ್ಯದ ಬಗ್ಗೆ ಹವ್ಯಾಸವನ್ನು ಬೆಳೆಸುವುದು
- ಬಯಲು ಮಲವಿಸರ್ಜನೆಯನ್ನು ಹೋಗಲಾಡಿಸುವುದು
- ಕಡಿಮೆ ವೆಚ್ಚದಲ್ಲಿ ಸೂಕ್ತ ತಾಂತ್ರಿಕತೆಯುಳ್ಳ ನೈರ್ಮಲ್ಯದ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು

**ಆಂದೋಲನದ ಮುಖ್ಯ ಚಟುವಟಿಕೆಗಳು**

ಸಂಪೂರ್ಣ ನೈರ್ಮಲ್ಯ ಆಂದೋಲನಕ್ಕೆ ಕೆಲವು ಮುಖ್ಯ ಆದ್ಯತೆಗಳಿವೆ. ಅವುಗಳು ಹೀಗಿವೆ:

1. ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ
2. ಶಾಲಾ ಶೌಚಾಲಯ ನಿರ್ಮಾಣಕ್ಕೆ ವ್ಯವಸ್ಥೆ
3. ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ
4. ಸಮುದಾಯ ಶೌಚಾಲಯ ನಿರ್ಮಾಣ



5. ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು



**ಶೌಚಾಲಯ ನಿರ್ಮಾಣಕ್ಕೆ ಆರ್ಥಿಕ ಸಹಾಯ**

1. **ವೈಯಕ್ತಿಕ ಶೌಚಾಲಯ:** ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ಧನ ನೀಡುವುದು ಇದರ ಉದ್ದೇಶ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಈ ಪ್ರೋತ್ಸಾಹಧನ ನೀಡಲಾಗುವುದು. ಅದರಂತೆ ಒಂದು ಕುಟುಂಬಕ್ಕೆ **ರೂ.3000/–**ಗಳನ್ನು ನೀಡಲಾಗುವುದು.

2. **ಶಾಲಾ ಶೌಚಾಲಯ:** ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡುವುದು ಇದರ ಗುರಿ, ಹೆಣ್ಣು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಮಾಡಿಕೊಡಲಾಗುವುದು. ಇದಕ್ಕಾಗಿ **ರೂ.20,000/–**ರೂ.ಗಳ ಅನುದಾನವನ್ನು ನೀಡಲಾಗುವುದು. ಸಮುದಾಯ ಸಹಭಾಗಿತ್ವದಲ್ಲಿ ಇದು ನಿರ್ಮಾಣವಾಗಬೇಕು. ಅದಕ್ಕಾಗಿ ಸಮುದಾಯದಿಂದ **ರೂ.2000/–**ಗಳನ್ನು ಭರಿಸಬೇಕು.

3. ಪ್ರತಿ ಅಂಗನವಾಡಿಯಲ್ಲಿ ಶೌಚಾಲಯವಿರಬೇಕು. ಹೀಗಾಗಿ ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸಲು **ರೂ.5000/–** ನೀಡಲಾಗುವುದು.

4. ಸಮುದಾಯದ ಬಳಕೆಗಾಗಿ ಶೌಚಾಲಯ ನಿರ್ಮಾಣ ಬಹಳ ಅವಶ್ಯಕವಾದುದು, ಇದನ್ನು ನಿರ್ಮಿಸುವ ಮತ್ತು ಇವುಗಳ ನಿರ್ವಹಣೆಯ ಹೊಣೆ ಆಯಾ ಗ್ರಾಮಪಂಚಾಯತಿಯದ್ದಾಗಿರುತ್ತದೆ ಇವುಗಳ ನಿರ್ಮಾಣಕ್ಕೆ **ರೂ.2 ಲಕ್ಷ** ತಲಾ ಖರ್ಚಾಗುವುದು. ಇದರಲ್ಲಿ ಶೇ.60ರಷ್ಟನ್ನು ಕೇಂದ್ರ ಸರ್ಕಾರ ನೀಡುತ್ತದೆ. ಶೇ.20ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಶೇ.20ರಷ್ಟು ಗ್ರಾಮ ಸಮುದಾಯಗಳು ಭರಿಸಿಕೊಡಬೇಕು. ಒಟ್ಟಾರೆ ಸಮುದಾಯ ಸಹಭಾಗಿತ್ವದಲ್ಲಿ ಈ ಶೌಚಾಲಯ ನಿರ್ಮಾಣವಾಗಬೇಕು.

5. **ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು:** ಸಂಪೂರ್ಣ ನೈರ್ಮಲ್ಯ ಸಾಮಗ್ರಿಗಳನ್ನು ಪೂರೈಸುವ ಸಂಪರ್ಕ ಕೇಂದ್ರಗಳಿಗೆ ಈ ಉತ್ಪಾದನಾ ಕೇಂದ್ರಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸುವ ಶೌಚಾಲಯಕ್ಕೆ ಬೇಕಾಗುವ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಈ ಕೇಂದ್ರಗಳ ಕರ್ತವ್ಯ. ಈ ಕೇಂದ್ರಗಳು ಸ್ಥಳೀಯವಾಗಿರುತ್ತವೆ. ಹೀಗಾಗಿ ಜನರ ಕೈಗೆಟುಕುವ ಬೆಲೆಯಲ್ಲಿ ಉತ್ಪಾದಿಸಬಹುದು. ಇದರಿಂದ ಸ್ಥಳೀಯ ನಿರುದ್ಯೋಗಿ, ಕುಶಲಕರ್ಮಿ, ಯುವಕ–ಯುವತಿಯರಿಗೆ ಕೆಲಸವೂ ಲಭ್ಯವಾಗುತ್ತದೆ. ಇಂಥ ಕೇಂದ್ರವನ್ನು ಸ್ಥಾಪಿಸಲು ಗರಿಷ್ಠ 35 ಲಕ್ಷ ರೂಪಾಯಿಗಳನ್ನು ಸರ್ಕಾರ ನಿಗಧಿಪಡಿಸಿ ನೀಡುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇ.80:20ರ ಪ್ರಮಾಣದಲ್ಲಿ ಈ ಮೊತ್ತವನ್ನು ಭರಿಸಿಕೊಡುತ್ತವೆ.



# ಸರ್ವ ಶಿಕ್ಷಣ ಅಭಿಯಾನ

**"ಎಲ್ಲರಿಗೂ ಶಿಕ್ಷಣ"** ಇದು ನಮ್ಮ ಸಂವಿಧಾನದ ಆಶಯ. 2010ರ ವೇಳೆಗೆ ಎಲ್ಲರಿಗೂ ಶಿಕ್ಷಣ ದೊರಕಬೇಕು. ನಮ್ಮ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು. ಅವರು ಅಕ್ಷರ ವಂಚಿತರಾಗಬಾರದು. ಜಾತಿ, ಮತ, ವರ್ಗ, ಲಿಂಗಭೇದವಿಲ್ಲದೇ ಎಲ್ಲರಿಗೂ ಶಿಕ್ಷಣ ಎಟುಕಬೇಕು. ಶಾಲಾ ಪೂರ್ವದಲ್ಲಿ ಬಾಲವಾಡಿ ಮತ್ತು ಅಂಗನವಾಡಿಯಲ್ಲಿ ಉಚಿತ ಶಿಕ್ಷಣ ನೀಡುವುದು, ನಂತರ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೆ ದೊರಕುವಂತೆ ಮಾಡಬೇಕು. ಇದಕ್ಕಾಗಿ 'ಸರ್ವ ಶಿಕ್ಷಣ ಅಭಿಯಾನ' ಕಾರ್ಯಕ್ರಮವನ್ನು ಸರ್ಕಾರ ಆರಂಭಿಸಿದೆ.

**ಗುರಿ**

- 2010 ರೊಳಗೆ ಸಂಪೂರ್ಣ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳು ಪಡೆಯುವಂತೆ ನೋಡಿಕೊಳ್ಳುವುದು
- ಎಲ್ಲಾ ಮಕ್ಕಳ ದಾಖಲಾತಿ ಹಾಜರಾತಿಯ ನಿರ್ವಹಣೆ ಮತ್ತು 8ನೇ ತರಗತಿಯನ್ನು ಪೂರ್ಣಗೊಳಿಸುವುದಕ್ಕೆ ಬೇಕಾದ ಶಿಕ್ಷಣ ವ್ಯವಸ್ಥೆ ಕಲ್ಪಿಸುವುದು.
- ಶಾಲಾ ಗುಣಮಟ್ಟ ಹೆಚ್ಚಿಸುವುದಕ್ಕೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆ ಮಾಡಿಕೊಡುವುದು.
- ಶಿಕ್ಷಕರಿಗೆ ವೈಜ್ಞಾನಿಕ ತರಬೇತಿ ನೀಡುವುದು
- ಗುಣಾತ್ಮಕ ಶಿಕ್ಷಣ ಒದಗಿಸುವಲ್ಲಿ ಸಮುದಾಯಗಳು ಜಾತಿ-ವರ್ಗ-ಲಿಂಗ ಭೇದವಿಲ್ಲದೆ ಪಾಲ್ಗೊಳ್ಳುವಂತೆ ಉತ್ತೇಜನ ನೀಡುವುದು.
- ಶಾಲಾ ನಿರ್ವಹಣಾ ವ್ಯವಸ್ಥೆಯಲ್ಲೂ ಸ್ಥಳೀಯ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಸಹಭಾಗಿಗಳನ್ನು ಮಾಡಿಕೊಳ್ಳುವುದು. ಆ ಮೂಲಕ ಸಂಪೂರ್ಣ ಹಾಗೂ ಸರ್ವರಿಗೂ ಶಿಕ್ಷಣ ದೊರಕುವಂತೆ ನೋಡಿಕೊಳ್ಳುವುದು.

**ಚಟುವಟಿಕೆಗಳು**

ಮೇಲ್ಕಂಡ ಗುರಿಗಳು ಸಾಧನೆಯಾಗಬೇಕಾದರೆ ಅದಕ್ಕಾಗಿಯೇ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಹಾಗೆ ಹಮ್ಮಿಕೊಂಡ ಚಟುವಟಿಕೆಗಳ ಪರಿಚಯ ಈ ಮುಂದಿನಂತಿದೆ.



### 1. ಹೊಸ ಶಾಲೆಗಳು

ಜನವಸತಿ ಪ್ರದೇಶಗಳಲ್ಲಿ ಶಾಲೆಗಳು ಇಲ್ಲದ ಕಡೆ ಹೊಸಶಾಲೆ ತೆರೆಯುವುದು. ಅಂಥ ಶಾಲೆಗೆ ಇಬ್ಬರು ಶಿಕ್ಷಕರನ್ನು ನೇಮಿಸುವುದು, ಪೀಠೋಪಕರಣಗಳಿಗಾಗಿ ಅನುದಾನ ಬಿಡುಗಡೆ ಮಾಡಿಕೊಡಲಾಗುತ್ತದೆ. ಹೊಸಕಟ್ಟಡ ನಿರ್ಮಾಣಕ್ಕಾಗಿ ಎಸ್.ಡಿ.ಎಂ.ಸಿ.ಗಳಿಗೆ ಅನುದಾನ ಬಿಡುಗಡೆ ಮಾಡಿಕೊಡಲಾಗುತ್ತದೆ.

### 2. ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು

ಜನವಸತಿ ಪ್ರದೇಶಗಳಿಗಾಗಿ 3 ಕಿ.ಮಿ. ದೂರ ಹೊಂದಿರುವ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು. ಇಂತಹ ಶಾಲೆಗಳಿಗೆ ಹೆಚ್ಚುವರಿಯಾಗಿ ಒಬ್ಬರು ಶಿಕ್ಷಕರನ್ನು ನೇಮಿಸಲಾಗುವುದು. ಇಂತಹ ಶಾಲೆಗಳಿಗೆ ಭೋಧನಾ/ಕಲಿಕಾ ಸಾಮಗ್ರಿಗಳನ್ನು ವಿಶೇಷವಾಗಿ ಕೊಳ್ಳಬಹುದು. ಅದಕ್ಕಾಗಿ ರೂ.50000/– (ಐವತ್ತು ಸಾವಿರ) ರೂ.ಗಳ ಅನುದಾನವನ್ನು ಪ್ರತಿ ಶಾಲೆಗೆ ಬಿಡುಗಡೆ ಮಾಡುವುದು.



ಮಾಡಿ–ಕಲಿ
ನೋಡಿ–ತಿಳಿ

### 3. ಹೆಚ್ಚುವರಿ ಶಿಕ್ಷಕರ ನೇಮಕ

ಕೆಲವು ಶಾಲೆಗಳಲ್ಲಿ ಮಕ್ಕಳು ಹೆಚ್ಚಿದ್ದು ಶಿಕ್ಷಕರ ಕೊರತೆ ಇರುತ್ತದೆ. ಒಂದು ಶಾಲಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪ್ರಮಾಣದಲ್ಲಿ ಏರುಪೇರು ಇರುತ್ತದೆ. ಇಂತಹ ಶಾಲೆಗಳನ್ನು ಗುರುತಿಸಿ ಮಕ್ಕಳ ಅನುಪಾತಕ್ಕೆ ಸರಿಯಾಗಿ (40:1) ಅಗತ್ಯವಿರುವ ಹೆಚ್ಚುವರಿ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬಹುದು.



### 4. ಹಿರಿಯ ಪ್ರಾಥಮಿಕ ಶಾಲೆಗೆ ಟಿಜಿಟಿ ಶಿಕ್ಷಕರು

5 ಕಿ.ಮಿ.ಗಿಂತ ಹೆಚ್ಚಿನ ದೂರವುಳ್ಳ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಆರಂಭಿಸುವುದು ಮತ್ತು ಹೆಚ್ಚುವರಿ ಶಿಕ್ಷಕರನ್ನು ನೇಮಿಸಲು ಅವಕಾಶ.

### 5. ಶಿಕ್ಷಕರ ಅನುದಾನ

ಇದೊಂದು ವಿನೂತನ ಚಿಂತನೆ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 8ನೇ ತರಗತಿಯಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ ರೂ.500/– (ಐದು ನೂರು) ಅನುದಾನ ನೀಡಲಾಗುವುದು. ಈ ಅನುದಾನವನ್ನು ಪ್ರತಿ ವರ್ಷ ನೀಡಲಾಗುವುದು. ಶಿಕ್ಷಕರು ಈ ಅನುದಾನವನ್ನು ಪಾಠ ಭೋಧನೆಗೆ ಪೂರಕವಾದ ವಸ್ತುಗಳನ್ನು ಖರೀದಿಸಲು ಮತ್ತು ಪೀಠೋಪಕರಣಗಳನ್ನು ಸಿದ್ಧಪಡಿಸಿಕೊಳ್ಳಲು ಬಳಸಬೇಕು. ಈ ಅನುದಾನ ಬಳಕೆ ಮಾಡಿಕೊಳ್ಳುವುದಕ್ಕೆ ನಿರ್ದಿಷ್ಠ ಮಾರ್ಗಸೂಚಿಗಳಿರುತ್ತವೆ. ಈ ಬಗ್ಗೆ 'ಸಿಆರ್‌ಸಿ' ಹಂತದ ಮಾಸಿಕ ಸಭೆಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ.

### 8. ದುರಸ್ತಿ ಮತ್ತು ನಿರ್ವಹಣಾ ಅನುದಾನ

ಶಾಲಾ ಕಟ್ಟಡಗಳ ನಿರ್ವಹಣೆಗೆ ಈ ಅನುದಾನ ದೊರಕುತ್ತದೆ. ಈ ಅನುದಾನವನ್ನು ಕೆಳಕಂಡ ಉದ್ದೇಶಗಳಿಗೆ ಬಳಸಿಕೊಳ್ಳಲು ಅವಕಾಶವಿದೆ.

- ಶಾಲೆಗೆ ಸುಣ್ಣ ಬಣ್ಣ ಮಾಡಿಸುವುದು
- ಸಣ್ಣ ಪುಟ್ಟ ರಿಪೇರಿ ಮಾಡಿಸುವುದು
- ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು
- ಶೌಚಾಲಯ ನಿರ್ವಹಣೆ ಮಾಡಿಕೊಳ್ಳುವುದು





- ಶಾಲಾ ವಿದ್ಯುಚ್ಛಕ್ತಿ ಬಿಲ್‌ಗೆ ಬಳಕೆ ಮಾಡಿಕೊಳ್ಳುವುದು
- ಕ್ಯಾಂಪ್ ಸೌಲಭ್ಯ ಕಲ್ಪಿಸಿಕೊಳ್ಳಲು ಬಳಕೆ ಮಾಡಿಕೊಳ್ಳಬಹುದು. ಈ ಅನುದಾನವು ಕಿರಿಯ ಪ್ರಾಥಮಿಕ ಶಾಲೆಗೆ ರೂ.500/– ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ರೂ.1000/– ವಾಗಿರುತ್ತದೆ.

**7. ಶಾಲಾ ಅನುದಾನ**

ಶಾಲೆಯ ದಿನ ನಿತ್ಯದ ಸಾದಿಲ್ವಾರಿಗೆ ಅನುದಾನ ನೀಡುವುದು. ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಈ ಅನುದಾನ ನೀಡಲಾಗುತ್ತದೆ. ಅಲ್ಲದೇ ಮೊರಾರ್ಜಿ ಶಾಲೆ ಮತ್ತು ಆಶ್ರಯ ಶಾಲೆಗಳಿಗೂ ನೀಡಲಾಗುತ್ತದೆ. ಕಿರಿಯ ಪ್ರಾಥಮಿಕ ಶಾಲೆಗೆ ರೂ.5000/– ಹಿರಿಯ ಪ್ರಾಥಮಿಕ ಶಾಲೆಗೆ ರೂ.12000/ –ರೂ.ಗಳನ್ನು ನೀಡಲಾಗುತ್ತದೆ.

**8. ಶಿಕ್ಷಕರ ತರಬೇತಿ**

ಸೇವಾ ನಿರತ ಶಿಕ್ಷಕರಿಗೆ ಪ್ರತಿ ವರ್ಷ 20 ದಿನಗಳ ತರಬೇತಿ ವ್ಯವಸ್ಥೆ ಮಾಡಲಾಗುತ್ತದೆ. ಹೊಸ ಶಾಲಾ ಶಿಕ್ಷಕರಿಗೆ 30 ದಿನ ತರಬೇತಿ ನೀಡಲಾಗುತ್ತದೆ. ಈ ತರಬೇತಿಯನ್ನು ಪ್ರತಿವರ್ಷ ಆಯಾ 'ಡಯಟ್' ಸಂಸ್ಥೆಯಿಂದ ನೀಡಲಾಗುತ್ತದೆ.





**9. ಎಸ್.ಡಿ.ಎಂ.ಸಿ ತರಬೇತಿ**

ಎಸ್.ಡಿ.ಎಂ.ಸಿಗಳು ಪ್ರತಿಶಾಲೆಯ ಪ್ರಗತಿಗೆ ಕಾವಲು ಸಮಿತಿ ಇದ್ದಂತೆ. ಪ್ರತಿ ಶಾಲೆಯು ಒಂಭತ್ತು ಸದಸ್ಯರ ಸಮಿತಿಯನ್ನು ಒಳಗೊಂಡಿರುತ್ತದೆ ಶಾಲಾ ಹಂತದಲ್ಲಿ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸುವುದು ಈ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಚಟುವಟಿಕೆಗಳ ನಿರ್ವಹಣೆಗೆ ಅನುದಾನ ನೀಡಲಾಗುತ್ತದೆ. ಹೀಗಾಗಿ ಪ್ರತಿ ಎಸ್.ಡಿ.ಎಂ.ಸಿಗಳು ಬ್ಯಾಂಕ್ ಜಂಟಿ ಖಾತೆಯನ್ನು ತೆರೆಯಬೇಕು. ಈ ಜಂಟಿ ಹೆಸರಿನ ಖಾತೆಯು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಎಸ್.ಡಿ.ಎಂ.ಸಿ. ಅಧ್ಯಕ್ಷರ ಹೆಸರಿನಲ್ಲಿರುತ್ತದೆ. ಎಸ್.ಡಿ.ಎಂ.ಸಿ ಸದಸ್ಯರಿಗೆ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವ ತರಬೇತಿಯನ್ನು ಸಹ ನೀಡಲಾಗುತ್ತದೆ.

**10. ಶಾಲೆ ಬಿಟ್ಟ ಮಕ್ಕಳಿಗಾಗಿ ಕಾರ್ಯತಂತ್ರ**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರ್ಪಡೆ ಮಾಡಿಸುವುದು ಈ ಕಾರ್ಯಕ್ರಮದ ಗುರಿ. ಹೀಗಾಗಿ ಪ್ರತಿವರ್ಷ ಮಾರ್ಚ್ ಮತ್ತು ಎಪ್ರಿಲ್‌ನಲ್ಲಿ 6 ರಿಂದ 14ರ ವಯೋಮಾನದ ಮಕ್ಕಳ ಗಣತಿ ಮಾಡುವುದು. ಆ ವೇಳೆ ಗುರುತಿಸಲ್ಪಟ್ಟವರನ್ನು ಕೆಲವು ಕಾರ್ಯತಂತ್ರಗಳ ಮೂಲಕ ಶಾಲೆಗೆ ಸೇರ್ಪಡೆಗೊಳಿಸುವುದು. ಅಂತಹ ಕೆಲವು ಕಾರ್ಯತಂತ್ರಗಳ ಪರಿಚಯ ಈ ಮುಂದಿನಂತಿದೆ.

(ಅ) **ವಿಶೇಷ ದಾಖಲಾತಿ ಆಂದೋಲನ:** ಇದು ಪ್ರತಿ ಗ್ರಾಮದಲ್ಲೂ ಮಕ್ಕಳನ್ನು ಶಾಲೆಗೆ ಸೇರಿಸುವ ಆಂದೋಲನ

(ಆ) **ಚಿಣ್ಣರ ಅಂಗಳ:** ಗಣತಿಯಲ್ಲಿ ಗುರುತಿಸಿದ ಶಾಲೆ ಬಿಟ್ಟ ಮಕ್ಕಳಿಗೆ ಬೇಸಿಗೆ ರಜೆ ಅವಧಿಯಲ್ಲಿ 60 ದಿನಗಳ ಕಾಲ ಕಲಿಕಾ ಆಧಾರಿತ ಚಟುವಟಿಕೆ ನಡೆಸುವುದು.

(ಇ) **ಟೆಂಟ್ ಶಾಲೆ:** ಅನೇಕ ಕಾರಣದಿಂದಾಗಿ ಅನೇಕ ಕುಟುಂಬಗಳು ಮಕ್ಕಳ ಸಮೇತ ವಲಸೆ ಹೋಗುತ್ತಾರೆ. ಇಂಥ ಮಕ್ಕಳಿಗೆ ಅವರು ನೆಲೆಸುವ ಜಾಗದಲ್ಲೇ ಶಿಕ್ಷಣ ನೀಡುವುದು ಇದರ ಉದ್ದೇಶ. ಶಿಕ್ಷಕರು ಹಾಗೂ ಸ್ವಯಂ ಸೇವಕರ ಮೂಲಕ ಈ ಶಿಕ್ಷಣವನ್ನು ನೀಡಲಾಗುತ್ತದೆ. ವಲಸೆಯ ಜಾಗದಲ್ಲಿ ಮಕ್ಕಳು ಮತ್ತೆ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸಬೇಕು. ಅದಕ್ಕಾಗಿ ವಲಸೆ ಕಾರ್ಡುಗಳನ್ನು ಸಹ ನೀಡಲಾಗುವುದು.

(ಈ) **ಆಶಾ ಕಿರಣ:** ವಲಸೆ ಬರುವ ಕುಟುಂಬಗಳ ಮಕ್ಕಳಿಗೆ ಇರುವ ಇನ್ನೊಂದು ಪ್ರಮುಖ ಕಾರ್ಯಕ್ರಮ ಇದು. ವಲಸೆ ಬರುವ ಮಕ್ಕಳನ್ನು ಶಾಲೆಯಲ್ಲೇ ಉಳಿಸಿಕೊಂಡು ಅವರಿಗೆ ಹಾಸ್ಟೆಲ್ ಸೌಲಭ್ಯ






ವಲಸೆ ಬಂದ ಮಕ್ಕಳಿಗೂ ಶಿಕ್ಷಣದ ಅವಕಾಶ

ಒದಗಿಸಿ ಶಿಕ್ಷಣ ನೀಡುವುದು. ಇದನ್ನೇ ಆಶಾಕಿರಣ ಕೇಂದ್ರಗಳೆಂದು ಕರೆಯುತ್ತಾರೆ. ಪ್ರತಿ ಮಗುವಿಗೆ ವರ್ಷಕ್ಕೆ ರೂ.10000/– ಅನುದಾನವನ್ನು ಪ್ರತಿ ಶಾಲೆಗಳಿಗೆ ನೀಡಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಬೇಕು.

**11. ತಿಂಗಳ ವಸತಿ ಸಹಿತ ಸೇತುಬಂಧ ಕಾರ್ಯಕ್ರಮ**

ನಮ್ಮ ಸಮುದಾಯಗಳಲ್ಲಿ ಅನೇಕ ಕಾರಣಗಳಿಗೆ ಮಕ್ಕಳು ಶಾಲೆ ಬಿಡುವುದು ಸಾಮಾನ್ಯ. ಬಡತನ, ವಲಸೆ, ಸಣ್ಣ ಮಕ್ಕಳ ಪೋಷಣೆ, ಹೀಗೆ ನಾನಾ ಕಾರಣಗಳನ್ನು ಕೆಲವು ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುತ್ತವೆ. ಇಂತಹ ಮಕ್ಕಳನ್ನು ಗುರುತಿಸಿ 12 ತಿಂಗಳ ವಸತಿ ಸಹಿತ ಕೇಂದ್ರಗಳಿಗೆ ದಾಖಲು ಮಾಡಿ ಶಿಕ್ಷಣ ನೀಡಬೇಕಾಗುತ್ತದೆ. ಈ ಕೆಲಸಕ್ಕಾಗಿ ಪ್ರತಿ ಮಗುವಿಗೆ ಪ್ರತಿ ವರ್ಷ ರೂ.10,000/– ಅನುದಾನವನ್ನು ಪ್ರತಿ ಶಾಲೆಗಳಿಗೆ ನೀಡಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗುವುದು.

**12. ಪೂರಕ ಶಾಲೆ**

ಜನವಸತಿ ಪ್ರದೇಶಗಳಲ್ಲಿ ವಿವಿಧ ಕಾರಣಗಳಿಂದ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ. ಶಾಲೆಗಳು ಒಂದು ಕಿ.ಮಿ ಒಳಗಿದ್ದರೂ ಸಹ ಎಲ್ಲ ಮಕ್ಕಳು ಶಾಲೆಗೆ ಹೋಗುವುದಿಲ್ಲ ಇಂಥ ಪ್ರದೇಶದ ಎಲ್ಲಾ



ಮಕ್ಕಳಿಗೆ ಶಾಲಾ ಸೌಲಭ್ಯ ಒದಗಿಸಲು ಪೂರಕ ಶಾಲೆಗಳನ್ನು ತೆರೆಯಬೇಕು. ಪ್ರತಿ ಮಗುವಿಗೆ ಈ ಸೌಲಭ್ಯ ನೀಡಲು ಪ್ರತಿ ಮಗುವಿಗೆ ಹೆಸರಿನಲ್ಲಿ ರೂ.3000/–ರಂತೆ ಎಸ್.ಡಿ.ಎಂ.ಸಿ.ಗೆ ಅನುದಾನ ನೀಡಲಾಗುತ್ತದೆ.

**13. ಸಾರಿಗೆ ಸೌಲಭ್ಯ**

ಶಾಲೆ ಕಲಿಯಲು ಬರುವ ಮಕ್ಕಳಿಗೆ ಕೆಲವು ಮೂಲಭೂತ ಸೌಕರ್ಯಗಳ ಕೊರತೆ ಎದುರಾಗುತ್ತದೆ. ಅಂತಹದರಲ್ಲಿ ಸಾರಿಗೆ ವ್ಯವಸ್ಥೆಯು ಒಂದು. ಶಾಲೆ ದೂರ ಎಂಬ ಕಾರಣಕ್ಕಾಗಿಯೇ ಎಷ್ಟೋ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಹೀಗಾಗಿ ಅವರು ಶಾಲೆಗೆ ತಪ್ಪದೇ ಹಾಜರಾಗಬೇಕು. ಅದಕ್ಕೆಂದು ಪ್ರತಿ ಮಗುವಿಗೆ ಶಾಲೆಗೆ ಹಾಜರಾಗುವಂತೆ ಅನುಕೂಲವಾಗಲು ರೂ.150/–ರಂತೆ ಸಾರಿಗೆ ಸೌಕರ್ಯಕ್ಕೆ ಅನುದಾನವನ್ನು ಎಸ್.ಡಿ.ಎಂ.ಸಿಗೆ ನೀಡಲಾಗುವುದು.

**14. ಗೃಹಾಧಾರಿತ ಶಿಕ್ಷಣ**

ನಮ್ಮ ಸಮುದಾಯದ ಕುಟುಂಬಗಳಲ್ಲಿ ಸುಮಾರು ವಿಶೇಷ ಅಗತ್ಯವುಳ್ಳ ಮಕ್ಕಳಿದ್ದಾರೆ. ಅನೇಕ ನ್ಯೂನ್ಯತೆಯ ಕಾರಣಗಳಿಂದ ಕೆಲವು ಮಕ್ಕಳು ಶಾಲೆಗೆ ಬರುವುದಿಲ್ಲ ಅಂತಹ ಮಕ್ಕಳು ಇರುವ ಮನೆಗಳಲ್ಲೇ ಅವರಿಗೆ ಶಿಕ್ಷಣ ನೀಡಬೇಕಾಗುತ್ತದೆ. ಶಾಲೆಗೆ ಬರಲಾಗದವರು ಮನೆಯಲ್ಲೇ ಶಿಕ್ಷಣ ಪಡೆದು ವಿದ್ಯಾವಂತರಾಗಬೇಕು. ಅದಕ್ಕಾಗಿ ಅವಕಾಶ ಕಲ್ಪಿಸುವುದೇ ಈ ಯೋಜನೆಯ ಉದ್ದೇಶ. ತರಬೇತಿ ಪಡೆದ ಸ್ವಯಂ ಸೇವಕರು ಅಂತಹ ಮಕ್ಕಳ ಮನೆಗೆ ತೆರಳಿ ಅವರ ಕನಿಷ್ಠ ಕಲಿಕೆಗೆ ಅವಶ್ಯವಿರುವ ಶಿಕ್ಷಣವನ್ನು ನೀಡುವರು. ಪ್ರತಿ ಮಗುವಿಗೆ ವರ್ಷಕ್ಕೆ ರೂ.3500/– ರಂತೆ ಖರ್ಚು ಮಾಡಲು ಎಸ್.ಡಿ.ಎಂ.ಸಿ. ಅವಕಾಶ ನೀಡಿ ಅನುದಾನ ನೀಡಲಾಗುತ್ತದೆ.

**ಇತರೇ ಸೌಲಭ್ಯಗಳು**

ಈ ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಇನ್ನೂ ಕೆಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿದೆ. ಉದಾ:

- ವೈದ್ಯಕೀಯ ತಪಾಸಣೆ
- ಅಗತ್ಯ ಸಾಧನೋಪಕರಣಗಳ ವಿತರಣೆ
- ಸಂಪನ್ಮೂಲ ಶಿಕ್ಷಕರ ವೇತನ
- ಶಿಕ್ಷಕರ ತರಬೇತಿ



- ಪೋಷಕರ ತರಬೇತಿ
- ಗೃಹಾಧಾರಿತ ಶಿಕ್ಷಣ

ಮೇಲ್ಕಂಡ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸಲು ಪ್ರತಿ ಮಗುವಿಗೆ ರೂ.1200/–ಗಳನ್ನು ಅನುದಾನ ರೂಪದಲ್ಲಿ ನೀಡಲಾಗುತ್ತದೆ.

### 15. ಎನ್.ಸಿ.ಎಲ್.ಸಿ. ಶಾಲೆಗಳು

ಕಾರ್ಮಿಕ ಇಲಾಖೆಯ ವತಿಯಿಂದ ನಡೆಯುತ್ತಿರುವ ರಾಷ್ಟ್ರೀಯ ಬಾಲ ಕಾರ್ಮಿಕ ವಸತಿ ರಹಿತ ಶಾಲೆಗಳಿಗಾಗಿ ಇರುವ ಕಾರ್ಯಕ್ರಮ ಇಂಥ ಶಾಲೆಗಳಿಗೆ ಸಾಮಾನ್ಯವಾಗಿ ಅನುದಾನದ ಕೊರತೆ ಇರುತ್ತದೆ. ಅದಕ್ಕಾಗಿ ವರ್ಷಕ್ಕೆ ರೂ.3000/–ದಂತೆ ಅನುದಾನವನ್ನು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿ ನೀಡಲಾಗುತ್ತದೆ.



ಮಕ್ಕಳ ಕಲಿಕೆಗೆ
ಗ್ರಂಥಾಲಯ ಸೌಲಭ್ಯ

### 16. ಹೆಣ್ಣು ಮಕ್ಕಳ ಶಿಕ್ಷಣ

ಪ್ರಸಕ್ತ ಶಿಕ್ಷಣ ಕಾರ್ಯಕ್ರಮಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಬೇಕಾಗಿದೆ. ಇದಕ್ಕಾಗಿ ಮಹಿಳಾ ಸಾಕ್ಷರತೆ ಕಡಿಮೆ ಇರುವ ತಾಲ್ಲೂಕು ಹಾಗೂ ಕ್ಲಸ್ಟರ್‌ಗಳಲ್ಲಿ ಪ್ರಾಥಮಿಕ ಹಂತದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿಯೇ ಈ ಕಾರ್ಯಕ್ರಮ ರೂಪಿಸಲಾಗಿದೆ. "ಕಸ್ತೂರಬಾ ಗಾಂಧಿ ಬಾಲಿಕಾ ಶಾಲೆ" ಮೂಲಕ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ಮಾದರಿ ಕ್ಲಸ್ಟರ್ ಶಾಲೆಗಳ ಮೂಲಕ



ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಈ ಮುಂದಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ.

- ಪ್ರತಿ ಕ್ಲಸ್ಟರ್‌ಗೆ ಹೆಚ್ಚುವರಿ ಕೊಠಡಿ
- ಕಲಿಕಾ ಮತ್ತು ಬೋಧನಾ ಸಾಮಗ್ರಿ (ಬಿಎಲ್‌ಎಂ)
- ಕ್ರೀಡಾ ಸಾಮಗ್ರಿ
- ಗ್ರಂಥಾಲಯ
- ಶೌಚಾಲಯ
- ಕುಡಿಯುವ ನೀರಿನ ಸೌಲಭ್ಯ

ಮೇಲ್ಕಂಡ ಸೌಲಭ್ಯಗಳ ಜೊತೆ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು. ಪ್ರತಿ ಕ್ಲಸ್ಟರ್‌ಗೆ ರೂ.7000/–ಗಳ ಅನುದಾನವನ್ನು ನೀಡಲಾಗುವುದು. ಈ ಚಟುವಟಿಕೆಗಳಲ್ಲದೇ 'ಎಲ್ಲರಿಗೂ ಶಿಕ್ಷಣ' ದೊರಕಿಸಿಕೊಡುವ ಅನೇಕ ವಿಶೇಷ ಚಟುವಟಿಕೆಗಳನ್ನು ಶಿಕ್ಷಣ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ಎಲ್ಲಾ ಶಾಲೆಗಳಿಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡುವುದು, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳ ನಿರ್ಮಾಣ ಕಾಂಪೌಂಡ್ ನಿರ್ಮಾಣ, ವಿದ್ಯುತ್ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ನಿರ್ಮಿಸಿಕೊಡಲು ಅನುದಾನ ನೀಡಲಾಗುತ್ತದೆ. ಹದಿಹರೆಯದ ಮಕ್ಕಳಿಗೆ ಜಾಗೃತಿ ಶಿಬಿರ. ಆಧುನಿಕ ಜಗತ್ತಿನ ಬೇಡಿಕೆಗೆ ಅನುದಾನವಾಗಿ ಕಂಪ್ಯೂಟರ್ ತರಬೇತಿ ನೀಡುವುದು ಹಾಗೂ ಶಾಲೆಗಳಿಗೆ ಕಂಪ್ಯೂಟರ್‌ಗಳ ನೀಡಿಕೆ. ನಗರ ಪ್ರದೇಶದಲ್ಲಿ ಹೊರಗುಳಿದ ಮಕ್ಕಳನ್ನು ಸಹ ಶಾಲೆಗೆ ಕರೆ ತರುವ ಕಾರ್ಯಕ್ರಮಕ್ಕೂ ಅವಕಾಶವಿದೆ. ಮುಸ್ಲಿಂ, ಅಲ್ಪಸಂಖ್ಯಾತ ಸಮುದಾಯದಲ್ಲಿರುವ ಮಕ್ಕಳಿಗೆ ವಿಶೇಷ ಆದ್ಯತೆ. ಅವರ ಕುಟುಂಬದ ಪೋಷಕರಿಗೆ ಶಿಕ್ಷಣದ ಮಹತ್ವ ಸಾರುವ ಜಾಗೃತಿ ಶಿಬಿರ ಏರ್ಪಾಡು, ವಿಚಾರಗೋಷ್ಠಿಗಳು, ಮಕ್ಕಳಿಗೆ ವಿಜ್ಞಾನ ಮತ್ತು ಗಣಿತ ಮೇಳಗಳನ್ನು ಸಂಘಟಿಸುವುದಕ್ಕೆ ಅವಕಾಶವಿದೆ. ಒಟ್ಟಾರೆ ಸಮಗ್ರ ಹಾಗೂ ಸಂಪೂರ್ಣ ಕಡ್ಡಾಯ ಶಿಕ್ಷಣ ಸರ್ವರಿಗೂ ಶಿಕ್ಷಣ ನೀಡುವುದಕ್ಕಾಗಿ ಶಿಕ್ಷಣ ಇಲಾಖೆಯಲ್ಲಿ ವಿಫುಲ ಅವಕಾಶಗಳಿವೆ.



# ಸಾಕ್ಷರ ಭಾರತ್ – ಕೇಂದ್ರ ಸರಕಾರದ ಕಾರ್ಯಕ್ರಮ




- 15ಕ್ಕಿಂತ ಹೆಚ್ಚಿನ ವಯಸ್ಸಿನ ಅನಕ್ಷರಸ್ಥರು, ನವಸಾಕ್ಷರರಿಗೆ ವಿವಿಧ ಕಲಿಕಾ ಕಾರ್ಯಕ್ರಮಗಳ ಮೂಲಕ ಸಾಕ್ಷರ ಸಮಾಜ ನಿರ್ಮಿಸುವ ಕಾರ್ಯಕ್ರಮವೇ "ಸಾಕ್ಷರ ಭಾರತ್".
- ರಾಷ್ಟ್ರದಲ್ಲಿ ಶೇ.50ಕ್ಕಿಂತ ಕಡಿಮೆ ಸಾಕ್ಷರತಾ ಪ್ರಮಾಣ ಇರುವ ಒಟ್ಟು 26 ರಾಜ್ಯಗಳ 365 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನದಲ್ಲಿದೆ.
- ಕರ್ನಾಟಕದ ಒಟ್ಟು 17 ಜಿಲ್ಲೆಗಳಲ್ಲಿ 16 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನವಾಗಿದೆ. ಅವುಗಳೆಂದರೆ, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿ, ಹಾವೇರಿ, ಕೊಪ್ಪಳ, ಗದಗ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಬೀದರ್, ತುಮಕೂರು, ಚಿತ್ರದುರ್ಗ.
- ಶೇಕಡ 85ರಷ್ಟು ಅನಕ್ಷರಸ್ಥ ಮಹಿಳೆಯರು, ಶೇ.15ರಷ್ಟು ಅನಕ್ಷರಸ್ಥ ಪುರುಷರಿಗೆ ಕಲಿಕೆ ಅವಕಾಶವನ್ನು ಈ ಯೋಜನೆಯಲ್ಲಿ ಕಲ್ಪಿಸಲಾಗಿದೆ.



### ಗುರಿ

- 2012ರೊಳಗೆ ರಾಷ್ಟ್ರದ 70ಮಿಲಿಯನ್ ಅನಕ್ಷರಸ್ಥ ವಯಸ್ಕರನ್ನು ಸಾಕ್ಷರರನ್ನಾಗಿ ಮಾಡುವ ಮೂಲಕ ಶೇ.80ರಷ್ಟು ಸಾಕ್ಷರತಾ ಪ್ರಮಾಣ ಸಾಧನೆ ಮಾಡುವುದು.
- ಕರ್ನಾಟಕದಲ್ಲಿ ಶೇ.85ರಷ್ಟು ಸಾಕ್ಷರತೆ ಸಾಧಿಸುವುದು.
- ಸಾಕ್ಷರತಾ ಪ್ರಮಾಣದಲ್ಲಿ ಲಿಂಗತಾರತಮ್ಯವನ್ನು ಶೇ.10ರಷ್ಟು ಕಡಿಮೆಗೊಳಿಸುವುದು.
- ಮಹಿಳಾ ಸಾಕ್ಷರತಾ ಪ್ರಮಾಣ ಹೆಚ್ಚಿಸುವುದು.
- ಪ್ರಾದೇಶಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
- 2015ಕ್ಕೆ ಸಾಕ್ಷರ ಸಮಾಜ ನಿರ್ಮಾಣ ಮಾಡುವುದು. ಈ ಯೋಜನೆಯ ಗುರಿಯಾಗಿದೆ.

### ಉದ್ದೇಶಗಳು

- 15 ವಯಸ್ಸಿಗಿಂತ ಮೇಲ್ಪಟ್ಟ ಎಲ್ಲಾ ಅನಕ್ಷರಸ್ಥರಿಗೆ 'ಕ್ರಿಯಾತ್ಮಕ ಸಾಕ್ಷರತೆ' ನೀಡುವುದು.
- ಮೂಲ ಸಾಕ್ಷರತೆಯ ನಂತರ ಸಮಾನ ಶಿಕ್ಷಣ ಕಾರ್ಯಕ್ರಮವನ್ನು ಬೇಡಿಕೆ ಆಧಾರದ ಮೇಲೆ ಒದಗಿಸುವುದು.
- ನಿರಂತರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆಗೆ ಅವಕಾಶ. ಜೀವನದ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ ಅಭಿವೃದ್ಧಿ.
- ಮಹಿಳೆಯರು, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಅಲ್ಪಸಂಖ್ಯಾತರಿಗೆ (ಮುಸ್ಲಿಂ ಸಮುದಾಯ) ವಿಶೇಷ ಆದ್ಯತೆ ನೀಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.

### ಅನುಷ್ಠಾನದ ಮಾರ್ಗೋಪಾಯಗಳು

ಲೋಕ ಶಿಕ್ಷಣ ಕೇಂದ್ರಗಳನ್ನು ಗ್ರಾಮಗಳಲ್ಲಿ ಆರಂಭಿಸುವ ಮೂಲಕ ಅನಕ್ಷರಸ್ಥರಿಗೆ ಕಲಿಸುವ ವ್ಯವಸ್ಥೆ ಮಾಡಬೇಕು.

### ಲೋಕ ಶಿಕ್ಷಣ ಕೇಂದ್ರದ ಚಟುವಟಿಕೆಗಳು (30 ತಿಂಗಳ ಕಾರ್ಯಕ್ರಮ)

| | |
|---|---|
| 1. ಮೂಲ ಸಾಕ್ಷರತೆ | : 6 ತಿಂಗಳು (200 ಗಂಟೆ ಕಲಿಕೆ) |
| ಸೇತುಬಂಧ ಕಾರ್ಯಕ್ರಮ | : 4 ತಿಂಗಳು (100 ಗಂಟೆ ಕಲಿಕೆ) |
| 2. ಮೂಲ ಶಿಕ್ಷಣ (ಸಮಾನ ಶಿಕ್ಷಣ) | : 6 ತಿಂಗಳು |
| 3. ವೃತ್ತಿ ಕೌಶಲ ತರಬೇತಿ | : 6 ತಿಂಗಳು |
| 4. ನಿರಂತರ ಶಿಕ್ಷಣ | : 18 ತಿಂಗಳು |



## ವಿವಿಧ ಸಮಿತಿಗಳು

### ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿ

| | |
|---|---|
| ಅಧ್ಯಕ್ಷರು | ಗ್ರಾಮ ಪಂಚಾಯಿತಿ ಅಧ್ಯಕ್ಷರು |
| ಉಪಾಧ್ಯಕ್ಷರು | ಸದಸ್ಯರಲ್ಲಿ ಒಬ್ಬರು |
| ಸದಸ್ಯರು | • ಗ್ರಾಮ ಪಂಚಾಯಿತಿಯ ಇಬ್ಬರು ಮಹಿಳಾ ಪ್ರತಿನಿಧಿಗಳು<br>• ಸ್ಥಳೀಯ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರು / ಶಿಕ್ಷಕರು<br>• ಮೂವರು ಅಲ್ಪಸಂಖ್ಯಾತರು / ಪ.ಜಾತಿ / ಪ.ವರ್ಗ ಸಮುದಾಯದ ಪ್ರತಿನಿಧಿಗಳು (ತಲಾ ಒಬ್ಬರಂತೆ)<br>• ಶಿಕ್ಷಣ ಸ್ಥಾಯಿ ಸಮಿತಿ ಸದಸ್ಯರು<br>• ಮಹಿಳಾ ಮಂಡಳಿ ಅಥವಾ ಸ್ವಸಹಾಯ ಸಂಘದ ಸದಸ್ಯರು<br>• ಇಬ್ಬರು ಪಾಲಕರ ಗುಂಪಿನಿಂದ ಆರಿಸಿದ ಸದಸ್ಯರು<br>• ಸಮಾಜ ಸೇವಾ ಕಾರ್ಯಕರ್ತರು<br>• ಸಾಕ್ಷರಸ್ಥರು / ಹಿರಿಯ ಪ್ರೇರಕರು |
| ಸದಸ್ಯ ಕಾರ್ಯದರ್ಶಿ | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು / ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು. |

### ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿ ಜವಾಬ್ದಾರಿಗಳು

- ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿ ರಚನೆ (ಗ್ರಾಮ ಪಂಚಾಯಿತಿ ಜವಾಬ್ದಾರಿ)
- ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಂಯೋಜಕರ ಆಯ್ಕೆ
- ಕಾರ್ಯಕ್ರಮ ಪರಿಣಾಮಕಾರಿ ಅನುಷ್ಠಾನಕ್ಕೆ ಸೂಕ್ಷ್ಮ ಕ್ರಿಯಾಯೋಜನೆ ಸಿದ್ಧಪಡಿಸುವುದು.
- ಸಮೀಕ್ಷೆಯನ್ನು ನಡೆಸಿ ಕಲಿಕಾರ್ಥಿಗಳನ್ನು ಗುರುತಿಸುವುದು.
- ಕಲಿಕಾರ್ಥಿಗಳ ಪಟ್ಟಿಯನ್ನು ವರ್ಗೀಕರಣ ಮಾಡಿ ಹೊಂದಾಣಿಕೆ ಪಟ್ಟಿ ಸಿದ್ಧಪಡಿಸುವುದು.
- ಲೋಕ ಶಿಕ್ಷಣ ಕೇಂದ್ರದ ಸ್ಥಳ ಗುರುತಿಸುವುದು.
- ಕಲಿಕಾ ಮತ್ತು ಬೋಧನಾ ಸಲಕರಣೆಗಳ ಪೂರೈಕೆ ಮತ್ತು ವಿತರಣೆ
- ಗ್ರಾಮ ಪಂಚಾಯಿತಿ ಮಟ್ಟದ ಲೋಕ ಶಿಕ್ಷಣ ಕೇಂದ್ರದ ಬ್ಯಾಂಕ್ ಖಾತೆ ತೆರೆಯುವುದು.



- ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಅಂತರ್‌ಜಾಲ ಸಂಪರ್ಕ ವ್ಯವಸ್ಥೆ ಮಾಡುವುದು.
- ಸಮಾನ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನ.
- ವೃತ್ತಿ ಕೌಶಲ ತರಬೇತಿ ಅನುಷ್ಠಾನ (ಆಯ್ದ ಕಲಿಕಾರ್ಥಿಗಳು)
- ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ ಹಾಗೂ ವರದಿ ಮಾಡುವುದು.
- ಕಲಿಕೆಯ ಪ್ರಗತಿ ದಾಖಲಾತಿ.
- ಲೆಕ್ಕಪತ್ರಗಳ ನಿರ್ವಾಹಣೆ, ಬ್ಯಾಂಕ್ ಪ್ರಮಾಣಪತ್ರ / ಗೌರವಧನ ವಿತರಣೆ.
- ಸಾಕ್ಷರತಾ ಪ್ರಗತಿಯ ಘೋಷಣೆ.

**ತಾಲ್ಲೂಕು ಲೋಕ ಶಿಕ್ಷಣ ಸಮಿತಿ**

ಗ್ರಾಮ ಪಂಚಾಯಿತಿ ಮಟ್ಟದ ಲೋಕ ಶಿಕ್ಷಣ ಸಮಿತಿಯ ಮೇಲಿನ ಹಂತದಲ್ಲಿ ಕೆಲವು ಸಮಿತಿಗಳಿವೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

1. *ತಾಲ್ಲೂಕು ಲೋಕ ಶಿಕ್ಷಣ ಸಮಿತಿ:* ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.
2. *ಜಿಲ್ಲಾ ಲೋಕ ಶಿಕ್ಷಣ ಸಮಿತಿ:* ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.
3. *ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಆಡಳಿತ ಮಂಡಳಿ:* ಸರಕಾರದ ಮಟ್ಟದ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ.
4. *ರಾಜ್ಯ ಸಂಪನ್ಮೂಲ ಕೇಂದ್ರ (ಎಸ್‌ಆರ್‌ಸಿ):* ಕಲಿಕಾ ಸಾಮಗ್ರಿ ತಯಾರಿ, ವಿವಿಧ ತರಬೇತಿಗಳ ನಿರ್ವಹಣೆ.
5. *ಜನಶಿಕ್ಷಣ ಸಂಸ್ಥಾನ:* ಸಂಪನ್ಮೂಲ ಸಂಸ್ಥೆಯಾಗಿ ಕಾರ್ಯ ನಿರ್ವಹಣೆ, ವೃತ್ತಿ ತರಬೇತಿಗಳ ವ್ಯವಸ್ಥೆ ಮಾಡುವುದು.



# ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ

ಆರೋಗ್ಯ ಎನ್ನುವುದು ಸಮುದಾಯದ ಹಕ್ಕು. ಆರೋಗ್ಯದ ಸೌಲಭ್ಯಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿ. ಆದರೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಜನರ ಆರೋಗ್ಯದ ಪರಿಸ್ಥಿತಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದಕ್ಕೆ ಹಲವು ಕಾರಣಗಳಿವೆ. ಪ್ರಮುಖವಾಗಿ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆಗಳನ್ನು ಪರಿಪೂರ್ಣವಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಈ ಕೊರತೆಯನ್ನು ನೀಗಿಸಬೇಕು, ಜನರ ಆರೋಗ್ಯದ ಹಕ್ಕು ಅವರಿಗೆ ಲಭ್ಯವಾಗಬೇಕು, ಈ ನಿಟ್ಟಿನಲ್ಲಿ ಸಮುದಾಯ, ಸರಕಾರ ಮತ್ತು ಜನ ಸಂಘಟನೆಗಳ ಸಂಘಟಿತ ಪ್ರಯತ್ನ ನಡೆಯಬೇಕು. ಈ ಉದ್ದೇಶದಿಂದ **ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ** ಕಾರ್ಯಕ್ರಮವನ್ನು ಸರಕಾರ ಜಾರಿಗೊಳಿಸಿದೆ.

**ಅಭಿಯಾನದ ಉದ್ದೇಶಗಳು**

ಗ್ರಾಮೀಣ ಜನರ ಆರೋಗ್ಯದ ಪರಿಸ್ಥಿತಿಯನ್ನು ಗಣನೀಯವಾಗಿ ಸುಧಾರಿಸುವ ಪ್ರಮುಖ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಪ್ರಮುಖ ಉದ್ದೇಶಗಳು ಹೀಗಿವೆ:

1. ಒಟ್ಟಾರೆಯಾಗಿ ದೇಶದ ಆರೋಗ್ಯ ಪರಿಸ್ಥಿತಿಯಲ್ಲಿ ಸುಧಾರಣೆ ತರುವುದು: ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ಜನರ ಆರೋಗ್ಯ ಪರಿಸ್ಥಿತಿಯ ಸುಧಾರಣೆಗೆ ಶ್ರಮಿಸುವುದು.
2. ಸಾರ್ವಜನಿಕರಿಗೆ ಅದರಲ್ಲೂ ಮುಖ್ಯವಾಗಿ ಬಡವರಿಗೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಯು ಸಿಗುವಂತೆ ಮಾಡುವುದು.
3. ಆರೋಗ್ಯ ಸೇವೆಗಳ ಸುಧಾರಣೆ ತರುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪಾಲುದಾರಿಕೆಯನ್ನು ಹೊಂದುವಂತೆ ಮಾಡುವುದು.
4. ಪ್ರಾಥಮಿಕ ಆರೋಗ್ಯ ಕಾರ್ಯಕ್ರಮಗಳು ಮತ್ತು ಮೂಲ ಸೌಕರ್ಯಗಳ ನಿರ್ವಹಣೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸಮುದಾಯ ಭಾಗಿಗಳಾಗುವಂತೆ ನೋಡಿಕೊಳ್ಳುವುದು.
5. ಆರೋಗ್ಯದ ಅಗತ್ಯಗಳನ್ನು ಸ್ಥಳೀಯವಾಗಿ ಪೂರೈಸಿಕೊಳ್ಳಲು ಅವಕಾಶ ಕಲ್ಪಿಸುವುದು.
6. ವಿವಿಧ ರೀತಿಯ ಆರೋಗ್ಯ ಸೇವೆಗಳನ್ನು ಒಟ್ಟುಗೂಡಿಸಿ ಜಾರಿಗೊಳಿಸುವುದು.
7. ಸ್ಥಳೀಯ ಆರೋಗ್ಯ ಪದ್ಧತಿಗಳನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡು ಬಳಸಿಕೊಳ್ಳುವುದು.
8. ಆರೋಗ್ಯ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಗಳ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದು.






**ಗ್ರಾಮೀಣ ಜನರಿಗೆ ಆರೋಗ್ಯದ ಕುರಿತು ಮಾಹಿತಿ**

9. ಸಾರ್ವಜನಿಕ ಆರೋಗ್ಯ ಸೇವೆಗಳನ್ನು ನೂರಕ್ಕೆ ನೂರು ಮಂದಿ ಬಳಸಿಕೊಳ್ಳುವಂತೆ ನೋಡಿಕೊಳ್ಳುವುದು.
10. ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಯೋಜನೆಯನ್ನು ರೂಪಿಸುವುದು ಮತ್ತು ಈ ಯೋಜನೆಯಲ್ಲಿ ನೈರ್ಮಲ್ಯ ಕಾರ್ಯಕ್ರಮಗಳನ್ನು ಸೇರಿಸಿಕೊಳ್ಳುವುದು.
11. ಕಾಯಿಲೆಗಳು ಬರದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು.
12. ರೋಗ ನಿಯಂತ್ರಣ ಕಾರ್ಯಕ್ರಮಗಳನ್ನು ಬಲಪಡಿಸುವುದು.
13. ಆರೋಗ್ಯ ಪರಿಸ್ಥಿತಿಯ ಸುಧಾರಣೆಯಲ್ಲಿ ಸರಕಾರಿ ಮತ್ತು ಖಾಸಗಿ ವಲಯಗಳು ಕೈಜೋಡಿಸುವಂತೆ ಮಾಡುವುದು.
14. ಆರೋಗ್ಯ ಕಾರ್ಯಕ್ರಮಗಳಿಗಾಗಿ ವಿಶೇಷವಾಗಿ ಹಣಕಾಸು ವ್ಯವಸ್ಥೆಯನ್ನು ಮಾಡುವುದು.
15. ಮೇಲಿನ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಿರುವ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸುವುದು.

ಮೇಲಿನ ಎಲ್ಲಾ ಉದ್ದೇಶಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಬೇಕು.



ಜನರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಬೇಕು. ಆರೋಗ್ಯದ ಸೌಲಭ್ಯಗಳು ಮತ್ತು ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗಬೇಕು. ಆರೋಗ್ಯದ ವಿಷಯದಲ್ಲಿ ಸಾಮಾಜಿಕ ತಾರತಮ್ಯ ಹೋಗಬೇಕು. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳು ವಿಶೇಷ ಗಮನ ನೀಡಿ ಕಾರ್ಯ ಪ್ರವೃತ್ತರಾಗಬೇಕು. ಅದಕ್ಕಾಗಿಯೇ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

**ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ**

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ತಳಮಟ್ಟದಲ್ಲಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ಇವೆ. ಈ ಸಮಿತಿಗಳು ನೇರವಾಗಿ ಗ್ರಾಮ ಪಂಚಾಯಿತಿಯ ಕಾರ್ಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ 1,000 ಜನಸಂಖ್ಯೆಯನ್ನು ಮೀರಿದ ಕಂದಾಯ ಗ್ರಾಮಗಳಿಗೆ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳ ರಚನೆ ಮಾಡಬೇಕಿದೆ. ಈ ಸಮಿತಿಗಳ ರಚನೆಯ ಉದ್ದೇಶಗಳು ಹೀಗಿವೆ:

- ಗ್ರಾಮ ಪಂಚಾಯಿತಿಯ ಸಹಕಾರ ಮತ್ತು ಸಮನ್ವಯದೊಂದಿಗೆ ಸಮುದಾಯದಲ್ಲಿ ಆರೋಗ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು.
- ಆರೋಗ್ಯ ಸೇವೆಗಳನ್ನು ಪಡೆಯುವ ಮೂಲಕ ಆರೋಗ್ಯ ಪರಿಸ್ಥಿತಿಯಲ್ಲಿ ಸಧಾರಣೆ ತರುವುದು.
- ಅಭಿವೃದ್ಧಿಗೂ ಆರೋಗ್ಯಕ್ಕೂ ಇರುವ ಸಂಬಂಧವನ್ನು ಜನರಿಗೆ ಮನವರಿಕೆ ಮಾಡುವುದು.
- ಆರೋಗ್ಯ ಪರಿಸ್ಥಿತಿಯ ಸುಧಾರಣೆಯ ಪ್ರಯತ್ನದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.
- ಹೆಚ್.ಐ.ವಿ./ಏಡ್ಸ್ ಮತ್ತಿತರ ಸೋಂಕುಗಳನ್ನು ತಡೆಗಟ್ಟುವ ಕಾರ್ಯದಲ್ಲಿ ಜನರಿಗೆ ತಿಳುವಳಿಕೆ ನೀಡುವುದು.
- ತಮ್ಮ ಗ್ರಾಮದ ಆರೋಗ್ಯ ಪರಿಸ್ಥಿತಿಯ ಸುಧಾರಣೆಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.
- ಗ್ರಾಮದ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವುದನ್ನು ಖಾತರಿ ಪಡಿಸುವುದು.
- ಗ್ರಾಮದಲ್ಲಿನ ನೈರ್ಮಲ್ಯ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ಎಲ್ಲಾ ಕುಟುಂಬಗಳು ಶೌಚಾಲಯವನ್ನು ಹೊಂದುವಂತೆ ನೋಡಿಕೊಳ್ಳುವುದು.
- ಸಾಂಕ್ರಾಮಿಕ ರೋಗಗಳ ನಿವಾರಣೆಗೆ ನೀಡಲಾಗುತ್ತಿರುವ ಸಾರ್ವತ್ರಿಕ ಚುಚ್ಚುಮದ್ದು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದು.
- ಆರೋಗ್ಯ ಸಹಾಯಕರು ನಿಯಮಿತವಾಗಿ ಗ್ರಾಮಗಳಿಗೆ ಭೇಟಿ ನೀಡಿ ಸಮುದಾಯಕ್ಕೆ ಆರೋಗ್ಯ ಸೇವೆಗಳು ಮತ್ತು ಸೌಲಭ್ಯಗಳ ಮಾಹಿತಿಯನ್ನು ನೀಡುವಂತೆ ನೋಡಿಕೊಳ್ಳುವುದು.





- ಗರ್ಭಿಣಿ ಮಹಿಳೆಯರು ತುರ್ತಾಗಿ ಆಸ್ಪತ್ರೆಗೆ ಹೋಗಬೇಕಾದಾಗ ಅವಶ್ಯಕತೆಗನುಗುಣವಾಗಿ ವಾಹನ ಸೌಲಭ್ಯವನ್ನು ಒದಗಿಸುವುದು.
- 100ಕ್ಕೆ 100 ಹೆರಿಗೆಗಳು ಆಸ್ಪತ್ರೆಯಲ್ಲೇ ಆಗುವಂತೆ ನೋಡಿಕೊಳ್ಳುವುದು.
- ಆರೋಗ್ಯ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಕಷ್ಟು ಔಷಧಿ, ವೈದ್ಯರು ಮತ್ತು ಸಿಬ್ಬಂದಿಗಳು ಇರುವಂತೆ ನೋಡಿಕೊಳ್ಳುವುದು.
- ಎಲ್ಲಾ ಅಂಗನವಾಡಿಗಳಲ್ಲಿ ಬಾಲ ವಿಕಾಸ ಸಮಿತಿಗಳ ರಚನೆಗೆ ಕ್ರಮ ವಹಿಸುವುದು.
- ಗ್ರಾಮದ ವ್ಯಾಪ್ತಿಯ ಎಲ್ಲಾ ಮಕ್ಕಳಿಗೆ ಪೌಷ್ಠಿಕ ಆಹಾರ, ಗರ್ಭಿಣಿ ಮತ್ತು ಬಾಣಂತಿಯರಿಗೆ ಸಿಗಬೇಕಾದ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳುವುದು.
- ಸಾರ್ವಜನಿಕ ಚರಂಡಿ, ಬಾವಿಗಳು, ಕುಡಿಯುವ ನೀರಿನ ಮೂಲಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು.
- ಗ್ರಾಮ ಸಭೆಯಿಂದ ಆಯ್ಕೆ ಮಾಡಲಾದ “ಆಶಾ” ಕಾರ್ಯಕರ್ತೆಯರು ಜನರಿಗೆ ತಮ್ಮ ಸೇವೆಗಳನ್ನು ಸಮರ್ಪಕವಾಗಿ ನೀಡಲು ಸಹಾಯ ಮಾಡುವುದು.



ಮೇಲಿನ ಪ್ರಮುಖ ಉದ್ದೇಶಗಳನ್ನು ಮತ್ತು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕಾಗಿದೆ. ಈ ಸಮಿತಿಗೆ ಗ್ರಾಮ ಪಂಚಾಯಿತಿ ಬೆಂಬಲ ನೀಡಿದಲ್ಲಿ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ.

**ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ರಚನೆ**

- ಒಟ್ಟು ಸದಸ್ಯರ ಸಂಖ್ಯೆ – 15 – ಈ ಸದಸ್ಯರನ್ನು ಗ್ರಾಮ ಸಭೆಯು ಆಯ್ಕೆ ಮಾಡಬೇಕು.
- 15 ಜನರಲ್ಲಿ 8 ಮಂದಿ ಮಹಿಳೆಯರಾಗಿರಬೇಕು. ಈ ಪೈಕಿ ಕನಿಷ್ಠ ಮೂವರು ಪರಿಶಿಷ್ಠ ಜಾತಿ ಮತ್ತು ಪಂಗಡದವರಾಗಿರಬೇಕು, ಇಬ್ಬರು ಸ್ವ–ಸಹಾಯ ಗುಂಪುಗಳ ಪ್ರತಿನಿಧಿಗಳಾಗಿರಬೇಕು.
- ಉಳಿದ 7 ಸದಸ್ಯರಲ್ಲಿ ಕನಿಷ್ಠ ಇಬ್ಬರು ಪರಿಶಿಷ್ಠ ಜಾತಿ ಮತ್ತು ಪಂಗಡದವರಾಗಿರಬೇಕು.
- ಆಯಾ ಗ್ರಾಮದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಕಿರಿಯ ಪುರುಷ ಆರೋಗ್ಯ ಸಹಾಯಕ, ಪ್ರಾಥಮಿಕ ಶಾಲಾ ಶಿಕ್ಷಕರು (ಮಹಿಳೆಯರಿಗೆ ಆದ್ಯತೆ), ಗ್ರಾಮದಲ್ಲಿರುವ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ಈ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ.
- ಸ್ಥಳೀಯ ಗ್ರಾಮ ಪಂಚಾಯಿತಿಯ ಸದಸ್ಯರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಆ ಗ್ರಾಮದ ಸದಸ್ಯರಾಗಿದ್ದಲ್ಲಿ ಅವರೇ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರಾಗಬೇಕು.
- ಆ ಗ್ರಾಮದಲ್ಲಿ ಒಬ್ಬರಿಗಿಂತ ಹೆಚ್ಚು ಗ್ರಾಮ ಪಂಚಾಯಿತಿಯ ಸದಸ್ಯರಿದ್ದಲ್ಲಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯು ಅವರ ಪೈಕಿ ಒಬ್ಬರನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಬೇಕು. ಗ್ರಾಮ ಪಂಚಾಯಿತಿ ನಾಮ ನಿರ್ದೇಶನ ಮಾಡಲು ವಿಫಲವಾದಲ್ಲಿ ಮಾತ್ರ ಅಧ್ಯಕ್ಷರನ್ನು ನಾಮ ನಿರ್ದೇಶನ ಮಾಡುವ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗೆ ನೀಡಲಾಗಿದೆ.
- ಸ್ಥಳೀಯ ಗ್ರಾಮದ ಆಶಾ ಕಾರ್ಯಕರ್ತೆ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಬೇಕು. ಆಶಾ ಕಾರ್ಯಕರ್ತೆ ಆಯ್ಕೆ ಆಗಿಲ್ಲದ ಸಂದರ್ಭದಲ್ಲಿ ಮಾತ್ರ ಆ ಗ್ರಾಮದಲ್ಲಿರುವ ಅಂಗನವಾಡಿ ಕಾರ್ಯಕರ್ತರ ಪೈಕಿ ಹಿರಿತನ ಮತ್ತು ಅರ್ಹತೆಯ ಮೇಲೆ ಒಬ್ಬರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಬಹುದು.



**ಸದಸ್ಯತ್ವದ ಅವಧಿ**

- 15 ಜನ ಸದಸ್ಯರ ಪೈಕಿ ಪ್ರತಿ ವರ್ಷಕ್ಕೆ 5 ಜನರನ್ನು ಲಾಟರಿ ಎತ್ತುವ ಮೂಲಕ ನಿವೃತ್ತಿಗೊಳಿಸಿ ಅವರ ಸ್ಥಾನಕ್ಕೆ ಹೊಸಬರನ್ನು ಆಯ್ಕೆ ಮಾಡಬೇಕು. ಹೊಸ ಸದಸ್ಯರ ಆಯ್ಕೆ ಗ್ರಾಮ ಸಭೆಯಲ್ಲೇ ಆಗಬೇಕು. ಹೊಸಬರನ್ನು ಆಯ್ಕೆ ಮಾಡುವಾಗಲೂ ನಿವೃತ್ತಿ ಹೊಂದಿದ ವರ್ಗಗಳ ಸದಸ್ಯರನ್ನೇ ಆಯ್ಕೆ ಮಾಡಬೇಕು.
- ಪ್ರತಿ ವರ್ಷ ಸದಸ್ಯರ ನಿವೃತ್ತಿ ಮತ್ತು ಆಯ್ಕೆ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದು ನಡೆಸಬೇಕು.

**ಸಮಿತಯ ಸಭೆ**

- ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಯ ಸಭೆಯನ್ನು ಪ್ರತಿ ತಿಂಗಳು ನಡೆಸಬೇಕು. ಗ್ರಾಮ ಪಂಚಾಯಿತಿ ಕಛೇರಿ, ಅಂಗನವಾಡಿ ಕೇಂದ್ರ ಅಥವಾ ಶಾಲಾ ಕೊಠಡಿಗಳಲ್ಲಿ ಈ ಸಭೆಯನ್ನು ನಡೆಸಬಹುದು. ತುರ್ತು ಸಂದರ್ಭದಲ್ಲಿ ವಿಶೇಷ ಸಭೆಯನ್ನು ಕರೆಯಬಹುದು.

**ಸಭೆಯ ಕೋರಂ**

- ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಸಾಮಾನ್ಯ ಸಭೆಯ ಕೋರಂ ಒಟ್ಟು ಸದಸ್ಯರ 1/3 ಭಾಗ ಆಗಿರುತ್ತದೆ. ಭಾಗವಹಿಸಿದ ಸದಸ್ಯರಲ್ಲಿ ಕನಿಷ್ಠ 1/3 ಭಾಗ ಮಹಿಳೆಯರು ಇರಬೇಕು.
- ನಿಗಧಿತ ಸಭೆಯ ದಿನದಂದು ಅಧ್ಯಕ್ಷರು ಗೈರು ಹಾಜರಾದಲ್ಲಿ ಸಭೆಯಲ್ಲಿ ಭಾಗವಹಿಸಿದ ಸದಸ್ಯರೊಬ್ಬರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಬಹುದು.
- ಸಭೆಯ ನಿರ್ಣಯಗಳು ಮತ್ತು ದಾಖಲೆಗಳನ್ನು ಅಧಿಕೃತ ಪುಸ್ತಕದಲ್ಲಿ ದಾಖಲಿಸುವ ಕಾರ್ಯವನ್ನು ಸಮಿತಿಯ ಕಾರ್ಯದರ್ಶಿ (ಆಶಾ ಕಾರ್ಯಕರ್ತೆ) ಮಾಡಬೇಕು.

**ಮುಕ್ತ ನಿಧಿ**

- ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗೆ ಸರಕಾರವು ಪ್ರತಿವರ್ಷ ರೂ.10,000/– ಮೊತ್ತವನ್ನು ಮುಕ್ತ ನಿಧಿಯಾಗಿ ಬಿಡುಗಡೆ ಮಾಡುತ್ತದೆ. ಮುಕ್ತ ನಿಧಿಯನ್ನು ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಜಂಟಿ ಖಾತೆಯಲ್ಲಿ ಹಾಕಿ ನಿರ್ವಹಿಸಬೇಕು.
- ಸರಕಾರದ ಮುಕ್ತ ನಿಧಿಯಲ್ಲದೆ ಸಮಿತಿಯು ಸಂಘ ಸಂಸ್ಥೆಗಳಿಂದ, ಗ್ರಾಮ ಪಂಚಾಯಿತಿಯಿಂದ,



ದಾನಿಗಳಿಂದ ನಗದು ಅಥವಾ ವಸ್ತುಗಳ ರೂಪದಲ್ಲಿ ದೇಣಿಗೆಯನ್ನು ಸಂಗ್ರಹಿಸಬೇಕು.

- ಮುಕ್ತ ನಿಧಿಯನ್ನು ಈ ಲೇಖನದ ಆರಂಭದಲ್ಲಿ ತಿಳಿಸಿರುವ ಉದ್ದೇಶಗಳನ್ನು ಈಡೇರಿಸಲು ಬಳಸುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅದರೆ ಮುಕ್ತ ನಿಧಿಯ ಬಳಕೆಯ ಕುರಿತಂತೆ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತೀರ್ಮಾನವನ್ನು ಕೈಗೊಳ್ಳಬೇಕು.

**ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಕನಿಷ್ಠ 1ರಿಂದ 3 ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ರಚನೆಯಾಗಿವೆ. ಈ ಸಮಿತಿಗಳು ಕರ್ನಾಟಕ ಪಂಚಾಯಿತಿ ರಾಜ್ ಕಾಯಿದೆಯ ಪ್ರಕರಣ 61(ಎ) ಪ್ರಕಾರ ರಚಿಸಲ್ಪಟ್ಟಿವೆ. ಗ್ರಾಮ ಪಂಚಾಯಿತಿಯ ಮೂಲಭೂತ ಸೌಕರ್ಯ ಸ್ಥಾಯಿ ಸಮಿತಿಯ ಉಪಸಮಿತಿಯಾಗಿ ಈ ಸಮಿತಿ ಕೆಲಸ ನಿರ್ವಹಿಸಬೇಕಾಗಿದೆ. ಹೀಗಾಗಿ ನೇರವಾಗಿ ಗ್ರಾಮ ಪಂಚಾಯಿತಿ ಅಧಿಕಾರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವುದು ಅತ್ಯಂತ ಅವಶ್ಯಕವಾಗಿದೆ.**

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿತಗೊಂಡಿರುವ ವಿವಿಧ ಉಪಸಮಿತಿಗಳು ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಅನುಗುಣವಾಗಿ ರಚಿಸಲ್ಪಟ್ಟಿವೆ. ಆದರೆ ಈ ಆಶಯ ಈಡೇರಬೇಕಿದ್ದಲ್ಲಿ ಎಲ್ಲಾ ಉಪಸಮಿತಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವ ಕಾರ್ಯವನ್ನು ಗ್ರಾಮ ಪಂಚಾಯಿತಿಗಳು ಮಾಡಬೇಕು. ಕಾಲ ಕಾಲಕ್ಕೆ ಉಪಸಮಿತಿಗಳ ಸಭೆಗಳು ನಡೆಯಬೇಕು. ಈ ಸಭೆಯ ತೀರ್ಮಾನಗಳನ್ನು ಸ್ಥಾಯಿ ಸಮಿತಿಯ ಸಭೆಗಳಲ್ಲಿ ಚರ್ಚಿಸಿ ಗ್ರಾಮ ಪಂಚಾಯಿತಿಯಿಂದ ಅಗತ್ಯವಿರುವ ಬೆಂಬಲವನ್ನು ಒದಗಿಸಬೇಕು. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಗಳು ಹೆಚ್ಚಿನ ಆಸಕ್ತಿ ವಹಿಸಿದಲ್ಲಿ ನಿಜವಾದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ.

- **ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಆರೋಗ್ಯ ಉಪಕೇಂದ್ರಕ್ಕೂ ಪ್ರತಿ ವರ್ಷ ರೂ.10,000 ಮುಕ್ತ ನಿಧಿಯನ್ನು ನೀಡಲಾಗುತ್ತಿದೆ.**
- **ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಆರೋಗ್ಯ ಸಹಾಯಕಿಯ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ಈ ನಿಧಿಯನ್ನು ನಿಯಮಾನುಸಾರ ಬಳಸಲು ಅವಕಾಶ ಕಲ್ಪಿಸಿದೆ.**



# ಗ್ರಾಮೀಣ ವಸತಿ ಯೋಜನೆಗಳು



ಗ್ರಾಮೀಣ ವಸತಿ ಕಾರ್ಯಕ್ರಮಗಳ ಅನುಷ್ಠಾನದ ಹೊಣೆಗಾರಿಕೆ ಗ್ರಾಮ ಪಂಚಾಯಿತಿಗಳಿಗೆ ಸೇರಿದೆ. ಗ್ರಾಮ ಸಭೆಯ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಅವರಿಗೆ ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ಅನುದಾನವನ್ನು ಒದಗಿಸಬೇಕು. ಹೀಗೆ ಮಾಡುವ ಮೂಲಕ ಬಡವರಿಗೆ ಸೂರು ಒದಗಿಸುವ ಮಹತ್ತರ ಕಾರ್ಯವನ್ನು ಗ್ರಾಮ ಪಂಚಾಯಿತಿಗಳು ಮಾಡಲು ಸಾಧ್ಯವಿದೆ. ಜನರಿಗೆ ಸೂರು ಒದಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳನ್ನು ರೂಪಿಸಿವೆ. ಅವುಗಳ ವಿವರಗಳನ್ನು ಮುಂದೆ ನೀಡಲಾಗಿದೆ.

**ರಾಜ್ಯ ಸರ್ಕಾರದಿಂದ ಆಶ್ರಯ ಹಾಗೂ ಅಂಬೇಡ್ಕರ್ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದೊಂದಿಗೆ (ಶೇ.75 ಕೇಂದ್ರ ಹಾಗೂ ಶೇ.25 ರಾಜ್ಯ) ಇಂದಿರಾ ಆವಾಸ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2010-11ನೇ ಸಾಲಿನಿಂದ ಈ ಕಾರ್ಯಕ್ರಮಗಳಿಗೆ ಪರ್ಯಾಯವಾಗಿ ಬಸವ ಇಂದಿರಾ ವಸತಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ.**



## 1. ಗ್ರಾಮೀಣ ಆಶ್ರಯ ವಸತಿ ಯೋಜನೆ

ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿನ ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾ ಬಂದಿದೆ. ಆಶ್ರಯ ವಸತಿ ಯೋಜನೆಯನ್ನು 1991–92ರಿಂದ ಗ್ರಾಮೀಣ ಪ್ರದೇಶಗಳಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಕರ್ಯ ಒದಗಿಸಲು ಪ್ರಾರಂಭಿಸಲಾಯಿತು. 1992–93ರಿಂದ ಈ ಯೋಜನೆ ಕಾರ್ಯಗತವಾಗುತ್ತಿದ್ದು 1993–94ರಿಂದ ಜಿಲ್ಲೆಗಳಿಗೆ ಗುರಿ ನಿಗದಿಪಡಿಸಿ ಮನೆಗಳನ್ನು




ನಿರ್ಮಿಸಲಾಗುತ್ತಿದೆ. ಪ್ರಾರಂಭದಲ್ಲಿ ಪ್ರತಿ ಮನೆಗಳ ಘಟಕ ವೆಚ್ಚ ರೂ.15000/–ಗಳಿದ್ದು, 1995–96ರಿಂದ 20000/– ರೂ.ಗಳಿಗೆ ಏರಿಕೆ ಮಾಡಲಾಯಿತು, 2005–06ನೇ ಸಾಲಿಗೆ ಘಟಕ ವೆಚ್ಚ ರೂ.25000/– ಹಾಗೂ 2006–07ನೇ ಸಾಲಿಗೆ ರೂ.30000/–ಕ್ಕೆ ಏರಿಕೆಯಾಗಿದ್ದು, 2008–09ನೇ ಸಾಲಿನ ರೂ.40000/ –ಗಳಿಗೆ ನಿಗದಿಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ಪ.ಜಾತಿ/ಪ.ಪಂಗಡದವರಿಗೆ ಪೂರ್ಣ ಅನುದಾನ ಸಹಾಯಧನವಾಗಿದೆ. ಇತರೆ ಹಿಂದುಳಿದ ವರ್ಗದವರಿಗೆ ಶೇ.50 ಸಹಾಯ ಧನ ಮತ್ತು ಶೇ.50 ಸಾಲವಾಗಿರುತ್ತದೆ. ಸಾಲದ ಹಣವನ್ನು ಫಲಾನುಭವಿಯು 180 ಸಮ ಕಂತುಗಳಲ್ಲಿ ಶೇ.11ರ ಬಡ್ಡಿದರದಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.



ಆಶ್ರಯ ಯೋಜನೆಯಡಿ ಪ.ಜಾತಿ ಫಲಾನುಭವಿಗಳಿಗೆ ಶೇ.40, ಪ.ವರ್ಗದ ಫಲಾನುಭವಿಗಳಿಗೆ ಶೇ.10 ಹಾಗೂ ಸಾಮಾನ್ಯ ವರ್ಗದವರಿಗೆ ಶೇ.50ರಷ್ಟು ಮೀಸಲಾತಿ ನಿಗದಿಗೊಳಿಸಲಾಗಿದೆ. ಗ್ರಾಮ ಪಂಚಾಯತಿಗಳ ಒಟ್ಟಾರೆ ಗುರಿಯಲ್ಲಿ ಶೇ.5ರಷ್ಟು ಅಂಗವಿಕಲರಿಗೆ, ಶೇ.1ರಷ್ಟು ಮಾಜಿ ಸೈನಿಕರಿಗೆ ಅಥವಾ ಅವರ ವಿಧವೆಯರಿಗೆ, ಶೇ.2ರಷ್ಟು ಹಿರಿಯ ನಾಗರೀಕರಿಗೆ ಗುರಿ ನಿಗದಿಪಡಿಸಲಾಗಿದೆ. ಎಲ್ಲಾ ಫಲಾನುಭವಿಗಳಾಗಿ ಮಹಿಳೆಯರನ್ನು ಆಯ್ಕೆ ಮಾಡಬೇಕಾಗಿದೆ. (ಅಂಗವಿಕಲರು, ಮಾಜಿ ಸೈನಿಕರು, ಹಿರಿಯ ನಾಗರೀಕರನ್ನು ಹೊರತುಪಡಿಸಿ)

ಸರ್ಕಾರದ ಸುತ್ತೋಲೆ ಸಂಖ್ಯೆ: ವಇ 85 ಹೆಚ್ಎಎಂ 2007 ದಿನಾಂಕ: 13–03–2007ರಲ್ಲಿ ಅಂಗವಿಕಲರು, ಕುಷ್ಟರೋಗದಿಂದ ಗುಣಮುಖರಾದವರು, ಮಾಜಿ ಸೈನಿಕರು, ಹೆಚ್.ಐ.ವಿ. ಸೋಂಕಿಗೆ ಒಳಗಾದವರು ದೇವದಾಸಿಯರು ಮತ್ತು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ವಿಶೇಷ ವರ್ಗದ ಫಲಾನುಭವಿಗಳನ್ನಾಗಿ ಪರಿಗಣಿಸಿ ವಸತಿ ಸೌಕರ್ಯ ಕಲ್ಪಿಸಿಕೊಡಲಾಗುತ್ತಿತ್ತು. ***ಪ್ರಸಕ್ತ ಬಸವ ಇಂದಿರಾ ವಸತಿ ಯೋಜನೆ ಜಾರಿಗೆ ಬಂದಿರುವುದರಿಂದ ಆಶ್ರಯ ಯೋಜನೆಯನ್ನು ರದ್ದುಪಡಿಸಲಾಗಿದೆ. ಈ ಹಿಂದೆ ಆಶ್ರಯ ಯೋಜನೆಯ ಫಲಾನುಭವಿಗಳಾಗಿ ಆಯ್ಕೆಯಾದವರಿಗೆ ಮಾತ್ರ ಯೋಜನೆಯ ನಿಯಮಾನುಸಾರ ಸೌಲಭ್ಯವನ್ನು ನೀಡಬೇಕಾಗುತ್ತದೆ.***

### 2. ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆ

ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆಯನ್ನು 1992ರಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ರವರ ಜನ್ಮ ಶತಮಾನೋತ್ಸವದ ಅಂಗವಾಗಿ ಕರ್ನಾಟಕದಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಡಿ ಪ.ಜಾತಿ ಮತ್ತು ಪ.ವರ್ಗದ ವಸತಿ ರಹಿತ ಕುಟುಂಬಗಳಿಗೆ ಉಚಿತವಾಗಿ ಮನೆಯನ್ನು ನಿರ್ಮಿಸಿ ಕೊಡಲಾಗುತ್ತಿದೆ. ಪ್ರಾರಂಭದಲ್ಲಿ ಈ ಯೋಜನೆಯಡಿ ಘಟಕ ವೆಚ್ಚ ರೂ.15000/– ಗಳಿದ್ದು 1995–96ರಲ್ಲಿ ರೂ. 20000/– ಏರಿಕೆ ಮಾಡಲಾಯಿತು. 2007–08ರಲ್ಲಿ ರೂ. 30000/– ಗಳಿಗೆ ಹೆಚ್ಚಿಸಲಾಯಿತು. 2008–09ನೇ ಸಾಲಿನಲ್ಲಿ ರೂ.40000/–ಗಳನ್ನು ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ಪೂರ್ಣ ಅನುದಾನವು ಸಹಾಯಧನವಾಗಿರುತ್ತದೆ. ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಂಬಂದಿಸಿದಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಭರಿಸಲಾಗುತ್ತಿತ್ತು.



## ಅನುದಾನ ಬಿಡುಗಡೆ

ಫಲಾನುಭವಿಗಳಿಗೆ ಚೆಕ್ ಮೂಲಕ ಅನುದಾನವನ್ನು ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಈ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾಗಿತ್ತು. ವಿವರ ಕೆಳಗಿನಂತಿದೆ.

| | |
|---|---|
| ತಳಪಾಯ ಹಂತ | ರೂ. 12000/– |
| ಕಿಟಕಿ/ಗೋಡೆ ಹಂತ | ರೂ. 13000/– |
| ಮನೆ ಪೂರ್ಣಗೊಂಡ ನಂತರ | ರೂ. 15000/– |

## ಇಂದಿರಾ ಆವಾಸ್ ಯೋಜನೆ

ಇಂದಿರಾ ಆವಾಸ್ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಯೋಜನೆಯಾಗಿದ್ದು ಗ್ರಾಮೀಣ ಪ್ರದೇಶದ ಬಡ ಜನರಿಗೆ ವಸತಿ ಕಲ್ಪಿಸುವ ಯೋಜನೆಯಾಗಿದೆ. ಈ ಯೋಜನೆಯ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ವಸತಿ ರಹಿತ ಪ.ಜಾತಿ, ಪ.ಪಂಗಡದ ಹಾಗೂ ಜೀತ ವಿಮುಕ್ತ ಹೊಂದಿದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಹಾಗೂ ಹಾಲಿ ಇರುವ ಕಚ್ಚಾಮನೆಯನ್ನು ಪಕ್ಕಾ ಮನೆಯಾಗಿ ಪರಿವರ್ತಿಸಿಕೊಳ್ಳಲು ಸಹಾಯಧನ ನೀಡಲಾಗುತಿತ್ತು, ಭಾರತ ಸರ್ಕಾರವು ಜೂನ್ 1985ರಲ್ಲಿ ಆರ್‌ಎಲ್‌ಇಜಿಪಿ (ಗ್ರಾಮೀಣ ಭೂರಹಿತ ಕೃಷಿ ಕಾರ್ಮಿಕರಿಗೆ ಉದ್ಯೋಗ ಭರವಸೆ ಯೋಜನೆಯ) ಒಂದು ಭಾಗವಾಗಿ ಗ್ರಾಮೀಣ ವಸತಿ ರಹಿತ ಪ.ಜಾತಿ/ಪ.ಪಂಗಡ ಹಾಗೂ ಜೀತದಿಂದ ವಿಮುಕ್ತಿ ಹೊಂದಿದವರಿಗೆ ವಸತಿ ಕಲ್ಪಿಸಲು ಇಂದಿರಾ ಆವಾಸ್ ಯೋಜನೆಯನ್ನು ಪ್ರಾರಂಭಿಸಲಾಯಿತು. ತದನಂತರ ಜವಾಹರ್ ರೋಜ್ಗಾರ್ ಯೋಜನೆಯ ಉಪಯೋಜನೆಯಾಗಿ ಮುಂದುವರೆದು ಏಪ್ರಿಲ್ 1989ರಿಂದ ಜೆಆರ್‌ವೈ ಯೋಜನೆಯ ಶೇ.10 ಭಾಗ ಅನುದಾನವನ್ನು ಐಎವೈ ಯೋಜನೆಗೆ ವರ್ಗಾಯಿಸಲಾಯಿತು. 1993–94ರಿಂದ ಈ ಯೋಜನೆಯನ್ನು ಬಡತನರೇಖೆಗಿಂತ ಕೆಳಗಿರುವ ಪ.ಜಾತಿ/ಪ.ಪಂಗಡದವರಲ್ಲದೆ ಇತರೆ ಜನಾಂಗದವರಿಗೂ ಕೂಡ ವಿಸ್ತರಿಸಲಾಯಿತು. ಜನವರಿ 1996ರಿಂದ ಐಎವೈ ಯೋಜನೆಯನ್ನು ಜೆಆರ್‌ವೈ (ಜವಾಹರ್ ರೋಜ್‌ಗಾರ್ ಯೋಜನೆ) ಯೋಜನೆಯಿಂದ ಪ್ರತ್ಯೇಕಿಸಿ ಸ್ವತಂತ್ರ ಯೋಜನೆಯಾಗಿ ಮಾರ್ಪಡಿಸಲಾಯಿತು.

ಈ ಯೋಜನೆಯಡಿ ಶೇ.60 ಭಾಗ ಪ.ಜಾತಿ, ಪ.ಪಂಗಡ ಹಾಗೂ ಜೀತದಿಂದ ವಿಮುಕ್ತಿಹೊಂದಿದವರಿಗೆ ಹಾಗೂ ಶೇ.15 ಭಾಗ ಅವಕಾಶ ನೀಡಬೇಕು. ಮತೀಯ ಅಲ್ಪಸಂಖ್ಯಾತರಿಗೆ ಹಾಗೂ ಶೇ.25 ಭಾಗ ಇತರೆ ಹಿಂದುಳಿದ ಜನಾಂಗದಲ್ಲಿ ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ವಸತಿ ಕಲ್ಪಿಸಬೇಕು. ಈ ಯೋಜನೆಯಡಿ ಅಂಗವಿಕಲರಿಗೆ ಶೇ.5 ಭಾಗ ಮಾಜಿ ಸೈನಿಕರಿಗೆ ಅಥವಾ ಸೈನಿಕರ



ವಿದವೆಯರಿಗೆ ಶೇ.1 ಭಾಗ, ಹಿರಿಯ ನಾಗರೀಕರಿಗೆ ಶೇ.2 ಭಾಗ ನಿಗದಿಗೊಳಿಸಲಾಗಿದೆ. ಭಾರತ ಸರ್ಕಾರದ ಅನುದಾನ ಶೇ.75 ಭಾಗ ಹಾಗೂ ರಾಜ್ಯ ಸರ್ಕಾರ 25 ಭಾಗ ಅನುದಾನದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಅಂಗವಿಕಲರು, ವಿದುರರು, ಹಿರಿಯ ನಾಗರೀಕರು, ಮಾಜಿ ಸೈನಿಕರನ್ನು ಹೊರತುಪಡಿಸಿ) ಈ ಯೋಜನೆಯಡಿ 2009–10ನೇ ಸಾಲಿನಿಂದ ಹೊಸ ಮನೆಗಳ ನಿರ್ಮಾಣಕ್ಕೆ ಘಟಕ ವೆಚ್ಚ ರೂ.40000/– ಗಳಾಗಿದ್ದು ಹಾಗೂ ಮನೆಗಳ ಉನ್ನತೀಕರಣಕ್ಕೆ ರೂ.15000/– ಒದಗಿಸಲಾಗುತ್ತಿದೆ. ಪೂರ್ಣ ಅನುದಾನ ಸಹಾಯ ಧನವಾಗಿರುತ್ತದೆ.

2004ರ ಸರ್ವೆ ಕುಟುಂಬ ಸಮೀಕ್ಷೆಯಲ್ಲಿ 20 ಮತ್ತು ಅದಕ್ಕಿಂತ ಕಡಿಮೆ ಅಂಕ ಪಡೆದಿರುವ ವಸತಿ ರಹಿತರ ಐಎವೈ ಪ್ರತೀಕ್ಷಾ ಪಟ್ಟಿಯನ್ನು ತಯಾರಿಸಿದ್ದು ಈ ಪಟ್ಟಿಯಿಂದಲೇ ಗ್ರಾಮ ಪಂಚಾಯಿತಿಗಳು ತಮ್ಮ ಗ್ರಾಮ ಪಂಚಾಯಿತಿಗೆ ನಿಗದಿಪಡಿಸಿದ ಗುರಿಗೆ ಆಯ್ಕೆ ಮಾಡಬೇಕು. ಸರ್ಕಾರದ ಆದೇಶ ಸಂಖ್ಯೆ ವಇ ಹೆಚ್‌ಎವೈ 2009 ಬೆಂಗಳೂರು ದಿನಾಂಕ: 01–06–2009ರಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ "ಇಂದಿರಾ ಆವಾಸ್ ಯೋಜನೆ" ಯಡಿಯಲ್ಲಿ ವಸತಿ ಸೌಕರ್ಯ ಕಲ್ಪಿಸುವುದಕ್ಕೆ ಸರ್ವೆ ಕುಟುಂಬ ಸಮೀಕ್ಷೆ ಅಂಕಗಳನ್ನು 0–20ರಿಂದ 0–30ಕ್ಕೆ ಸಡಿಲಿಸಲು ಈ ಕೆಳಕಂಡ ನಿಬಂಧನೆಗಳೊಂದಿಗೆ ಅನುಮತಿ ನೀಡಲಾಗಿದೆ.

ಅ) 0–20 ಅಂಕದೊಳಗೆ ಬರುವ ಎಲ್ಲಾ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಿ, ಅಂತಹ ಕುಟುಂಬಗಳು ಸಿಗದಿದ್ದಲ್ಲಿ ಅದನ್ನು ಗ್ರಾಮ ಸಭೆಯು ದೃಢೀಕರಿಸಿ ಮುಂದಿನ ಶ್ರೇಣಿಯನ್ನು ಪರಿಗಣಿಸಬೇಕು.

ಆ) ಪ್ರಥಮ ಆದ್ಯತೆ 20–25 ಅಂಕಗಳು ಪಡೆದ ಕುಟುಂಬಗಳಿಗೆ ನೀಡಿ ನಂತರ 25–30 ಅಂಕ ಪಡೆದ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಬೇಕು.

ಆಯ್ಕೆಯಾದ ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ನಿಗದಿಪಡಿಸಿದ ಅಲ್ಪ ಸಂಖ್ಯಾತರ ಫಲಾನುಭವಿಗಳು ಲಭ್ಯವಿಲ್ಲದ್ದಲ್ಲಿ ಉಳಿದ ಗುರಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಬೇರೆ ಪಂಚಾಯತಿಗೆ ವರ್ಗವಣೆ ಮಾಡಬೇಕು. ನಿಗದಿಪಡಿಸಲಾದ ಗುರಿಗೆ ತಾಲ್ಲೂಕಿನಲ್ಲಿ ಫಲಾನುಭವಿಗಳು ಲಭ್ಯವಿಲ್ಲದ್ದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಗುರಿಯನ್ನು ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡಬೇಕು. ಒಂದು ವೇಳೆ ಜಿಲ್ಲೆಯಲ್ಲಿಯೇ ಫಲಾನುಭವಿಗಳು ಲಭ್ಯವಿಲ್ಲದ್ದಲ್ಲಿ ಆಯ್ಕೆ ಮಾಡದೆ ಉಳಿದ ಅಲ್ಪ ಸಂಖ್ಯಾತರ ಗುರಿಯನ್ನು ನಿಗಮಕ್ಕೆ ಹಿಂದಿರುಗಿಸಬೇಕು.



ಇಂದಿರಾ ಆವಾಸ್ ಯೋಜನೆಯಡಿ ನೀಡಲಾಗುವ ಹಣಕಾಸು ಗುರಿಯಲ್ಲಿ ಶೇ.20ರಷ್ಟು ಮನೆಗಳನ್ನು ಪರಿವರ್ತಿಸಿಕೊಳ್ಳಲು (ಕಚ್ಚಾ–ಪಕ್ಕಾ) ಅವಕಾಶವಿದೆ. ಗ್ರಾಮ ಪಂಚಾಯಿತಿಗೆ ನೀಡಲಾಗುವ ಪ್ರತಿಯೊಂದು ಹೊಸ ಮನೆಗೆ 2 ಮನೆಗಳನ್ನು ಪರಿವರ್ತನೆಗಾಗಿ ಉಪಯೋಗಿಸಿಕೊಳ್ಳಬಹುದು. ಅದರಿಂದಾಗಿ ಅಷ್ಟರ ಮಟ್ಟಿಗೆ ಹೊಸ ಮನೆಗಳ ಗುರಿಯನ್ನು ಕಡಿಮೆ ಮಾಡಿಕೊಳ್ಳಬೇಕು.

2004ರಲ್ಲಿ ಸರ್ವ ಕುಟುಂಬ ಸಮೀಕ್ಷೆಯಲ್ಲಿ ತಯಾರಿಸಲಾಗಿರುವ (IAY Permanent wait list) ಖಾಯಂ ಪ್ರತೀಕ್ಷಾ ಪಟ್ಟಿಯನ್ನು ಎಲ್ಲಾ ಗ್ರಾಮ ಪಂಚಾಯತಿಗಳ ಕಟ್ಟಡಗಳ ಗೋಡೆಗಳ ಮೇಲೆ ಬರೆಸಬೇಕು. ಖಾಯಂ ಪ್ರತೀಕ್ಷಾ ಪಟ್ಟಿಯನ್ನು ಪ್ರತ್ಯೇಕವಾಗಿ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಒಂದು ಪಟ್ಟಿ ಹಾಗೂ ಪ.ಜಾತಿ/ಪಂಗಡದವರಲ್ಲದ ಇತರೆ ಫಲಾನುಭವಿಗಳಿಗೆ ಒಂದು ಪಟ್ಟಿಯನ್ನು ಆದ್ಯತೆ ರೀತಿ ಸಿದ್ದಪಡಿಸಿ ಅದನ್ನೇ ಗೋಡೆಗಳ ಮೇಲೆ ಬರೆಸಬೇಕು.




ಇಂದಿರಾ ಆವಾಸ್ ಯೋಜನೆಯಡಿ ಮನೆಯನ್ನು ಅಲ್ಪಸಂಖ್ಯಾತರಿಗೆ ಶೇ.15ರಷ್ಟು ಮನೆಗಳ ಗುರಿ ನಿಗದಿಪಡಿಸಲಾಗಿದೆ. ಮುಸ್ಲಿಂ ಸಮುದಾಯದಲ್ಲಿ ದರ್ವೇಶ್ ಸಮುದಾಯವು ಪ್ರವರ್ಗ 1ಕ್ಕೆ ಸೇರಿರುತ್ತದೆ. ಈ ಸಮುದಾಯವು ಮುಸ್ಲಿಂರಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ.



ಅಲೆಮಾರಿಗಳಾಗಿ ಸೂಕ್ತ ವಸತಿ ವ್ಯವಸ್ಥೆ ಇಲ್ಲದೆ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇವರನ್ನು ಐಎವೈ ಯೋಜನೆಯಡಿ ಅಲ್ಪ ಸಂಖ್ಯಾತರ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆದ್ಯತೆ ನೀಡಬೇಕು. ಸರ್ಕಾರ ಪತ್ರ ಸಂಖ್ಯೆ Do No MWD /61/SEC11/2010 ದಿನಾಂಕ: 22–04–2010ರಲ್ಲಿ ಈ ಕುರಿತು ತಿಳಿಸಲಾಗಿದೆ.

**ಪ್ರಸಕ್ತ ಕರ್ನಾಟಕದಲ್ಲಿ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುತ್ತಿದ್ದ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳು ಹಾಗೂ ಕೇಂದ್ರ ಸರ್ಕಾರದ ಯೋಜನೆಯಾಗಿರುವ ಇಂದಿರಾ ಆವಾಜ್ ಯೋಜನೆಯನ್ನು ಸಮನ್ವಯಗೊಳಿಸಿ ಬಸವ ಇಂದಿರಾ ವಸತಿ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಯ ಅನುಷ್ಠಾನದ ವಿವಿಧ ಹಂತಗಳ ಕುರಿತು ಮಾಹಿತಿಯನ್ನು ಮುಂದೆ ನೀಡಲಾಗಿದೆ.**

## ಬಸವ ಇಂದಿರಾ ಗ್ರಾಮೀಣ ವಸತಿ ಯೋಜನೆ

ಕರ್ನಾಟಕ ಸರ್ಕಾರವು ಮುಂದಿನ 5 ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಲು ನಿರ್ಧರಿಸಿದೆ. ಇದಕ್ಕಾಗಿ ಬಸವ ಇಂದಿರಾ ಗ್ರಾಮೀಣ ವಸತಿ ಯೋಜನೆಯನ್ನು 2010–11ನೇ ಸಾಲಿನಿಂದಲೇ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು ಈ ಮುಂದಿನಂತಿದೆ.

1. ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರಾಗಿರಬೇಕು. ಅಂಗವಿಕಲರು, ಮಾಜಿ ಸೈನಿಕರು, ವಿಧುರರು ಮತ್ತು ಹಿರಿಯ ನಾಗರಿಕರು ಈ ಷರತ್ತಿಗೆ ಒಳಪಡುವುದಿಲ್ಲ.
2. ಫಲಾನುಭವಿಗಳು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ನಿವಾಸಿಯಾಗಿದ್ದು ಅವರ ಹೆಸರು ಗುಡಿಸಲು ವಾಸಿಗಳ ಸಮೀಕ್ಷೆಯ ಪಟ್ಟಿಯಲ್ಲಿ ಸೇರಿರಬೇಕು.
3. ಫಲಾನುಭವಿಗಳ ವಾರ್ಷಿಕ ಆದಾಯವು ಕೇಂದ್ರ ಸರ್ಕಾರ ಇಂದಿರಾ ಆವಾಜ್ ಯೋಜನೆಯಡಿ ಸೌಲಭ್ಯ ಕೊಡಲು ನಿರ್ಧರಿಸಿದ ಮಾರ್ಗಸೂಚಿಗೆ ಅನುಗುಣವಾಗಿ ರೂ.32000/–ಕ್ಕಿಂತ ಕಡಿಮೆ ಇರಬೇಕು.
4. ಫಲಾನುಭವಿಗಳು ಸ್ವಂತ ನಿವೇಶನ ಹೊಂದಿರಬೇಕು. ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ/ ಕ್ರಯಪತ್ರ / ದಾನಪತ್ರ / ಉಡುಗೊರೆ ಪತ್ರ / ಖಾತಾ ಪತ್ರಗಳನ್ನು ಹೊಂದಿರಬೇಕು. ಈಗಾಗಲೇ ಬೇರೆ ಯಾವುದಾದರೂ ಯೋಜನೆ ಅಥವಾ ಇಲಾಖೆಯಿಂದ ವಸತಿ ಸೌಲಭ್ಯವನ್ನು ಪಡೆದಿರಬಾರದು.
5. ಗುಡಿಸಲು ವಾಸಿಗಳ ಸಮೀಕ್ಷೆಯಲ್ಲಿ ಸಿದ್ಧಪಡಿಸಲಾದ ಅರ್ಹ ಗುಡಿಸಲು ವಾಸಿಗಳ ಪಟ್ಟಿಯನ್ನು



ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ಜಾಗೃತ ಸಮಿತಿಯ ಅನುಮೋದನೆ ಪಡೆದು ಜಿಲ್ಲಾ ಪಂಚಾಯಿತಿ ಮೂಲಕ ವಸತಿ ನಿಗಮಕ್ಕೆ ಸಲ್ಲಿಸಬೇಕು.

6. ಸರ್ಕಾರವು ಪ್ರತಿ ವರ್ಷ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನಿಗದಿಪಡಿಸುತ್ತದೆ. ಈ ಗುರಿಗೆ ಅನುಗುಣವಾಗಿ ಪ್ರತಿ ವರ್ಷ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಸಮ್ಮುಖದಲ್ಲಿ ಜಾಗೃತ ಸಮಿತಿಯು ಲಾಟರಿಯ ಮೂಲಕ ಗ್ರಾಮಗಳನ್ನು ಆಯ್ಕೆ ಮಾಡುತ್ತದೆ. ಆಯ್ಕೆಯಾದ ಗ್ರಾಮದ ಎಲ್ಲಾ ಫಲಾನುಭವಿಗಳಿಗೆ ಒಂದೇ ಬಾರಿಗೆ ವಸತಿ ಸೌಲಭ್ಯವನ್ನು ನೀಡಲಾಗುತ್ತದೆ. 5 ವರ್ಷಗಳ ಅವಧಿಯಲ್ಲಿ ವಿಧಾನಸಭಾ ಕ್ಷೇತ್ರ ಎಲ್ಲಾ ಗ್ರಾಮಗಳನ್ನು ಈ ಪದ್ಧತಿಯಲ್ಲಿ ಆಯ್ಕೆ ಮಾಡಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಒಂದು ಬಾರಿ ಆಯ್ಕೆಯಾದ ಗ್ರಾಮವನ್ನು ಮುಂದಿನ 5 ವರ್ಷಗಳ ಅವಧಿಯಲ್ಲಿ ಮತ್ತೆ ಆಯ್ಕೆ ಮಾಡುವಂತಿಲ್ಲ.
7. ಗುಡಿಸಲು ವಾಸಿಗಳ ಸಮೀಕ್ಷೆಯ ಪಟ್ಟಿಯಲ್ಲಿ ಇಲ್ಲದ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ನೀಡಲು ಅವಕಾಶವಿಲ್ಲ.
8. ಫಲಾನುಭವಿಗಳು ಅನರ್ಹರೆಂದು ರುಜುವಾತಾದಲ್ಲಿ ಅವರ ಮೇಲೆ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲು ಮತ್ತು ಅವರಿಗೆ ಬಿಡುಗಡೆ ಮಾಡಲಾಗಿದ್ದ ಮೊತ್ತವನ್ನು ಏಕ ಕಂತಿನಲ್ಲಿ ವಸೂಲಿ ಮಾಡಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

**ಘಟಕ ಸಹಾಯ**

ಬಸವ ಇಂದಿರಾ ಗ್ರಾಮೀಣ ವಸತಿ ಯೋಜನೆಯಲ್ಲಿ ಪ್ರತಿ ಫಲಾನುಭವಿಗಳಿಗೆ ರೂ.63,500/– ಅನುದಾನವನ್ನು ಒದಗಿಸಲಾಗುತ್ತದೆ. ವಿವರ ಹೀಗಿದೆ:

| | |
|---|---|
| ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ | ರೂ.50,000 |
| ಬ್ಯಾಂಕ್‌ಗಳಿಂದ ಡಿಆರ್‌ಐ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ | ರೂ.10,000 |
| ಫಲಾನುಭವಿಯಿಂದ ವಂತಿಕೆ | ರೂ.3,500* |
| **ಒಟ್ಟು** | ರೂ.**63,500** |

** ಸ್ವತಹ ಮನೆ ಕಟ್ಟಿಕೊಳ್ಳುವ ಫಲಾನುಭವಿಗಳು ಘಟಕ ವೆಚ್ಚದಲ್ಲಿ ತಮ್ಮ ವಂತಿಕೆ ರೂ.3,500/–ಗಳನ್ನು ವಿನಿಯೋಗಿಸಿಕೊಳ್ಳಬೇಕು. ನಿರ್ಮಾಣ ಸಂಸ್ಥೆಯ ಮೂಲಕ ಮನೆ ಕಟ್ಟಿಕೊಳ್ಳುವ ಸಂದರ್ಭದಲ್ಲಿ ಕಟ್ಟಡ ನಿರ್ಮಾಣ ಆರಂಭಕ್ಕೆ ಮುಂಚಿತವಾಗಿ ಸ್ವಂತ ವಂತಿಕೆಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಹೆಸರಿನಲ್ಲಿ ಡಿ.ಡಿ. ಮೂಲಕ ಪಾವತಿಸಬೇಕು.*



**ಗುರಿ ನಿಗದಿಪಡಿಸುವಿಕೆ,**
**ಅರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವುದು**
**ಮತ್ತು ಗ್ರಾಮಗಳ ಆಯ್ಕೆ ಪ್ರಕ್ರಿಯೆ**

- ಪ್ರತಿ ತಾಲ್ಲೂಕುಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲ್ಲೂಕಿನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳ ಗುರಿಗಳನ್ನು ಕ್ರೋಢೀಕರಿಸಿದ ನಂತರ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ನೇತೃತ್ವದ ಸಮಿತಿಯ ಮುಂದೆ ಒಟ್ಟು ಗುರಿಯನ್ನು ಮಂಡಿಸಬೇಕು.
- ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ವೆಬ್‌ಸೈಟ್‌ನಲ್ಲಿ (http://ashraya.kar.nic.in/ashrayanew) ನಮೂದಾಗದೇ ಇರುವ ಪಟ್ಟಿಯನ್ನು ಪರಿಗಣಿಸಬಾರದು ಮತ್ತು ಜಾಗೃತ ಸಮಿತಿಯ ಮುಂದೆ ಮಂಡಿಸಬಾರದು. ಒಂದು ವೇಳೆ ನಿಗಮದ ವೆಬ್‌ಸೈಟ್‌ನಲ್ಲಿರುವ ಪಟ್ಟಿಯಲ್ಲಿ ಅನರ್ಹ ಫಲಾನುಭವಿಗಳಿದ್ದಲ್ಲಿ ಅಂತಹವರನ್ನು ರದ್ದುಪಡಿಸಿ ಪಟ್ಟಿಯನ್ನು ಪರಿಷ್ಕೃತಗೊಳಿಸಬೇಕು. ನಂತರ ಗ್ರಾಮ ಸಭೆಯಲ್ಲಿ ಮಂಡನೆ ಮಾಡಿ ಅನುಮೋದಿಸಿದ ನಂತರ ಅಂತಿಮಗೊಳಿಸಬೇಕು. ವೆಬ್‌ಸೈಟ್‌ನಿಂದ ಪ್ರಿಂಟ್ ಪಡೆದಿರದ ಪಟ್ಟಿಯನ್ನು ಜಾಗೃತ ಸಮಿತಿಗೆ ಸಲ್ಲಿಸಿದಲ್ಲಿ ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ ಮತ್ತು ಶಿಸ್ತಿನ ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

**ಫಲಾನುಭವಿಗಳ ಆಯ್ಕೆಗೆ ವೇಳಾಪಟ್ಟಿ**

| ಕ್ರ. ಸಂ. | ಅಧಿಕಾರಿ / ಪ್ರಾಧಿಕಾರಿ | ಅಂತಿಮ ದಿನಾಂಕ |
|---|---|---|
| 1. | ಗುಡಿಸಲು ವಾಸಿಗಳ ಪಟ್ಟಿಯನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು | 15–07–2010 |
| 2. | ಒಂದು ವೇಳೆ ಗ್ರಾಮ ಪಂಚಾಯಿತಿಯು 15–07–2010ರೊಳಗೆ ಆಯ್ಕೆ ಮಾಡದಿದ್ದಲ್ಲಿ ಸಂಬಂಧಿಸಿದ ತಾಲ್ಲೂಕಿನ ಕಾರ್ಯ ನಿರ್ವಾಹಕ ಅಧಿಕಾರಿಗಳು ಸದರಿ ಗುಡಿಸಲು ವಾಸಿಗಳ ಪಟ್ಟಿಯನ್ನು ಜಾಗೃತಿ ಸಮಿತಿಗೆ ಮಂಡಿಸುವುದು | 31–07–2010 |
| 3. | ವಿಧಾನ ಸಭಾ ಜಾಗೃತ ಸಮಿತಿಯು ಅನುಮೋದನೆ ನೀಡುವುದು | 15–08–2010 |
| 4. | ಅನುಮೋದನೆಗೊಂಡ ಫಲಾನುಭವಿಗಳ ದಾಖಲೀಕರಣಗೊಳಿಸಿ ನಿಗಮದ ಅನುಮೋದನೆ ಪಡೆದುಕೊಳ್ಳುವುದು | 31–08–2010 |



### ವಿಧಾನಸಭಾ ಕ್ಷೇತ್ರವಾರು ಜಾಗೃತ ಸಮಿತಿಯ ರಚನೆ

| | | |
|---|---|---|
| 1. | ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರು | ಅಧ್ಯಕ್ಷರು |
| 2. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುವ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 3. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರು | ಸದಸ್ಯರು |
| 4. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ತಾಲ್ಲೂಕು ಪಂಚಾಯಿತಿಗಳ ಉಪಾಧ್ಯಕ್ಷರು | ಸದಸ್ಯರು |
| 5. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರದೇಶಗಳನ್ನು ಪ್ರತಿನಿಧಿಸುವ ಜಿಲ್ಲಾ ಪಂಚಾಯತ್ ಸದಸ್ಯರು | ಸದಸ್ಯರು |
| 6. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರದೇಶಗಳನ್ನು ಪ್ರತಿನಿಧಿಸುವ ತಾಲ್ಲೂಕು ಪಂಚಾಯಿತಿ ಸದಸ್ಯರು | ಸದಸ್ಯರು |
| 7. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ತಾಲ್ಲೂಕುಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು | ಸದಸ್ಯರು |
| 8. | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಇತರ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು | ಸದಸ್ಯರು |
| 9. | ವಿಧಾನ ಸಭಾ ಕ್ಷೇತ್ರದ ಅತಿ ಹೆಚ್ಚಿನ ಭಾಗವನ್ನು ಪ್ರತಿನಿಧಿಸುವ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

**ಆಶ್ರಯ ನಿವೇಶನಗಳ ವಿತರಣೆ**

ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ನಗರ ಬಡವರಿಗಾಗಿ ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮನೆ ನಿವೇಶನಗಳ ವಿತರಣೆಗೆ ಸಂಬಂಧಿಸಿದ ಯೋಜನೆಯನ್ನು ಅನುಷ್ಠಾನಗೊಳಿಸುತ್ತ ಬಂದಿದೆ. 2010–11ನೇ ಸಾಲಿಗೆ 2.00 ಲಕ್ಷ ನಿವೇಶನಗಳನ್ನು ಹಂಚುವ ಪ್ರಸ್ತಾವನೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವೇಶನ ರಹಿತ ಕಟುಂಬಗಳಿಗೆ (ವಾರ್ಷಿಕ ವರಮಾನ ರೂ.11800ಕ್ಕಿಂತ ಕಡಿಮೆ ಇರುವ) 30*40 ಅಡಿ ಅಳತೆಯ ನಿವೇಶನಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವೇಶನ ರಹಿತ ಕುಟುಂಬಗಳಿಗೆ (ವಾರ್ಷಿಕ ವರಮಾನ ರೂ.11800ಕ್ಕೆ ಕಡಿಮೆ ಇರುವ) 20*30 ಅಡಿ ಅಳತೆಯ ನಿವೇಶನಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆ (ಸರ್ಕಾರದ ಸುತ್ತೋಲೆ ಸಂಖ್ಯೆ :ವಸ:6 ಹೆಚ್‌ಎಎಸ್ 97 ದಿನಾಂಕ: 23–04–1997ರಂತೆ) ಗ್ರಾಮೀಣ ಪ್ರದೇಶಗಳಲ್ಲಿ 2003ರ ಜೂನ್ ಮಾಹೆಯಲ್ಲಿ ನಡೆಸಿದ ವಸತಿ ರಹಿತರ ಮತ್ತು ನಿವೇಶನ ರಹಿತರ ಸಮೀಕ್ಷೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳಿಗೆ ಆದ್ಯತಾ ಪಟ್ಟಿಗೆ ಅನುಗುಣವಾಗಿ ನಡೆಯಬೇಕು. ಆ ಪಟ್ಟಿಯಿಂದಲೇ ನೀಡಲಾದ ಗುರಿಗೆ ಅನುಗುಣವಾಗಿ



ಫಲಾನುಭವಿಗಳನ್ನು ಕ್ರಮವಾಗಿ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಬೇಕು, ಎಲ್ಲಾ ಫಲಾನುಭವಿಗಳು ಮಹಿಳಾ ಫಲಾನುಭವಿಗಳಾಗಿರಬೇಕು. (ಅಂಗವಿಕಲರು, ಮಾಜಿ ಸೈನಿಕರು, ವಿದುರರು, ಹಿರಿಯ ನಾಗರೀಕರನ್ನು ಹೊರತುಪಡಿಸಿ) ನಿವೇಶನಗಳನ್ನು ಹಂಚಿಕೆ ಮಾಡುವಾಗ ಪ.ಜಾತಿ ಫಲಾನುಭವಿಗಳಿಗೆ ಶೇ.40, ಪರಿಶಿಷ್ಟ ಪಂಗಡದವರಿಗೆ ಶೇ.10 ಹಾಗೂ ಸಾಮಾನ್ಯ ವರ್ಗದವರಿಗೆ ಶೇ.50 ಮೀಸಲಾತಿಯನ್ನು ನಿಗದಿಪಡಿಸಲಾಗಿದೆ.

ಒಟ್ಟಾರೆ ನಿಗದಿಪಡಿಸಿದ ಗುರಿಯಲ್ಲಿ ಶೇ.5ರಷ್ಟು ಅಂಗವಿಕಲರಿಗೆ ಮೀಸಲಾತಿ ನಿಗದಿಪಡಿಸಿದೆ. ಮಾಜಿ ಸೈನಿಕರಿಗೆ ಅಥವಾ ಸೈನಿಕರ ವಿಧವೆಯರಿಗೆ ಮೀಸಲಾತಿಯನ್ನು ಕನಿಷ್ಟ ಶೇ.1ರಷ್ಟು ನಿಗದಿಪಡಿಸಿದೆ. ಹಾಗೆಯೇ ಹಿರಿಯ ನಾಗರೀಕರಿಗೆ ಮೀಸಲಾತಿ ಕನಿಷ್ಟ ಶೇ.2 ನಿಗದಿಪಡಿಸಿದೆ.

ಫಲಾನುಭವಿಗಳನ್ನು ಗ್ರಾಮ ಸಭೆಗಳಲ್ಲೇ ಆಯ್ಕೆ ಮಾಡಬೇಕು. ನಂತರ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ಅನುಮೋದನೆ ಪಡೆಯಬೇಕು. ಸದರಿ ಪಟ್ಟಿಯನ್ನು ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಜಾಗೃತ ಸಮಿತಿ ಮುಂದೆ ಇಟ್ಟು ಅನುಮೋದನೆ ಪಡೆಯಬೇಕು.

**ಆಶ್ರಯ ನಿವೇಶನಕ್ಕಾಗಿ ಜಮೀನು ಗುರುತಿಸುವುದು ಮತ್ತು ಖರೀದಿಸುವ ಬಗ್ಗೆ**

ಯಾವುದೇ ಸರ್ಕಾರಿ ಜಮೀನು ಆಶ್ರಯ ಯೋಜನೆಯಡಿ ನಿವೇಶನಗಳ ಹಂಚಿಕೆಗೆ ಸೂಕ್ತವಾಗಿದೆಯೇ ಎಂದು ಗುರುತಿಸಬೇಕು. ಸದರಿ ಜಮೀನನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಹಸ್ತಾಂತರಿಸಿ ನಿವೇಶನಗಳ ಹಂಚಿಕೆಯನ್ನು ಕೈಗೊಳ್ಳುವುದು.

ನಿವೇಶನಕ್ಕೆ ಯೋಗ್ಯ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನುಗಳನ್ನು ಖರೀದಿಸಬಹುದು. ಈ ಕುರಿತು ಪರಿಶೀಲಿಸಿ ಖರೀದಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. (ಸರ್ಕಾರದ ಆದೇಶ ಸಂಖ್ಯೆವನ್ನು ವಿ 65 ಹೆಚ್‌ಎಎಸ್ 2009(ಭಾ) ದಿನಾಂಕ: 12–04–2010) ಈ ಸಂದರ್ಭದಲ್ಲಿ ಗರಿಷ್ಟ ಮೂರು ಪಟ್ಟು ದರದಲ್ಲಿ ಮಾರ್ಗಸೂಚಿಗೆ ಅನುಗುಣವಾಗಿ ಜಮೀನುಗಳನ್ನು ಖರೀದಿಸಲು ಕ್ರಮ ಕೈಗೊಳ್ಳಬೇಕು. ಈ ಕುರಿತು ಜಿಲ್ಲಾಧಿಕಾರಿಗಳು ವಸತಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆದು ಜಮೀನು ಖರೀದಿಸಬೇಕು. ಮಾರ್ಗಸೂಚಿಯ ಬೆಲೆಯ ಮೂರರರಷ್ಟು ಬೆಲೆಯಲ್ಲಿಯೂ ಸಹ ಜಮೀನು ಲಭ್ಯವಿಲ್ಲದ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕು. ಇಂತಹ ಪ್ರಕರಣಗಳ ಕುರಿತು ವಸತಿ ನಿಗಮದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ಪರಿಶೀಲಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎಂದು ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಈ ರೀತಿ ಜಮೀನು ಖರೀದಿಸಲು ಸಾಧ್ಯವಾಗದೆ ಇದ್ದ ಸಂದರ್ಭದಲ್ಲಿ Acquisition of Land for Grant of House sites Act 1972 ಕಾಯ್ದೆಯಂತೆ ಬಡತನ ರೇಖೆಯ ಕೆಳಗಿರುವವರಿಗೆ ನಿವೇಶನ ನೀಡಲು



ಖಾಸಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶವಿದೆ. ಅದರಂತೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಈ ಕಾರ್ಯಕ್ರಮದಡಿಯಲ್ಲಿ ಮಾರ್ಗಸೂಚಿ ದರದ ಮೂರು ಪಟ್ಟು ದರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಸಮಿತಿಗೆ ಅಧಿಕಾರ ನೀಡಲಾಗಿದೆ.

**ಸಮಿತಿಯ ಸದಸ್ಯರು**

| | |
|---|---|
| ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| ಸ್ಥಳೀಯ ಶಾಸಕರು | ಸದಸ್ಯರು |
| ಉಪ ವಿಭಾಗಾಧಿಕಾರಿಗಳು | ಸದಸ್ಯರು |
| ತಹಸೀಲ್ದಾರರು | ಸದಸ್ಯರು |
| ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಜಮೀನನ್ನು ಕಾರ್ಯ ನಿರ್ವಾಹಕ ಅಧಿಕಾರಿಯವರು ಹಸ್ತಾಂತರಿಸಿಕೊಂಡ ನಂತರ ಕೂಡಲೇ ನಿವೇಶನಗಳನ್ನು ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮವಹಿಸಬೇಕು. ನಿವೇಶನಗಳ ರಚನೆಗೆ ಪ್ರತಿ ನಿವೇಶನಕ್ಕೆ ರೂ. 450/–ಗಳ ಅಂದಾಜಿನಂತೆ ಕ್ರಿಯಾ ಯೋಜನೆ ತಯಾರಿಸಬೇಕು. ಅರ್ಹ ಫಲಾನುಭವಿಗಳ ಪಟ್ಟಿಯನ್ನು ನಮೂನೆ 11ಡಿ ರಲ್ಲಿ Beneficiary Data Software ನಲ್ಲಿ ಅಳವಡಿಸಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮೂಲಕ ವಸತಿ ನಿಗಮಕ್ಕೆ ಸಲ್ಲಿಸಬೇಕು. ಈ ಪ್ರಸ್ತಾವನೆಗೆ ಅನುಗುಣವಾಗಿ ಖಾಲಿ ಹಕ್ಕು ಪತ್ರಗಳನ್ನು ಪಡೆದು ಫಲಾನುಭವಿಗಳಿಗೆ ಅವುಗಳನ್ನು ಹಂಚಿಕೆ ಮಾಡಬೇಕು.

ಗ್ರಾಮ ಪಂಚಾಯಿತಿಯವರು ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲಿ ಇರುವ ನಿವೇಶನ ರಹಿತರ ಸಂಖ್ಯೆಗೆ ಅನುಗುಣವಾಗಿ ಅಗತ್ಯವಾದ ಸರ್ಕಾರಿ / ಖಾಸಗಿ ಜಮೀನುಗಳನ್ನು ಗುರುತಿಸಬೇಕು. ಈ ಭೂಮಿಯನ್ನು ಆಶ್ರಯ ಯೋಜನೆಯಡಿ ಸರ್ಕಾರಕ್ಕೆ ಬಿಟ್ಟು ಕೊಡುವ ಬಗ್ಗೆ ಅವರಿಂದ ರೂ.50/–ಗಳ ಛಾಪಾಕಾಗದದಲ್ಲಿ ಒಪ್ಪಿಗೆ ಪತ್ರ ಪಡೆದು ನಂತರ ಕಾರ್ಯ ನಿರ್ವಾಹಕ ಅಧಿಕಾರಿಗಳ ಮೂಲಕ ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳಿಗೆ ಕಳುಹಿಸಬೇಕು. ಜಿಲ್ಲಾಧಿಕಾರಿಗಳು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದನೆ ನೀಡಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಸಲ್ಲಿಸಬೇಕು. ವಸತಿ ನಿಗಮದಿಂದ ಪ್ರಸ್ತಾವನೆಗೆ ಅನುಮೋದನೆ ನೀಡಿ ಅಗತ್ಯ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಈ ಹಣವನ್ನು ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರ್‌ರವರಿಗೆ ನೀಡಿದ ನಂತರ ಅವರು ಜಮೀನನ್ನು ಖರೀದಿಸುತ್ತಾರೆ. ಹೀಗೆ ಖರೀದಿಸಿದ ಜಮೀನನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಹಸ್ತಾಂತರಿಸುತ್ತಾರೆ.



# ಭಾಗ್ಯಲಕ್ಷ್ಮಿ ಯೋಜನೆ

**ಕು**ಟುಂಬ ಹಾಗೂ ಸಮುದಾಯದಲ್ಲಿ ಹೆಣ್ಣು ಮಗುವಿಗೆ ಅವಕಾಶಗಳು ಹೆಚ್ಚಾಗಬೇಕು. ಅದರಲ್ಲೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹುಟ್ಟುವ ಹೆಣ್ಣುಮಕ್ಕಳ ಭವಿಷ್ಯ ಗಟ್ಟಿಗೊಳಿಸಲು ರಾಜ್ಯ ಸರ್ಕಾರ ಈ ವಿನೂತನ ಯೋಜನೆಯನ್ನು ತಂದಿದೆ. ಈ ಯೋಜನೆಯ ಉದ್ದೇಶ ಈ ಮುಂದಿನಂತಿದೆ.

- 31–03–2006ರ ನಂತರ ಹಾಗೂ 31–7–2008ರ ಅವಧಿಯಲ್ಲಿ ಜನಿಸಿದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.10,000 ಠೇವಣಿ ಇಡುವುದು.
- ಈ ಠೇವಣಿಯನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿ ಹೂಡಿ ಠೇವಣಿ ಮೇಲಿನ ಆದಾಯವನ್ನು ಹೆಚ್ಚಿಸುವುದು.
- ಠೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗಳಿಗೆ ನೀಡುವುದು.
- ಪ್ರತಿ ಹೆಣ್ಣು ಮಗುವಿಗೆ 18 ವರ್ಷ ತುಂಬಿದ ನಂತರ ರೂ.34,751 ಗಳನ್ನು ದೊರಕಿಸಿ ಕೊಡುವುದು.
- ಈ ಯೋಜನೆಯಡಿ ಬರುವ ಮಗುವಿಗೆ ವೈದ್ಯಕೀಯ ವಿಮೆ ಸೌಲಭ್ಯ ಹಾಗೂ ವಾರ್ಷಿಕ ವಿದ್ಯಾರ್ಥಿ ವೇತನ ಸೌಲಭ್ಯವನ್ನು ನೀಡುವುದು.
- ಈ ಯೋಜನೆಯಲ್ಲಿ ಪೋಷಕರಿಗೂ ಜೀವ ವಿಮಾ ಸೌಲಭ್ಯವಿದೆ.
- ಪೋಷಕರು ಅಪಘಾತಕ್ಕೆ ಒಳಗಾದರೆ ರೂ.1,00,000/– ಹಾಗೂ ಸ್ವಾಭಾವಿಕ ಮರಣ ಹೊಂದಿದರೆ ರೂ.42,500/–ಗಳನ್ನು ಪಡೆಯ–ಬಹುದಾಗಿದೆ.
- 1–8–2008ರ ನಂತರ ಹುಟ್ಟಿದ ಮೊದಲ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.19,300/–ಗಳನ್ನು ಹಾಗೂ ಎರಡನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.18,350/–ಗಳನ್ನು ಜೀವ ವಿಮಾ ನಿಗಮದಲ್ಲಿ ಠೇವಣಿ ಹೂಡಲಾಗುವುದು.



- ಇದರಿಂದ ಈ ಹೆಣ್ಣು ಮಕ್ಕಳಿಗೆ 18 ವರ್ಷ ತುಂಬಿದ ನಂತರ ರೂ.1,00,052/–ಗಳನ್ನು ಹಾಗೂ 15ನೇ ವರ್ಷದಲ್ಲಿ ಸಾಲವಾಗಿ ರೂ.50,000/–ಗಳನ್ನು ಸಹ ನೀಡಲಾಗುವುದು.



# ವಿಕೋಪಗಳ ನಿರ್ವಹಣೆ – ಗ್ರಾಮ ಪಂಚಾಯಿತಿಯ ಪಾತ್ರ

ವಿಕೋಪಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವುಗಳು ಮತ್ತು ಆಸ್ತಿಪಾಸ್ತಿ ನಷ್ಟ ಸಂಭವಿಸುತ್ತವೆ. ಇಂತಹ ಸಂದರ್ಭಗಳಲ್ಲಿ ವಿಕೋಪ ನಿರ್ವಹಣೆ ಕಾರ್ಯವನ್ನು ಕೈಗೆತ್ತಿಗೊಳ್ಳುವುದು ವಿಳಂಬವಾದಾಗ ಉಂಟಾಗುವ ನಷ್ಟದ ಪ್ರಮಾಣ ಇನ್ನೂ ಹೆಚ್ಚು. ವಿಕೋಪಗಳ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ ಬಹುಮುಖ್ಯ. ಗ್ರಾಮ ಪಂಚಾಯಿತಿಗಳು ಸ್ಥಳೀಯ ಸಮುದಾಯ, ಕ್ಷೇತ್ರ ಸಿಬ್ಬಂದಿ ಹಾಗು ಸ್ವಯಂ ಸೇವಾ ಸಂಘಟನೆಗಳ ನೆರವನ್ನು ಪಡೆದುಕೊಂಡು ಸಂರಕ್ಷಣೆ, ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಕೈಗೆತ್ತಿಗೊಳ್ಳಬೇಕು. ಸ್ಥಳೀಯ ಅಗತ್ಯತೆಗಳಿಗೆ ಅನುಗುಣವಾಗಿ ತಕ್ಷಣ ನಿರ್ಧಾರಗಳನ್ನು ಕೈಗೆತ್ತಿಕೊಳ್ಳಬೇಕು. ಅಪಾಯಗೊಳಕ್ಕಾದ ಜನರನ್ನು ಗುರುತಿಸಿ ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.



**ಜನರಿಗೆ ಸಂಕಷ್ಟ ತರುವ ನೆರೆ ಹಾವಳಿ**

**ವಿಕೋಪ ಅಥವಾ ವಿಪತ್ತುಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು.**

1. **ನೈಸರ್ಗಿಕ ವಿಕೋಪ:** ಇದು ಪ್ರಕೃತಿದತ್ತವಾಗಿ ಬರುವ ವಿಕೋಪ. ಉದಾ: ಭೂಕಂಪ, ಪ್ರವಾಹ, ಭೂಕುಸಿತ, ಬರ, ಬಿರುಗಾಳಿ, ಸುನಾಮಿ ಇತ್ಯಾದಿ
2. **ಮಾನವ ನಿರ್ಮಿತ ವಿಕೋಪ:** ಇದು ಮಾನವನ ಹಸ್ತಕ್ಷೇಪದಿಂದ ಉಂಟಾಗುವ ವಿಕೋಪ. ಉದಾ: ವಿಷಾನಿಲ ಸೋರಿಕೆ, ಬೆಂಕಿ ಅಪಘಾತ, ದೊಡ್ಡ ವಾಹನ ಅಪಘಾತಗಳು ಇತ್ಯಾದಿ



**ಕರ್ನಾಟಕದಲ್ಲಿ ವಿಕೋಪ ಸ್ಥಿತಿ ಹೇಗಿದೆ?**

ರಾಜ್ಯದ ಸುಮಾರು 152 ಲಕ್ಷ ಹೆಕ್ಟೇರ್ ಪ್ರದೇಶ ಬರದ ಪ್ರಭಾವಕ್ಕೆ ಸಿಲುಕಿದೆ. ಭೂಕಂಪದ ವಿಷಯದಲ್ಲಿಯೂ ಸಹ ರಾಜ್ಯವು ಸುರಕ್ಷಿತವಾಗಿಲ್ಲ. ರಾಜ್ಯದ ಶೇ.23ರಷ್ಟು ಭಾಗ ಭೂಕಂಪದ ಗಂಡಾಂತರಕ್ಕೆ ಒಳಪಟ್ಟಿದೆ. ಸುಮಾರು 15 ಜಿಲ್ಲೆಗಳು ಪ್ರವಾಹ, ಬಿರುಗಾಳಿ ಮತ್ತು ಚಂಡಮಾರುತದಂತಹ ವಿಕೋಪಗಳಿಗೆ ತುತ್ತಾಗುತ್ತಿವೆ. ರಾಜ್ಯದ ಕರಾವಳಿ ಪ್ರದೇಶಗಳು ಆಗಾಗ್ಗೆ ಕಡಲು ಕೊರೆತ, ಚಂಡಮಾರುತ, ಬಿರುಗಾಳಿ, ಮಳೆಯಂತಹ ವಿಕೋಪ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ಆಗಾಗ್ಗೆ ಭೂಕುಸಿತ ಸಂಭವಿಸುತ್ತದೆ. ಹೀಗೆ ಒಂದಲ್ಲ ಒಂದು ರೀತಿಯ ವಿಕೋಪದ ಸಮಸ್ಯೆಗಳನ್ನು ಕರ್ನಾಟಕ ರಾಜ್ಯವು ಎದುರಿಸುತ್ತಿದೆ.

**ವಿಕೋಪ ನಿರ್ವಹಣೆಯಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ**

ವಿಕೋಪ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸದಿದ್ದಲ್ಲಿ ವಿಕೋಪ ಪೀಡಿತ ಪ್ರದೇಶಗಳ ಅಭಿವೃದ್ಧಿ ಕುಂಠಿತವಾಗುತ್ತದೆ. ವಿಕೋಪದ ನಂತರ ಪುನರ್ವಸತಿ ಕಾರ್ಯಕ್ರಮವನ್ನು ಹಾಗು ಪರಿಹಾರ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿದರೆ ತ್ವರಿತಗತಿಯ ಅಭಿವೃದ್ಧಿಯನ್ನು ಸಾಧಿಸಬಹುದು. ವಿಕೋಪ ನಿರ್ವಹಣೆಯನ್ನು ಮೂರು ಹಂತಗಳಲ್ಲಿ ಗುರುತಿಸಬಹುದಾಗಿದೆ.

**1. ವಿಕೋಪ ಪೂರ್ವ ಸಿದ್ಧತೆ ಮತ್ತು ಸಂರಕ್ಷಣಾ ಕ್ರಮಗಳು**

- ಅಪಾಯಕ್ಕೆ ಒಳಪಡಬಹುದಾದ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸುವುದು. ಇದರೊಂದಿಗೆ ಅಪಾಯಗಳಿಗೆ ಕುರಿತಂತೆ ಲಭ್ಯವಿರುವ ಮಾಹಿತಿಯನ್ನು ಇತರ ಮೂಲಗಳಿಂದ ಸಂಗ್ರಹಿಸಬೇಕು. (ಉದಾ: ಮಾಧ್ಯಮಗಳ ವರದಿಗಳು, ಅಪಾಯ ಪ್ರದೇಶಗಳ ಭೂಪಟಗಳ ಮಾಹಿತಿ, ಅಂತರ್ಜಾಲ ವರದಿ ಇತ್ಯಾದಿ) ವಿಕೋಪ ಸಂಭವಿಸಿದರೆ ಉಂಟಾಗುವ ಅಪಾಯ, ಅದರಿಂಟಾಗುವ ನಷ್ಟ, ವಿಕೋಪದ ಪ್ರಮಾಣ ಮತ್ತು ದುಷ್ಪರಿಣಾಮದ ವಿಶ್ಲೇಷಣೆಯನ್ನು ಮಂಚಿತವಾಗಿ ಸಿದ್ಧ ಮಾಡಿಕೊಡಿ ಇಟ್ಟುಕೊಳ್ಳಬೇಕು
- ಪರಿಹಾರ, ಸುರಕ್ಷಣೆ ಹಾಗು ಪುನರ್ವಸತಿ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುವಂತಹ ಸಂಘ ಸಂಸ್ಥೆಗಳನ್ನು ಗುರುತಿಸಿ ಪಟ್ಟಿ ಮಾಡಿ ಇಟ್ಟುಕೊಳ್ಳುವುದು
- ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳನ್ನು ಪಟ್ಟಿ ಮಾಡುವುದು. ಅಂದರೆ ಮಾನವ ಸಂಪನ್ಮೂಲ, (ಲಭ್ಯವಾಗುವ ಸಿಬ್ಬಂದಿ, ವಿಕೋಪ ನಿರ್ವಹಣೆ ಪಡೆ, ಸ್ವಯಂ ಸೇವಾ ಸಂಸ್ಥೆಗಳ ನೆರವು, ಅಗ್ನಿಶಾಮಕ ಪಡೆ, ವೈದ್ಯರ ಪಡೆ ಇತ್ಯಾದಿ) ಆರ್ಥಿಕ ಸಂಪನ್ಮೂಲ, (ಜಿಲ್ಲಾ/ ತಾಲ್ಲೂಕು ಪಂಚಾಯಿತಿಗಳಿಂದ ದೊರೆಯಬಹುದಾದ ನಿಧಿ, ಗ್ರಾಮ ಪಂಚಾಯತಿಯ ನೆರವು,



ಸಾರ್ವಜನಿಕರಿಂದ ಸಂಗ್ರಹಿಸಬಹುದಾದ ಹಣ, ಆಹಾರ ಸಂಗ್ರಹಣೆ ಇತ್ಯಾದಿ) ಲಭ್ಯವಿರುವ ಸುರಕ್ಷಿತ ವಸತಿ ಪ್ರದೇಶ, ವಾಹನಗಳು, ಇತ್ಯಾದಿಯನ್ನು ಮುಂಚಿತವಾಗಿಯೇ ಪಟ್ಟಿ ಮಾಡಿಟ್ಟುಕೊಳ್ಳಬೇಕು

## 2. ವಿಕೋಪ ಸಮಯದಲ್ಲಿ ತೆಗೆದುಕೊಳ್ಳುವ ಕ್ರಮಗಳು

ವಿಕೋಪ ಸಂದರ್ಭಗಳಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಪೂರ್ವತಯಾರಿ ಮಾಡಿರಬೇಕು. ಇಂತಹ ಸಮಯದಲ್ಲಿ ಸಂಭವಿಸಬಹುದಾದ ಜನಹಾನಿ, ಪ್ರಾಣಿಹಾನಿಗಳನ್ನು ತಪ್ಪಿಸಲು ಹಾಗು ಆಸ್ತಿ-ಪಾಸ್ತಿಗಳನ್ನು ಸಂರಕ್ಷಿಸಲು ಲಭ್ಯವಿರುವ ಸಮಯ ಕಡಿಮೆ ಇರುವುದರಿಂದ ಎಚ್ಚರಿಕೆಯಿಂದ ಕಾರ್ಯಪ್ರವೃತರಾಗಬೇಕು. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ನಿರ್ವಹಿಸಬಹುದಾದ ಕ್ರಮಗಳ ವಿವರ ಈ ಕೆಳಕಂಡಂತಿದೆ

- ವಿಕೋಪ ಸಂದರ್ಭಗಳಲ್ಲಿ ವಿಕೋಪ ನಿರ್ವಹಣಾ ಘಟಕದೊಂದಿಗೆ ನಿರಂತರ ಸಂಪರ್ಕ ಹೊಂದಿರಬೇಕು
- ಸಾರ್ವಜನಿಕರಿಗೆ ತುರ್ತು ಎಚ್ಚರಿಕೆ ನೀಡಬೇಕು. ಘಟನೆಯ ಕುರಿತು ಸರಿಯಾದ ಪ್ರಚಾರ ನೀಡಬೇಕು
- ಹಾನಿಗೊಳಗಾದ ಆಸ್ತಿಪಾಸ್ತಿಯ ಮೌಲ್ಯಮಾಪನ ಮಾಡಲು ಸಹಕರಿಸುವುದು
- ವಿಕೋಪ ಸಂದರ್ಭಗಳಲ್ಲಿ ಜೀವಹಾನಿ ನಡೆದ ಸಂದರ್ಭಗಳಲ್ಲಿ ಶೋಧ ಮತ್ತು ರಕ್ಷಣೆಯ ಕಾರ್ಯದಲ್ಲಿ ಪಾಲ್ಗೊಳುವುದು
- ವೈದ್ಯಕೀಯ ಸೌಲಭ್ಯ ಅಗತ್ಯವಿರುವವರಿಗೆ ವೈದ್ಯರ/ ವೈದ್ಯಕೀಯ ನೆರವು ಕಲ್ಪಿಸಲು ನೆರವಾಗುವುದು
- ನಿರ್ವಹಣಾ ಘಟಕದ ಸಿಬ್ಬಂದಿಗೆ ಅಗತ್ಯವಿರುವ ಸಾಮಗ್ರಿ, ಸಲಕರಣೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಒದಗಿಸಲು ನೆರವಾಗುವುದು
- ವಿಕೋಪಕ್ಕೆ ತುತ್ತಾದವರಿಗೆ ತಾತ್ಕಾಲಿಕವಾಗಿ ವಸತಿ ಕಲ್ಪಿಸುವುದು
- ಶುದ್ಧ ಕುಡಿಯುವ ನೀರು/ ಸಮತೋಲನ ಆಹಾರ ಒದಗಿಸಲು ಸಹಕಾರ ನೀಡುವುದು
- ಕಾನೂನು ಪಾಲನೆ ಮತ್ತು ನಿರ್ವಹಣೆಯಲ್ಲಿ ಸಹಕರಿಸುವುದು
- ಸಾರ್ವಜನಿಕರ ಕುಂದುಕೊರತೆಗಳ ನಿರ್ವಹಣೆಗೆ ಸಹಕರಿಸುವುದು

## 3. ವಿಕೋಪ ನಂತರದ ಕ್ರಮಗಳು (ಪುನರ್ವಸತಿ)

ವಿಕೋಪದಂತಹ ದುರ್ಘಟನೆಯಿಂದ ಹೊರಬರಲು ಹಾಗು ಯಥಾಸ್ಥಿತಿಯನ್ನು ಸ್ಥಾಪಿಸಲು ಆದ್ಯತೆ ನೀಡಬೇಕು. ಪುನರ್ವಸತಿ ಕಲ್ಪಿಸುವಾಗ ಅಲ್ಪಾವಧಿ ಹಾಗು ದೀರ್ಘಾವಧಿ ಕಾರ್ಯಕ್ರಮಗಳನ್ನು






ನಿರ್ಗತಿಕರಿಗೆ ತಕ್ಷಣದ ಪರಿಹಾರ

ಅಳವಡಿಸಬೇಕು. ಈ ರೀತಿ ಹಮ್ಮಿಕೊಳ್ಳುವ ಯೋಜನೆಗಳಿಂದ ಹಾನಿಗೊಳಗಾದ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿ ಸಾಧ್ಯವಾಗಬೇಕು. ಇದನ್ನು ಸಾಧಿಸಲು ಈ ಕೆಳಗಿನ ಅಂಶಗಳ ಕುರಿತು ಗ್ರಾಮ ಪಂಚಾಯಿತಿಗಳು ಕ್ರಮ ವಹಿಸಬೇಕು.

- ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಯಥಾಸ್ಥಿತಿಗೆ ತರಲು ಸಹಕರಿಸುವುದು.
- ಸಾಮಾಜಿಕ ಸೌಕರ್ಯಗಳು/ ಸೇವೆಗಳನ್ನು ಒದಗಿಸುವ ಕಟ್ಟಡಗಳು ನಾಶ ಹೊಂದಿದ್ದರೆ ಪುನರ್ ನಿರ್ಮಾಣಕ್ಕೆ ಆದ್ಯತೆ ನೀಡುವಂತೆ ಸಂಬಂಧಪಟ್ಟವರಿಗೆ ಮನವರಿಕೆ ಮಾಡುವುದು.
- ಬಿದ್ದು ಹೋದ ಕಟ್ಟಡಗಳು ಹಾಗು ಅತ್ಯವಶ್ಯ ಕಟ್ಟಡಗಳನ್ನು ರಿಪೇರಿ ಮಾಡಿಸಲು ಕ್ರಮ ವಹಿಸುವುದು.
- ವಿಮೆ ಸೌಲಭ್ಯವನ್ನು ಅರ್ಹರಿಗೆ ಕೊಡಿಸಲು ನೆರವಾಗುವುದು.
- ವೈದ್ಯಕೀಯ ಸೌಲಭ್ಯ ನಿರಂತರವಾಗಿ ದೊರೆಯುವಂತೆ ಕಾಳಜಿ ವಹಿಸುವುದು.
- ಜೀವನೋಪಾಯ ನಿರ್ವಹಣೆಗಾಗಿ ಅಗತ್ಯವಿರುವವರಿಗೆ ಉದ್ಯೋಗ ಕಲ್ಪಿಸಿಕೊಡಲು ಅಥವಾ ಸರ್ಕಾರದ ನೆರವಿನಿಂದ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ವ್ಯವಸ್ಥೆ ಮಾಡುವುದು.
- ವಿಕೋಪಕ್ಕೆ ತುತ್ತಾಗಿ ಮಾನಸಿಕ ಸ್ಥೈರ್ಯ ಕಳೆದುಕೊಂಡವರಿಗೆ ಆತ್ಮಸ್ಥೈರ್ಯ ಮೂಡಿಸುವಂತಹ ಮನೋಚಿಕಿತ್ಸೆ ನೆರವು ನೀಡುವುದು.



## ವಿಕೋಪ ಸಂದರ್ಭದಲ್ಲಿ ಸಮುದಾಯದ ಪಾತ್ರ ಮತ್ತು ಜವಾಬ್ದಾರಿ

ವಿಕೋಪ ಸಮಯದಲ್ಲಿ ಸಾಮಾನ್ಯವಾಗಿ ಸಾರ್ವಜನಿಕರು ಆತಂಕಗೊಳಗಾಗುತ್ತಾರೆ. ಗಾಬರಿಯಿಂದ ವರ್ತಿಸುತ್ತಾರೆ. ಈ ಸಂದರ್ಭದಲ್ಲಿ ಸಮುದಾಯಕ್ಕೆ ಸೂಕ್ತ ತಿಳುವಳಿಗೆ ಮತ್ತು ಮಾರ್ಗದರ್ಶನದ ಅವಶ್ಯಕತೆ ಇದೆ. ಗ್ರಾಮ ಪಂಚಾಯತಿ ಈ ನಿಟ್ಟಿನಲ್ಲಿ ಜವಾಬ್ದಾರಿ ವಹಿಸಬೇಕು. ಸಮುದಾಯಕ್ಕೆ ಈ ಕೆಳಕಂಡ ವಿಷಯಗಳ ಕುರಿತು ಮಾರ್ಗದರ್ಶನ ನೀಡಬೇಕು.

- ವಿಕೋಪ ಸನ್ನಿವೇಶದಲ್ಲಿ ಸಾರ್ವಜನಿಕರು ಯಾವುದೇ ರೀತಿಯ ಗಾಳಿ ಸುದ್ದಿಗೆ ಕಿವಿಗೊಡದೆ ತಾಳ್ಮೆ ಮತ್ತು ಸಂಯಮದಿಂದ ವರ್ತಿಸಬೇಕು.
- ವಿಕೋಪ ಸಂದರ್ಭಗಳಲ್ಲಿ ಎಲ್ಲಾ ರೀತಿಯ ಸಂಪರ್ಕಗಳು ಕಡಿದು ಹೋಗಬಹುದು. ಅಂತಹ ಸಂದರ್ಭಗಳಲ್ಲಿ ರೇಡಿಯೋ ಮಾರ್ಗದರ್ಶಿಯಂತೆ ಕೆಲಸ ನಿರ್ವಹಿಸುವುದರಿಂದ ರೇಡಿಯೋ ಕೇಳುವ ಅಭ್ಯಾಸ ಬೆಳೆಸಿಕೊಳ್ಳುವುದು.
- ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ಸಮಯದಲ್ಲಿ ನುರಿತ ತಜ್ಞರ ಸಲಹೆ ಮತ್ತು ಮಾರ್ಗದರ್ಶನ ಪಾಲಿಸುವುದು.
- ನೆರವು ನೀಡಲು ಮುಂದಾಗುವ ವ್ಯಕ್ತಿಗಳು/ ಸಂಘ ಸಂಸ್ಥೆಗಳು/ ಸರ್ಕಾರದ ಪ್ರತಿನಿಧಿಗಳಿಗೆ ಸ್ಪಷ್ಟವಾದ ಮಾಹಿತಿ ನೀಡುವುದು.
- ಸ್ಥಳದಲ್ಲಿ ಲಭ್ಯವಿರುವ ಅಥವಾ ಭೇಟಿ ಕೊಟ್ಟ ವೈದ್ಯರ ನೆರವನ್ನು ಪಡೆದುಕೊಂಡು ಅವರ ಸಲಹೆಗಳನ್ನು ಪಾಲಿಸುವುದು.
- ಹಾನಿಗೊಳಗಾದವರಿಗೆ ಶುದ್ಧ ಕುಡಿಯುವ ನೀರು ಮತ್ತು ಸಮತೋಲನ ಆಹಾರ ಒದಗಿಸುವಲ್ಲಿ ನೆರವಾಗುವುದು.
- ಪುನರ್ವಸತಿ ಕಲ್ಪಿಸಿರುವ ಸ್ಥಳವು ಆದಷ್ಟು ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದು.
- ವಿಕೋಪ ಸಂದರ್ಭಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿದುಹಾಕುವುದು ಸೂಕ್ತ. ಅದೇ ರೀತಿ ಗ್ಯಾಸನ್ನು ಬಂದ್ ಮಾಡಬೇಕು.
- ಬೆಲೆ ಬಾಳುವ ವಸ್ತುಗಳನ್ನು ಸುರಕ್ಷಿತವಾದ ಸ್ಥಳಗಳಿಗೆ ಸ್ಥಳಾಂತರಿಸಬೇಕು.



# ಕೇಂದ್ರ ಹಣಕಾಸು ಆಯೋಗದ ಅನುದಾನ

**ಪಂ**ಚಾಯಿತಿ ರಾಜ್ ಸಂಸ್ಥೆಗಳಿಗೆ ಲಭ್ಯವಾಗುವ ಅನುದಾನಗಳಲ್ಲಿ ಕೇಂದ್ರ ಹಣಕಾಸು ಆಯೋಗದ ಅನುದಾನವು ಪ್ರಮುಖವಾಗಿದೆ. ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೇಂದ್ರದ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿವರ್ಷ ನಿಗದಿತ ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿಗಳೂ ಕೂಡ ಈ ಅನುದಾನವನ್ನು ನಿಯಮಿತವಾಗಿ ಪಡೆಯುತ್ತವೆ. ಕೇಂದ್ರ ಸರಕಾರವು ಬಿಡುಗಡೆ ಮಾಡುವ ಈ ಅನುದಾನದ ಕುರಿತು ವಿವರಗಳನ್ನು ಮುಂದೆ ನೀಡಲಾಗಿದೆ.

10ನೇ ಕೇಂದ್ರ ಹಣಕಾಸು ಆಯೋಗವು ಸಂವಿಧಾನದ 73ನೇ ಹಾಗೂ 74ನೇ ತಿದ್ದುಪಡಿಯ ನಂತರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ನೀಡುವುದರ ಮೂಲಕ ಬೆಂಬಲ ನೀಡಿದ ಪ್ರಥಮ ಹಣಕಾಸು ಆಯೋಗವಾಗಿದೆ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಪಂಚಾಯಿತಿ ರಾಜ್ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಜನತೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನೇರ ಜವಾಬ್ದಾರಿಯನ್ನು ಹೊಂದಿವೆ. ಈ ಜವಾಬ್ದಾರಿಯನ್ನು ಹಸ್ತಾಂತರಿಸುವುದರ ಜೊತೆಗೆ ಆರ್ಥಿಕವಾಗಿಯೂ ಸದೃಢಗೊಳಿಸುವ ನಿಟ್ಟಿನಲ್ಲಿ ಹತ್ತನೇ ಹಣಕಾಸು ಆಯೋಗದ ಅವಧಿಯಿಂದ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ.

**10ನೇ ಹಣಕಾಸು ಆಯೋಗ: (1995ರಿಂದ 2000ದ ವರೆಗೆ)**

- ಹತ್ತನೇ ಹಣಕಾಸು ಆಯೋಗವು ಗ್ರಾಮೀಣ ಜನಸಂಖ್ಯೆಯ ಆಧಾರದ ಮೇಲೆ ಅನುದಾನ ಹಂಚಿಕೆಗೆ ಶಿಫಾರಸ್ಸು ಮಾಡಿದೆ.
- 10ನೇ ಹಣಕಾಸು ಆಯೋಗದ ಅವಧಿ – 1995ರಿಂದ 2000
- ಈ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ತಲಾನುದಾನವಾಗಿ ರೂ.2.00ರಂತೆ ತಾಲ್ಲೂಕು ಪಂಚಾಯಿತಿಗಳಿಗೆ ತಲಾನುದಾನವಾಗಿ ರೂ.3.00ರಂತೆ 1991ರ ಜನಗಣತಿ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು
- ರಾಷ್ಟ್ರೀಯ ಅಂಕಿಅಂಶಗಳ ಪ್ರಕಾರ 10ನೇ ಹಣಕಾಸು ಆಯೋಗದ ಅವಧಿಯಲ್ಲಿ ಎಲ್ಲಾ ರಾಜ್ಯಗಳ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ 4380.93 ಕೋಟಿ ರೂ.ಗಳನ್ನು ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ನಿಗದಿ ಮಾಡಲಾಗಿತ್ತು.
- ಈ ಪೈಕಿ ಪಂಚಾಯಿತಿ ರಾಜ್ ಸಂಸ್ಥೆಗಳು ರೂ.3576.35 ಕೋಟಿ ಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡಿರುತ್ತವೆ.



ಮೂಲ ಸೌಕರ್ಯಕ್ಕೆ ಆದ್ಯತೆ



**11ನೇ ಹಣಕಾಸು ಆಯೋಗ: (2000–01ರಿಂದ 2004–05ರ ವರೆಗೆ)**

- 11ನೇ ಹಣಕಾಸು ಆಯೋಗವು 1991ರ ಜನಗಣತಿ ಆಧಾರದ ಮೇಲೆ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯ ಒದಗಿಸಲು ಅನುದಾನವನ್ನು ನಿಗದಿಪಡಿಸಿತ್ತು.
- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ತಲಾ ಶೇ.70:20:10ರ ಅನುಪಾತದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು.
- ಹನ್ನೊಂದನೇ ಹಣಕಾಸು ಆಯೋಗದ ಅವಧಿ – 2000–01ರಿಂದ 2004–05
- ಈ ಅನುದಾನವನ್ನು ಪಂಚಾಯಿತಿ ರಾಜ್ ಸಂಸ್ಥೆಗಳು ಶಾಲಾ ಕಟ್ಟಡಗಳ ಅಭಿವೃದ್ಧಿ, ದುರಸ್ತಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪಶುವೈದ್ಯಕೀಯ ಆಸ್ಪತ್ರೆ ಕಟ್ಟಡಗಳ ದುರಸ್ತಿ, ರಸ್ತೆ, ಸುರಕ್ಷಿತ ಕುಡಿಯುವ ನೀರು, ಬೀದಿ ದೀಪ, ಚರಂಡಿ ವ್ಯವಸ್ಥೆ, ನೈರ್ಮಲೀಕರಣ, ಸ್ಮಶಾನ ಭೂಮಿ ಮತ್ತು ಶವದಹನ ಸ್ಥಳಗಳ ನಿರ್ವಹಣೆ, ಸಾರ್ವಜನಿಕ ಸೌಕರ್ಯಗಳು ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ (Common property resources) ಮುಂತಾದ ನಾಗರೀಕ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳಿಗೆ ಬಳಕೆ ಮಾಡುವಂತೆ ಮಾರ್ಗಸೂಚಿ ನೀಡಲಾಗಿತ್ತು.
- ರಾಷ್ಟ್ರೀಯ ಅಂಕಿ–ಅಂಶಗಳ ಪ್ರಕಾರ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ನಿಗದಿಪಡಿಸಿದ ಒಟ್ಟು ಮೊತ್ತ ರೂ.8000 ಕೋಟಿ



- ಪಂಚಾಯಿತಿ ರಾಜ್ ಸಂಸ್ಥೆಗಳು ಬಳಸಿಕೊಂಡಿರುವ ಮೊತ್ತ ರೂ. 6601.85 ಕೋಟಿ

**12ನೇ ಹಣಕಾಸು ಆಯೋಗ (2005ರಿಂದ 2009ರ ವರೆಗೆ)**

ಆಯೋಗದ ಅವಧಿಯನ್ನು 2005ರಿಂದ 2009ರವರೆಗೆ ನಿಗದಿಪಡಿಸಲಾಗಿದೆ (1–4–2005ರಿಂದ 6–11–2009 ರವರೆಗೆ) ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ನಾಗರೀಕ ಸೌಲಭ್ಯ ಕಾರ್ಯಕ್ರಮಗಳಿಗಾಗಿ ತಲಾ ಶೇ.70:20:10 ರ ಅನುಪಾತದಂತೆ ಅನುದಾನವನ್ನು ಹಂಚಲಾಗಿದೆ. ಗ್ರಾಮ ಪಂಚಾಯಿತಿಗಳಿಗೆ ಲಭ್ಯವಾಗುವ ಅನುದಾನವನ್ನು ಈ ಕೆಳಕಂಡ ಮಾರ್ಗಸೂಚಿಯಾನುಸಾರ ಬಳಸಲು ಮಾರ್ಗಸೂಚಿಯನ್ನು ನೀಡಲಾಗಿದೆ.

**ಗ್ರಾಮ ಪಂಚಾಯಿತಿ**

1. ನೀರು ಸರಬರಾಜು ಯೋಜನೆಗಳಡಿ ದುರಸ್ತಿ, ಆಧುನೀಕರಣ ಹಾಗೂ ನಿರ್ವಹಣೆ.
2. ನೈರ್ಮಲ್ಯ ಕಾರ್ಯಕ್ರಮಗಳಾದ ಒಳಚರಂಡಿ ಹಾಗೂ ಪಾದಚಾರಿ ರಸ್ತೆಗಳು
3. ನೀರು ಸರಬರಾಜು ಯೋಜನೆ, ನೈರ್ಮಲ್ಯ ಅಭಿವೃದ್ಧಿ ಹಾಗೂ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ.
4. ಬಡಕುಟುಂಬಗಳಿಗೆ ಮಳೆ ನೀರು ಕೊಯ್ಲು ಪದ್ದತಿಯನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವುದು.
5. ಊರಿಗೊಂದು ಕೆರೆ, ಊರಿಗೊಂದು ವನ ನಿರ್ಮಾಣ
6. ಗ್ರಾಮ ಪಂಚಾಯತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕ ಪತ್ರ ನಿರ್ವಹಣೆ ಮತ್ತು ಸೃಜನೆ.
7. ಗ್ರಾಮ ಪಂಚಾಯತಿಗಳ ಕಟ್ಟಡಗಳ ನಿರ್ಮಾಣ.

ಈ ಹಣಕಾಸು ಆಯೋಗದ ಅವಧಿಯಲ್ಲಿ ಕರ್ನಾಟಕ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ 71040 ಲಕ್ಷ ರೂ.ಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಲಾಗಿದೆ.

**13ನೇ ಹಣಕಾಸು ಆಯೋಗ (2010–11 – 2014–15)**

- 13ನೇ ಹಣಕಾಸು ಆಯೋಗದ ಅವಧಿ – 2010–11ರಿಂದ 2014–15
- ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಮೂಲ ಬೇಡಿಕೆಗಳನ್ನು ಈಡೇರಿಸಲು ಅಶಕ್ಯರಾಗಿದ್ದು, ಆಯೋಗವು ಹೆಚ್ಚಿನ ಅನುದಾನವನ್ನು ಒದಗಿಸಬೇಕೆಂದು ಎಲ್ಲಾ ರಾಜ್ಯಗಳೂ ಹಣಕಾಸು ಆಯೋಗದ ಮುಂದೆ ಪ್ರಸ್ತಾವನೆ ಸಲ್ಲಿಸಿವೆ.
- ಮೂಲ ಸೇವಾ ವಲಯಗಳಾದ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಘನ ತ್ಯಾಜ್ಯ ನಿರ್ವಹಣೆ,



ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿ ಉತ್ತಮ ಸೇವೆಯನ್ನು ಒದಗಿಸಲು ಹೆಚ್ಚಿನ ಅನುದಾನಕ್ಕಾಗಿ ಕೋರಲಾಗಿದೆ.

- ಪಂಚಾಯಿತಿ ರಾಜ್ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆಗಾಗಿ ಮೂಲಭೂತ ಸೌಕರ್ಯಗಳಾದ ಕಛೇರಿ ಕಟ್ಟಡಗಳು, ಲೆಕ್ಕಪತ್ರ ನಿರ್ವಹಣೆ ಹಾಗೂ ಮಾಹಿತಿ ನಿರ್ವಹಣೆಗಾಗಿ ಸಿಬ್ಬಂದಿ ಸೌಲಭ್ಯ ಇವುಗಳಿಗಾಗಿಯೂ ಸಹ ಬೆಂಬಲವನ್ನು ಕೋರಲಾಗಿದೆ.
- ಕೇಂದ್ರ ಸರ್ಕಾರದ ಪಂಚಾಯಿತಿ ರಾಜ್ ಸಚಿವಾಲಯವೂ ಸಹ ಪಂಚಾಯಿತಿ ರಾಜ್ ಸಂಸ್ಥೆಗಳು ಪರಿಣಾಮಕಾರಿಯಾಗಿ ಗ್ರಾಮೀಣ ಜನತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಗಳಿಗೆ ಹೆಚ್ಚಿನ ಧನ ಸಹಾಯವನ್ನು ನೀಡಬೇಕೆಂದು ಶಿಫಾರಸ್ಸು ಮಾಡಿದೆ.
- ಹದಿಮೂರನೇ ಹಣಕಾಸು ಆಯೋಗವು 5 ವರ್ಷಗಳ ಅವಧಿಗೆ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 87519.00 ಕೋಟಿ ರೂಗಳ ಅನುದಾನವನ್ನು ಶಿಫಾರಸ್ಸು ಮಾಡಿದೆ.
- ಅನುದಾನವನ್ನು ಸಾಮಾನ್ಯ ಅನುದಾನ ಹಾಗೂ ಕಾರ್ಯ ನಿರ್ವಹಣಾ ಆಧಾರದ ಮೇಲೆ ಬಿಡುಗಡೆ ಮಾಡುವ ಅನುದಾನ ಎಂದು ಎರಡು ಭಾಗಗಳಲ್ಲಿ ನೀಡಲಾಗುವುದು.
- 2011–12ರಿಂದ ಕಾರ್ಯ ನಿರ್ವಹಣೆಯ ಆಧಾರದ ಮೇಲೆ ಅನುದಾನ ನೀಡಲು ಪ್ರಾರಂಭಿಸಲಾಗುವುದು. ಕಾರ್ಯ ನಿರ್ವಹಣೆಯ ಮಾನದಂಡಗಳು:
    - ಸ್ಥಳೀಯ ಸಂಸ್ಥೆಗಳ ಉತ್ತಮ ಆಯವ್ಯಯ ನಿರ್ವಹಣೆ
    - ಲೆಕ್ಕ ಪತ್ರ ನಿರ್ವಹಣೆ
    - ಸ್ವತಂತ್ರ ಓಂಬಡ್ಸ್‌ಮನ್ ವ್ಯವಸ್ಥೆಯ ಜಾರಿ
    - ಹಣಕಾಸಿನ ವಿಳಂಬರಹಿತ ವಿದ್ಯುನ್ಮಾನ ವರ್ಗಾವಣೆ
    - ರಾಜ್ಯ ಹಣಕಾಸು ಆಯೋಗದ ಸದಸ್ಯರ ನೇಮಕಾತಿ ಕುರಿತಂತೆ ಸಂವಿಧಾನ ನಿಗದಿತ ಅಂಶಗಳ ಪಾಲನೆ
    - ಸ್ಥಳೀಯ ಸಂಸ್ಥೆಗಳು ತೆರಿಗೆ ವಿಧಿಸುವ ಸಾಮರ್ಥ್ಯವನ್ನು ವೃದ್ಧಿಸುವುದು
    - ಅಗತ್ಯ ಸೇವೆಗಳ ಪೂರೈಕೆಯಲ್ಲಿ ಸ್ಥಳೀಯ ಸಂಸ್ಥೆಗಳ ದಕ್ಷತೆ ಹೆಚ್ಚಿಸುವ ಕ್ರಮಗಳು

ಮೇಲಿನ ಅಂಶಗಳಿಗೆ ಸಂಬಂಧಿಸಿ ಕಾರ್ಯನಿರ್ವಹಣೆಯ ಆಧಾರದ ಮೇಲೆ ರಾಜ್ಯಗಳಿಗೆ ಎರಡನೆಯ ಭಾಗದ ಅನುದಾನವನ್ನು ನೀಡಲಾಗುವುದು. ಒಟ್ಟಾರೆ, ಪಂಚಾಯಿತಿ ರಾಜ್ ಸಂಸ್ಥೆಗಳು ಮೂಲಭೂತ ಸೇವೆಗಳನ್ನು ಒದಗಿಸುವ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಅನುದಾನವನ್ನು 2010–11ನೇ ಸಾಲಿನಿಂದ 2014–15 ರವರೆಗೆ ಒದಗಿಸಲಾಗುವುದು.

